
ನಾ.ಕಸ್ತೂರಿ

# ಪಾತಾಳದಲ್ಲಿ ಪಾಪಚ್ಚಿ



ನಾ. ಕಸ್ತೂರಿ, ಎಂ.ಎ., ಬಿ.ಎಲ್.



ಚಿತ್ರಕಾರರು :

ಎಂ. ವಿ. ಸೀತಾರಾಮಯ್ಯ, ಎಂ.ಎ.

ಬೆಂಗಳೂರು ಸಿಟಿ
ಮೋದಿ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು
೧೯೫೦

# ವಿವರ

# ಚಿತ್ರಗಳ ವಿವರ

# ಅ ರಿ ಕೆ

ಆಂಗ್ಲಭಾಷೆ ಪ್ರಚಾರದಲ್ಲಿರುವ ಪ್ರತಿಯೊಂದು ದೇಶದಲ್ಲಿಯೂ ಜನರಿಗೆ ಅಚ್ಚು ಮೆಚ್ಚಾಗಿರುವ "Alice's Adventures in Wonderland" ಎಂಬ ಗ್ರಂಥದ ಆಧಾರದಮೇಲೆ ಈ ಪುಸ್ತಕವನ್ನು ಬರೆದಿದ್ದೇನೆ. ಅಕ್ಷರಶಃ ಭಾಷಾಂತರವಮಾಡಿದ್ದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರ ಹೊಂದುವ ಅನೇಕ ಸನ್ನಿವೇಶಗಳನ್ನೂ ಆಂಗ್ಲಸಾಹಿತ್ಯವನ್ನರಿತ ವರಿಗೆ ಮಾತ್ರ ರುಚಿಸಬಹುದಾದ ಕೆಲವು ಹಾಸ್ಯಗಳನ್ನೂ ತಿಳಿದು ಕೊಳ್ಳಲು ವಾಚಕರಿಗೆ ತೊಂದರೆಯಾಗಬಹುದಾದ್ದರಿಂದ, ಸೂಕ್ತತೋರಿ ದಂತೆ, ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿದ್ದೇನೆ, ಕಥೆಯನ್ನು ಕೊಂಚ ಮಾರ್ಪಡಿಸಿದ್ದೇನೆ. ಈ ನನ್ನ ಸ್ವತಂತ್ರ ವರ್ತನೆಯಿಂದ ಮೂಲದ ಸ್ವಾರಸ್ಯಕ್ಕೆ ಹೆಚ್ಚು ಕುಂದು ಬಂದಿಲ್ಲವೆಂದು ನನ್ನ ಭಾವನೆ.

ಇಂಗ್ಲೀಷಿನಲ್ಲಿ ಈ ಕಥೆಯನ್ನು ಬರೆದವರು ಆಕ್ಸ್‌ಫರ್ಡ್ ವಿಶ್ವ ವಿದ್ಯಾನಿಲಯದಲ್ಲಿ ೧೮೫೫ ರಿಂದ ೧೮೮೧ ರ ವರೆಗೆ ಗಣಿತಶಾಸ್ತ್ರ ಬೋಧಕ ರಾಗಿದ್ದು ತಮ್ಮ ಸಂಶೋಧನಾಸಾಮರ್ಥ್ಯದಿಂದ ಆ ಶಾಸ್ತ್ರವನ್ನು ಬಹು ಮಟ್ಟಿಗೆ ಮುಂದುವರಿಸಿದ ಚಾರಲ್ಸ್ ಲುಟ್ವಿಗ್ ಡಾಡ್ಜ್‌ಸನ್ ಎಂಬವರು. ಗಣಿತ ಶಾಸ್ತ್ರಕ್ಕೂ ಮಕ್ಕಳ ಮನಸ್ಸನ್ನು ಸೆಳೆಯುಬಲ್ಲ ಸಾಹಿತ್ಯಕ್ಕೂ ಉತ್ತರ ದಕ್ಷಿಣ ಧ್ರುವಗಳಿಗಿರುವಷ್ಟು ಅಂತರ ಎಂದು ಹೇಳಬಹುದು. ಆದರೆ, ಡಾಡ್ಜ್‌ಸನ್ನರಲ್ಲಿ ಅವು ಎರಡೂ ಕೂಡಿತ್ತು. ಅವರು ಕೇವಲ ಶುಷ್ಕ ಪಂಡಿತರಾಗಿರಲಿಲ್ಲ; ನಗು ನಗುತ್ತಲೇ ಅನಾಯಾಸವಾಗಿ ಅವರ ವಿದ್ಯಾರ್ಥಿಗಳು ಕಠಿನವಾದ ವಿಷಯಗಳನ್ನೂ ಕೂಡ ಕಲಿಯುತ್ತಿದ್ದರಂತೆ. ಚಿಕ್ಕ ಪಾಠಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದಾಗಲೇ ಡಾಡ್ಜ್‌ಸನ್ ಅವರು ಸ್ನೇಹಿತರ ಮೇಲೂ ಸಹಪಾಠಿಗಳ ಮೇಲೂ ತುಂಟಪದ್ಯಗಳನ್ನು ಬರೆದು, ಹಾಸ್ಯಪೂರ್ಣವಾದ ಕಥೆಗಳನ್ನು ಕಟ್ಟಿ ಗೇಲಿ ಎಬ್ಬಿಸುತ್ತಿದ್ದರಂತೆ. ಕಾಲೇಜಿಗೆ ಬಂದು ಸೇರಿದಾಗಲಂತೂ ಅವರ ಹಾಸ್ಯಕ್ಕೂ ಭಾವನಾ ಶಕ್ತಿಗೂ ಒಂದು ಹೊಸ ಹುರುಪು ಬಂದಂತಾಯಿತು. ಅನೇಕ ಸಂವತ್ಸರ ಗಳ ಅಧ್ಯಾಪಕ ವೃತ್ತಿಯೂ ಕೂಡ ಅವರ ಉತ್ಸಾಹವನ್ನು ತಗ್ಗಿಸಲಿಲ್ಲ. ಆದರೆ, ಮೇಲು ಮೇಲೆ ಗಂಭೀರ ಸ್ವಭಾವದವರಾಗಿ ಕಂಡುಬಂದ

ಡಾಡ್ಜ್‌ಸನ್ ಅವರನ್ನು ಯಾರೂ ಕಥೆ ಪುಸ್ತಕಗಳ ಬರಹಗಾರರೆಂದು ಹೇಳುವುದಕ್ಕಾಗುತ್ತಿರಲಿಲ್ಲ. "ಓದ್ನೋ ಐಗಳ್ಕಟ್ನೋಂತಾರ ಸೂಳೆ ಕಾಲಿನ್ಗೊಲ್ಸ?" ಎಂದು ರತ್ನನ ಹಾಗೆ ಎಲ್ಲರೂ ಕೇಳಿದರು. ವಾಚಕರನ್ನು ಮತ್ತಷ್ಟು ಮರುಳುಮಾಡುವುದಕ್ಕಾಗಿ ಡಾಡ್ಜ್‌ಸನ್ ಅವರು ಇನ್ನೊಂದು ಉಪಾಯ ಹೂಡಿದರು. ಗಣಿತಶಾಸ್ತ್ರ ಸಂಶೋಧನೆ, ಲಘುಸಾಹಿತ್ಯ ರಚನೆ ಎಂಬ ಎರಡು ಕೆಲಸಗಳಿಗಾಗಿ ಅವರು ತಮ್ಮನ್ನೇ ಎರಡು ಬೇರೆ ಬೇರೆಯಾದ ವ್ಯಕ್ತಿಗಳನ್ನಾಗಿ ಮಾಡಿಕೊಂಡರು. ಅಂದರೆ, ಗಣಿತ ಗ್ರಂಥಗಳನ್ನು ಬರೆದದ್ದು ಪ್ರೊಫೆಸರ್ ಡಾಡ್ಜ್‌ಸನ್ ಎಂಬುವರು; ಇತರ ಗ್ರಂಥಗಳನ್ನು ಬರೆದದ್ದು ಲೂಯಿ ಕರೋಲ್ ಎಂಬ ಇನ್ನೊಬ್ಬರು—ಹೀಗೆ! ತನಗೂ ಲೂಯಿ ಕರೋಲ್ ಎಂಬವನಿಗೂ ಯಾವ ವಿಧವಾದ ಸಂಬಂಧವೂ ಇಲ್ಲವೆಂದು ಡಾಡ್ಜ್‌ಸನ್ ಅವರು ಸದಾ ಹೇಳುತ್ತಿದ್ದರು. ಕೊನೆಯತನಕ ಅದೇ ಹಠವನ್ನೇ ಸಾಧಿಸಿದರು. "Alice's Adventures in Wonderland" ಎಂಬ ಗ್ರಂಥವನ್ನು ೧೮೬೫ರಲ್ಲಿ ಲೂಯಿ ಕರೋಲರು ಪ್ರಕಟಿಸಿದರು. ಕೂಡಲೇ, ಅದು ಎಲ್ಲಾ ವಯಸ್ಸಿನ ಮಕ್ಕಳನ್ನೂ ಆಹ್ಲಾದಪಡಿಸಿದ್ದರಿಂದ, ಎಲ್ಲರೂ ಕರೋಲರನ್ನು ಕೊಂಡಾಡಿದರು. ಅದರ ಹಿಂದೆಯೇ ಪ್ರಕಟಿತವಾದ ಇನ್ನೂ ಅನೇಕ ಗ್ರಂಥಗಳು ಡಾಡ್ಜ್‌ಸನ್ ಅವರ ಕೀರ್ತಿಯನ್ನು ನಾನಾ ದೇಶಗಳಲ್ಲಿ ಹಬ್ಬಿಸಿದುವು. ಆದರೂ, ಕರೋಲ್ ಅವರು ಜನರ ಮುಂದೆ ಬಂದು ತಮ್ಮ ನಿಜಸ್ವರೂಪವನ್ನು ಬಹಿರಂಗಪಡಿಸಲಿಲ್ಲ. ಲೂಯಿ ಕರೋಲ್ ಎಂಬವನು ತಾನಲ್ಲ ಎಂದೇ ವಾದಿಸುತ್ತಾ ಬಂದರು!

ಪಾಪಚ್ಚಿಯ ಮೂಲವ್ಯಕ್ತಿಯಾದ "ಆಲಿಸ್ಸ"ಳ ಕಥೆಯನ್ನು ಇಂದು ಓದಿ ಆನಂದಿಸದಿರುವವರು ಅಪರೂಪ. ಪಾಶ್ಚಾತ್ಯ ದೇಶಗಳಲ್ಲಿ ಪ್ರತಿಯೊಂದು ಮಗುವಿಗೂ ಅವಳ ಪರಿಚಯವು ಚೆನ್ನಾಗಿ ಉಂಟು. ಕೇವಲ ಮಕ್ಕಳಿಗೆ ಮಾತ್ರವೇ ಅಲ್ಲ, ಎಲ್ಲ ವಯಸ್ಸಿನವರಿಗೂ ಅವಳು ಅಚ್ಚುಮೆಚ್ಚಾಗಿ ಪರಿಣಮಿಸಿದ್ದಾಳೆ. ಏಕೆಂದರೆ, ನಾವೆಲ್ಲರೂ ಅವಳಂತೆಯೇ ಹೆಚ್ಚು ಕಡಮೆ, ಸ್ವಪ್ನಜೀವಿಗಳು. ಅಲ್ಲದೆ, ಪ್ರಕೃತಿಯ ನಿಯಮಗಳೆಂಬ ವಜ್ರಶೃಂಖಲೆಗೊಳಗಾಗಿರುವ ನಮಗೆಲ್ಲರಿಗೂ ಕೆಲವು ವೇಳೆ ಬಿಡುಗಡೆಯ

ಹಂಬಲು ಬಾಧಿಸುತ್ತದೆ. "ಒಂದು ಕ್ಷಣವಾದರೂ ವೈವಿಧ್ಯಕಾದರೂ ಬಿಸಿಲಿದ್ದು ಮರವಿದ್ದು ನೆಳಲಿರದೆ ಹೋಗದೆ?....ಒಂದು ದಿನ ನೀರು ಸುಡಬಾರದೇ? ಒಂದುಸಲವಾದರೂ ಕಲ್ಲು ಹಕ್ಕಿಯು ತೆರದಿ ಹಾರಾಡಬಾರದೇ? ಒಂದು ಕ್ಷಣವಾದರೂ ದಾಸ್ಯನಿಯಮಗಳಳಿದು ಸ್ವಾತಂತ್ರ್ಯ, ಸ್ವಾಚ್ಛಂದ್ಯ, ಹುಚ್ಚಾಟವಾಗದೇ?" ಎಂದು ಪುಟ್ಟಪ್ಪನವರಿಗೆ ಅನ್ನಿಸಿದ ಹಾಗೆ ನಮಗೂ ಆಗಾಗ ಅನ್ನಿಸುತ್ತದೆ. ಆದ್ದರಿಂದಲೇ ಈ ವೈಜ್ಞಾನಿಕ ಯುಗದಲ್ಲಿಯೂ ಕೂಡ ಇಂಥಾ ಕಥೆಗಳನ್ನೋದಿ ಆನಂದಪಡುವವರ ಸಂಖ್ಯೆ ಹೆಚ್ಚುತ್ತಲೇ ಇರುವುದು....

ಸ್ವಭಾವತಃ ಸೋಮಾರಿಯಾದ ನನ್ನನ್ನು ಈ ಪುಸ್ತಕ ಬರೆಯಲು ಪದೇ ಪದೇ ತಿವಿದು ಎಚ್ಚರಿಸಿದ ನನ್ನ ಮಿತ್ರರಾದ ಶ್ರೀಮಾನ್ ಪುಟ್ಟಪ್ಪನವರಿಗೂ, ಬರೆದದ್ದನ್ನು ಓದಿನೋಡಿ ಅದಕ್ಕೆ ನಾಲ್ಕು ಜನರ ಮುಂದಿಡುವಷ್ಟು ಯೋಗ್ಯತೆಯನ್ನು ಕೊಡಲು ಸಹಾಯಮಾಡಿದ ನನ್ನ ಹಿತಚಿಂತಕರಾದ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರಿಗೂ, ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರಿಗೂ ವಂದನೆಗಳನ್ನರ್ಪಿಸುತ್ತೇನೆ. ಈ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ಅಂದವಾಗಿ ಬರೆದುಕೊಟ್ಟು ಒಣ ಕಥೆಗೆ ನೀರೆರೆದ ಶ್ರೀಮಾನ್ ಎಂ. ವಿ. ಸೀತಾರಾಮಯ್ಯನವರಿಗೆ ನಾನು ಚಿರಋಣಿಯಾಗಿದ್ದೇನೆ. ಕನ್ನಡ ಭಾಷೆಯನ್ನು ನನಗೆ ಕಲಿಸಿದವರು ಪುಟ್ಟಪ್ಪನವರಂಥ ಸ್ನೇಹಿತರು, ಮತ್ತು ಸೀತಾರಾಮಯ್ಯನವರಂಥ ನನ್ನ ಆಪ್ತ ವಿದ್ಯಾರ್ಥಿಗಳು. ಆದ್ದರಿಂದ, ಈ ನನ್ನ ಮೊದಲನೆಯ ಕನ್ನಡ ಗ್ರಂಥದ ಎರಡನೆಯ ಮುದ್ರಣ ಪ್ರಕಟವಾಗುವ ಈ ಅವಸರದಲ್ಲೂ ನಾನು ಅವರನ್ನು ಬಹಳ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಎಲ್ಲಕ್ಕಿಂತ ಮೇಲಾಗಿ ಈ ಪುಸ್ತಕವನ್ನು ಮತ್ತೆ ಅಚ್ಚುಹಾಕಿಸಿ, ಕನ್ನಡಿಗರ ಕೈಯಲ್ಲಿಡುವ ಸಾಹಸವನ್ನು ವಹಿಸಿರುವ ಶಿವಮೊಗ್ಗ ಕರ್ಣಾಟಕ ಸಂಘದ ಅಧಿಕಾರಿಗಳಿಗೆ ನಾನು ತುಂಬಾ ಕೃತಜ್ಞನಾಗಿರುತ್ತೇನೆ.

'ಅಶೋಕ', ವಿಲ್ಸನ್ ಗಾರ್ಡನ್ಸ್,
ಬೆಂಗಳೂರು,
೨೫—೬—೧೯೫೦.

ನಾ. ಕಸ್ತೂರಿ.

# ಪಾತಾಳದಲ್ಲಿ ಪಾಪಚ್ಚಿ

## ಮೊಲದ ಬಿಲ

ಪಾಪ! ಪಾಪಚ್ಚಿ ಅಕ್ಕನ ಹತ್ತಿರ ಹುಲ್ಲಿನ ಮೇಲೆ ಎಷ್ಟು ಹೊತ್ತು ಸುಮ್ಮನೆ ಕುಳಿತಿದ್ದಾಳು! ಒಂದೆರಡು ಸಲ ಬಹಳ ಬೇಸರವಾದಾಗ ಅಕ್ಕನ ಕೈಯಲ್ಲಿದ್ದ ಪುಸ್ತಕವನ್ನು ಕತ್ತೆತ್ತಿ ನೋಡಿದಳು. ಆದರೆ, ಅದರಲ್ಲಿ ಚಿತ್ರಗಳೇ ಇರಲಿಲ್ಲ. "ಥೂ! ಚಿತ್ರಗಳಿಲ್ಲದೆ ಪುಸ್ತಕಗಳನ್ನೇಕೆ ಅಚ್ಚುಹಾಕುತ್ತಾರೆಯೋ?" ಎಂದು ಗೊಣಗಿಕೊಂಡಳು. 'ನೋಡುವ ಹಾಗೆ ಚಿತ್ರ, ಆಡುವ ಹಾಗೆ ಮಾತು, ಎರಡೂ ಸೊನ್ನೆ', ಎಂದಳು ಕೋಪದಲ್ಲಿ.

ಆ ದಿನ ಬಿಸಿಲು ಬಲವಾಗಿತ್ತು. ಪಾಪಚ್ಚಿಗೆ ಕೊಂಚಕೊಂಚವಾಗಿ ನಿದ್ದೆ ಹತ್ತುತ್ತಾ ಬಂದಿತು ........ ಪಕ್ಕದ ಮನೆಯಿಂದ ಸೀಬೆಕಾಯಿ ಕಿತ್ತುಕೊಡು ಎಂದು ಶಾಮುವನ್ನು ಕೇಳೋಣವೆನಿಸಿತು . . . "ಬೇಡ. ಈಗ ಯಾರು ಮನೆಯೊಳಕ್ಕೆ ಹೋಗುವವರು? ಶಾಮು ಪಕ್ಕದ ಮನೆಗೆ ನುಗ್ಗುತ್ತಾನೆಯೋ, ಇಲ್ಲವೊ? ಬೆಳಗ್ಗೆ ಎಲ್ಲರ ಎದುರಿಗೂ ಅವನ ಸಂಗ ಬಿಟ್ಟ ಮೇಲೆ ಈಗ ಹೇಗೆ ಅವನನ್ನು ಮಾತನಾಡಿಸುವುದು?" ಎಂದು ಯೋಚಿಸುತ್ತಾ ಅಲ್ಲಿಯೇ ಮಲಗಿಕೊಂಡಳು.

.... ಆಗ.... ಕೆಂಪುಕಣ್ಣಿನ, ಮೋಟುಬಾಲದ, ಉದ್ದ ಕಿವಿಗಳ, ಬಿಳಿಯ ಮೊಲವೊಂದು ಅವಳ ಹತ್ತಿರವೇ ಓಡಿತು. ಅದರ ಓಟದ ರಭಸದಿಂದೆದ್ದ ಗಾಳಿಯು ಮೈಗೆ ಸೋಕಿತು. ಮೊಲವು, "ಅಯ್ಯೋ! ದೇವರೇ! ಹೊತ್ತಾಗಿಹೋಯಿತಲ್ಲಾ!" ಎಂದು ಹೇಳಿಕೊಂಡೇ ಓಡುತ್ತಿತ್ತು. ಅದು ಹೇಳಿದ್ದು ಪಾಪಚ್ಚಿಗೆ ಚೆನ್ನಾಗಿ ಕೇಳಿಸಿತು. ಒಂದೆರಡು ಮಾರು ದೂರ ಹೋದಮೇಲೆ ಅದು ತನ್ನ ಅಂಗಿಯ ಒಳಜೇಬಿನಿಂದ ಒಂದು ಸರಪಣಿಗಡಿಯಾರವನ್ನು ಹೊರಗೆಳೆದು ಅದನ್ನು ನೋಡುತ್ತಾ ಓಡಿತು.



“ಅಯ್ಯೋ! ದೇವರೇ! ಹೊತ್ತಾಗಿಹೋಯಿತಲ್ಲಾ!”

ಪಾಪಚ್ಚಿಯೂ ಥಟಕ್ಕನೆದ್ದು ಅದರ ಹಿಂದೆ ಓಡಿದಳು. ಬಿಳಿಯ ಮೊಲ! ಗಡಿಯಾರ! ಕನ್ನಡದಲ್ಲಿ ಕೂಗಾಟ! ಓಟ!--ಇದರಲ್ಲಿ ಏನೋ ಸ್ವಾರಸ್ಯವಿರಬೇಕೆಂದು ಕುತೂಹಲದಿಂದ ಅವಳು ಅದನ್ನು ಹಿಂಬಾಲಿಸಿದಳು. ಹಾಗೆಯೇ, ಪಾಠಶಾಲೆಯ ಮೈದಾನದ ಅಂಚಿನವರೆಗೂ ಓಡಿದಳು.

ಅಲ್ಲಿ ಒಂದು ಬಿಲ; ತಕ್ಕಮಟ್ಟಿಗೆ ದೊಡ್ಡದಾಗಿಯೇ ಇತ್ತೆನ್ನಬಹುದು. ಅದರೊಳಕ್ಕೆ ಮೊಲವು ಧುಮುಕುವ ಹೊತ್ತಿಗೆ ಸರಿಯಾಗಿ, ದೇವರ ದಯೆಯಿಂದ, ಅವಳೂ ಅಲ್ಲಿಗೆ ಬಂದು ಸೇರಿದಳು. ಪಾಪಚ್ಚಿ ಕೊಂಚ ದುಡುಕು ಸ್ವಭಾವದವಳು. ಹಿಂದು ಮುಂದು ನೋಡದೆ ಅವಳೂ ಅದರೊಳಕ್ಕೆ ಧುಮುಕಿದಳು.

ಆ ಬಿಲವೋ— ಅದೆಷ್ಟು ಆಳ! ಹೇಳಿದರೆ ಯಾರೂ ನಂಬುವುದಿಲ್ಲ. ಅರ್ಧಗಂಟೆಯ ಹೊತ್ತು ಕೆಳಕ್ಕೆ ಬೀಳುತ್ತಿದ್ದರೂ ಅದರ ತಳ ಸಿಕ್ಕಲಿಲ್ಲ. ಏಕೆ? ಪಾಪಚ್ಚಿ ಬೀಳುತ್ತಿದ್ದುದು ಅಷ್ಟು ನಿಧಾನವೋ? ಹಾಗೂ ಇರಬಹುದು. ಅಲ್ಲವೆ? ಹುಂ. ಹಾಗೆಯೇ ಇರಬೇಕು. ಏಕೆಂದರೆ, ಬೀಳುತ್ತಿದ್ದಾಗಲೇ, ಅವಳಿಗೆ ತನ್ನ ಸುತ್ತಮುತ್ತ ನೋಡಲು ಅವಕಾಶ ಸಿಕ್ಕಿತು. ಮುಂದೆ ಯಾವಯಾವ ವಿಚಿತ್ರಗಳು ನಡೆಯಬಹುದು ಎಂದು ಯೋಚಿಸುತ್ತಲೇ ಬಿದ್ದಳು. ಆದರೆ, ತಾನು ಯಾವುದರ ಮೇಲೆ ಬೀಳಬಹುದೆಂದು ಕಂಡುಹಿಡಿಯಲು ಮಾತ್ರ ಸಾಧ್ಯವಾಗಲಿಲ್ಲ. ಕೆಳಗೆಲ್ಲ ಬರಿಯ ಕತ್ತಲೆ. ಏನೂ ಕಾಣಿಸಲಿಲ್ಲ.

ಆ ಬಿಲದ ಸುತ್ತಮುತ್ತ ಪಕ್ಕಗಳಲ್ಲಿ—ಅಬ್ಬಬ್ಬ! ಎಷ್ಟೊಂದು ಬೀರುಗಳು! ಎಷ್ಟೊಂದು ಪಠಗಳು! ಅಡಿಗೆಯ ಪಾತ್ರೆಗಳೆಷ್ಟು! ಅರಗು ಮೆರುಗಿನ ಆಟದ ಸಾಮಾನುಗಳೋ, ರಾಶಿರಾಶಿ! ಡಬ್ಬಗಳು, ಸಾಲಾಗಿ ಒಂದರ ಮೇಲೊಂದು ಲೆಕ್ಕವಿಲ್ಲದಷ್ಟು! ಬೀಳುವಾಗಲೇ ಕೈನೀಡಿ ಒಂದು ಬೀರುವಿನಿಂದ ಪಾಪಚ್ಚಿ ಒಂದು ಡಬ್ಬವನ್ನೆತ್ತಿದಳು. ಅದರ ಮೇಲೆ, "ಅಪ್ಪಟ ಹಾಲುಖೋವ" ಎಂದು ಒಂದು ಚೀಟಿ ಬರೆದು ಅಂಟಿಸಿತ್ತು. ಮುಚ್ಚಳ ತೆಗೆದು ನೋಡಿದಾಗ, ಅವಳ ಪುಣ್ಯಕ್ಕೆ ಸರಿಯಾಗಿ, ಅದರಲ್ಲಿ ಒಂದು ಚೂರು ಕೂಡ ಇರಲಿಲ್ಲ.

ಬಂದ ಕೋಪದಲ್ಲಿ ಖಾಲಿ ಡಬ್ಬವನ್ನು ಕೆಳಕ್ಕೆಸೆದುಬಿಡೋಣ ವೆನ್ನಿಸಿತು. "ಅಲ್ಲಿ ಯಾರ ತಲೆಬುರುಡೆಯ ಮೇಲಾದರೂ ಬಿದ್ದರೆ, ಗ್ರಹಚಾರ!" ಎಂದು ಆಲೋಚಿಸಿ,"ಬೇಡ! ದಾರಿಯಲ್ಲಿ ಯಾವುದಾದರೂ ಇನ್ನೊಂದು ಬೀರು ತೆರೆದಿದ್ದರೆ ಅದರಲ್ಲಿರಿಸಿಬಿಡುತ್ತೇನೆ" ಎಂದು ತನಗೆ ತಾನೇ ಹೇಳಿಕೊಂಡಳು. ಹಾಗೆಯೇ ಮಾಡಿ ಸುಮ್ಮನಾದಳು.

"ಚಿಂತೆ ಇಲ್ಲ. ಹೀಗೊಂದುಸಾರಿ ಬಿದ್ದಮೇಲೆ, ನನಗೆ ಎಲ್ಲಿಂದ ಕೆಳಕ್ಕೆ ಬಿದ್ದರೂ ಹೆದರಿಕೆಯೇ ಇರುವುದಿಲ್ಲ. ನಾನು ಅಳುವುದೂ ಇಲ್ಲ. ಮಹಡಿ ಮೆಟ್ಟಲುಗಳನ್ನೆಲ್ಲಾ ಒಂದೇಸಲಕ್ಕೆ ಇಳಿದುಬಿಡುತ್ತೇನೆ. ಅಣ್ಣ, ಅಮ್ಮ, ಎಲ್ಲರೂ ಬಂದು ನೋಡಿ, 'ಪಾಪಚ್ಚಿಗೆ ಎಷ್ಟು ಧೈರ್ಯ!' ಅನ್ನುತ್ತಾರೆ. 'ಶಾಮೂ! ನೀನು ಹೀಗೆ ಬಿದ್ದು ತೋರಿಸು, ನೋಡೋಣ!' ಎಂದು ಅವನನ್ನು ಅಣಕಿಸುತ್ತಾರೆ. ಇನ್ನು ಮುಂದೆ ಮನೆಯ ಮೇಲಿಂದ ಬಿದ್ದರೂ ಕೂಡ, ನಾನು ಅದರ ವಿಷಯ ಮಾತನಾಡಿ ಹೆಚ್ಚುಗಾರಿಕೆ ಪಡೆಯುವಂತಿಲ್ಲ........ಹೀಗೆ ಜಂಬ ಕೊಚ್ಚಿಕೊಳ್ಳುತ್ತಾ ಬೀಳುತ್ತಿದ್ದಳು. 'ಇದೇನು? ಹಾಳು! ಎಷ್ಟು ಹೊತ್ತು ಬೀಳುತ್ತಿರುವುದು? ಮುಗಿಯುವುದೇ ಇಲ್ಲವೋ? ಈಗ ಸುಮಾರು ಎಷ್ಟು ಆಳ ಬಿದ್ದಿರಬಹುದು? ಭೂಗೋಳದ ಮಧ್ಯದತನಕ ಬಂದಿರಬೇಕು ಅಂತ ಕಾಣುತ್ತೆ. ಹಾಗಾದರೆ, ಎಷ್ಟು ಮೈಲಿ? .... ನಾಲ್ಕು ಸಾವಿರ ಮೈಲಿ! .... ಅಲ್ಲವೆ? ಹೂ....ಹೌದು.' ಶಾಮು ಭೂವಿವರಣೆಯನ್ನು ಉರುಹೊಡೆಯುತ್ತಿರುವಾಗ ಪಾಪಚ್ಚಿಯೂ ಅವನೆದುರಿಗೆ ಕುಳಿತು ಚೂರುಪಾರು ತಿಳಿದುಕೊಂಡಿದ್ದಾಳೆ. ಅವಳ ತಂದೆ ಕಚೇರಿಯಿಂದ ಬಂದ ಮೇಲೆ ಅವರೆದುರು ಅದನ್ನೆಲ್ಲಾ ಹೇಳಿದರೆ, ಅವರು ಬಹಳವಾಗಿ ಮುದ್ದಿಸುವರು. ಇಲ್ಲಿ, ಈ ಬಿಲದೊಳಗೆ ಹೊಗಳುವವರು ಯಾರೂ ಇಲ್ಲದಿದ್ದರೂ ಪಾಪಚ್ಚಿ ತನಗೆ ತಾನೇ ಮೆಚ್ಚುತ್ತಿದ್ದಳು. ".... ನಾಲ್ಕುಸಾವಿರ ಮೈಲಿ ದೂರ....ಅಲ್ಲ, ಆಳ; ಅದಿರಲಿ, ಇಲ್ಲಿಯ ಸಮಾನಾಂತರ ವೃತ್ತ, ಅಕ್ಷಾಂಶ ರೇಖಾಂಶ ವೃತ್ತಗಳು ಏನೇನಿರಬಹುದು?...." ಪಾಪಚ್ಚಿಗೆ ಈ ಪದಗಳ ಅರ್ಥವೇ ತಿಳಿಯದು, ಆದರೂ ಜಂಬ!

ಪಾಪಚ್ಚಿ ಮಾತನಾಡುತ್ತಲೇ ಬೀಳುತ್ತಿದ್ದಳು. "ಹೀಗೆಯೇ ನಾನು ಭೂಗೋಳದ ಆಚೆ ಬಿದ್ದರೆ? ಏನುಗತಿ? ಅಲ್ಲಿಯ ಜನರು ತಲೆಕೆಳಕಾಗಿ

ನೇತಾಡುತ್ತಾ ನಡೆಯುವವರಲ್ಲವೆ? ನೋಡುವುದಕ್ಕೆ ಸೊಗಸಾಗಿರುತ್ತದೆ. ಅದು ಯಾವ ದೇಶ? ಆಸ್ಟ್ರೇರಿಕಾ, ಅಲ್ಲವೆ?" ಹೆಸರು ಏಕೋ ಸರಿಯಲ್ಲವೆಂದು ಪಾಪಚ್ಚಿಗೆ ಅನುಮಾನವಾಯಿತು. ಆದರೂ, ಕೇಳಿ ನಗಲು ಶಾಮು ಇರಲಿಲ್ಲವಾದ್ದರಿಂದ ಅವಳಿಗೆ ಸಮಾಧಾನ. "ಇರಲಿ! ಅಲ್ಲಿಗೆ ಹೋದಮೇಲೆ ಊರ ಹೆಸರೇನೆಂದು ಯಾರನ್ನಾದರೂ ಕೇಳಿ ತಿಳಿದುಕೊಂಡರಾಯಿತು. ಕಾಣದ ಊರಿಗೆ ನಾಲಗೆಯೇ ದಾರಿ. ಅಮ್ಮಾ! ಇದು ಯಾವ ಊರು! ಆಸ್ಟ್ರೇರಿಕಾವೋ, ಸ್ಯೂನೀಲಂಡೋ? ಎಂದು ಕೇಳಿದರಾಯಿತು." ಎದುರಿಗೆ ಯಾರೋ ಆ ದೇಶದವರು ನಿಂತಿರುವ ಹಾಗೂ ಅವರನ್ನು ಕೈಮುಗಿದು ಕೇಳುವ ಹಾಗೂ ಪಾಪಚ್ಚಿ ಬೀಳುತ್ತಿರುವಾಗಲೇ ಅಭ್ಯಾಸ ಮಾಡಿಕೊಂಡಳು! "ಇಲ್ಲ, ಇಲ್ಲ. ಹಾಗೆ ಪಾಪಿ ಪರದೇಶಿಯ ಹಾಗೆ ಬೀದಿಯಲ್ಲಿ ಹೋಗುವವರನ್ನು ಕೇಳುತ್ತಾಹೋದರೆ ಏನೂ ತಿಳಿಯದ ಮಂಕು ಅಂದಾರು........ ಕೂಡದು........ ಕೇಳಲೇ ಕೂಡದು........ ಎಲ್ಲಿಯಾದರೂ ಬರೆದಿರುವುದಿಲ್ಲವೆ? ಓದಿಕೊಂಡರಾಯಿತು" ಎಂದು ಹೇಳಿಕೊಂಡಳು.

ಕೆಳಕ್ಕೆ .... ಕೆಳಕ್ಕೆ .... ಇನ್ನೂ ಬೀಳುವುದು ನಿಂತಿರಲಿಲ್ಲ. ತಳ ಸಿಕ್ಕಲಿಲ್ಲ .. ಪಾಪಚ್ಚಿ ಏನು ಮಾಡಿಯಾಳು? ಅವಳಿಗೆ ತುಂಬಾ ಬೇಜಾರಾಯಿತು. ಆಕಳಿಕೆ ಬಂತು. ಎಲ್ಲಿ ನಿದ್ದೆ ಬಂದುಬಿಡುವುದೋ ಎಂದು ಅವಳಿಗೆ ಭಯ. ಆದ್ದರಿಂದ ಸರಿಸರನೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದಳು. "ಈವತ್ತು ರಾತ್ರಿಯೆಲ್ಲಾ ಪಿಲ್ಲಿ ನನ್ನನ್ನು ಹುಡುಕಾಡುತ್ತಾಳೆ. ಅವಳ ತಟ್ಟೆಗೆ ಹಾಲು ಹಾಕುವುದನ್ನು ಅಮ್ಮ ಮರೆತುಬಿಟ್ಟರೆ ಏನು ಮಾಡುವುದು? ಶಾಮು ಜ್ಞಾಪಿಸುತ್ತಾನೆಯೋ, ಇಲ್ಲವೋ? .... ಪಿಲ್ಲಿ, ನೀನು ನನ್ನ ಜತೆಯಲ್ಲಿರಬೇಕಾಗಿತ್ತು, ಕಣೆ, ಆದರೆ, ನಿನಗೆ ತಿನ್ನುವುದಕ್ಕೆ ಇಲ್ಲಿ ಏನು ಸಿಕ್ಕುತ್ತೆ? ಇಲ್ಲಿ ಬಾವಲಿಗಳೇ ಇಲಿಗಳು. ಸಾಲದೇನು? ಬಾವಲಿಯೂ ಇಲಿಯ ಜಾತಿ ತಾನೆ? ಆದರೆ, ಬೆಕ್ಕು ಬಾವಲಿಯನ್ನು ತಿನ್ನುತ್ತದೆಯೇ? ಬಾವಲಿ........ ಬೆಕ್ಕನ್ನು ತಿನ್ನುತ್ತದೆಯೇ? (ಉತ್ತರ ಗೊತ್ತಿಲ್ಲದ ಮೇಲೆ, ಪ್ರಶ್ನೆ ಹೇಗಿದ್ದರೇನು? ಅಲ್ಲವೆ?) "ತಿನ್ನು........ ಬಾವಲಿಯನ್ನು.... ಬೆಕ್ಕುತ್ತದೆಯೇ? ...." ಎಂದು ಹೇಳುತ್ತಾ ಹೇಳುತ್ತಾ,

ತೂಕಡಿಸುತ್ತಾ, ಆಕಳಿಸುತ್ತಾ, ಬೀಳುತ್ತಿದ್ದಳು. ಹಾಗೆಯೇ, ಒಂದು ಕನಸೂ ಆಯಿತು. ಕನಸಿನಲ್ಲಿ,....ಪಿಲ್ಲಿಯ ಕೈಹಿಡಿದು ನಡೆಸಿಕೊಂಡು ಪಾಪಚ್ಚಿ ಸ್ಕೂಲಿಗೆ ಹೋಗುತ್ತಾ ಇದ್ದಳು. ನಡುವೆ ದಾರಿಯಲ್ಲಿ ಪಿಲ್ಲಿಯನ್ನು ನಿಲ್ಲಿಸಿ, "ನಿಜ ಹೇಳು! ನೀನು ಬಾವಲಿಯನ್ನು ಎಂದೂ ತಿಂದಿಲ್ಲವೇನೆ?" ಎಂದು ಗದರಿಸುತ್ತಿದ್ದಳು. ಆಗ,....'ಥೊಪ್!' ಏನು?.... ಅವಳು ತರಗೆಲೆಯ ಒಂದು ಗುಡ್ಡದಮೇಲೆ ಬಿದ್ದಳು.... ನಿದ್ದೆಯಿಂದೆದ್ದಳು — ತಳ ಸಿಕ್ಕಿತು.

---

## ಗಾಜಿನ ಮೇಜು

ಪಾಪಚ್ಚಿಗೆ ಕೊಂಚವೂ ನೋವಾಗಲಿಲ್ಲ ಎದ್ದುಕುಳಿತು ಕಣ್ಣು ತಿಕ್ಕಿಕೊಂಡು ನಾಲ್ಕು ಕಡೆಯೂ ನೋಡಿದಳು. ತಲೆಯ ಮೇಲೆ ಕತ್ತಲೆ; ಏನೂ ಕಾಣಿಸಲಿಲ್ಲ. ಮುಂದುಗಡೆ ಒಂದು ಉದ್ದವಾದ ಓಣಿ. ಅದರ ಆಚೆ ಕೊನೆಯಲ್ಲಿ ಬಿಳಿಯ ಮೊಲ ಬಿರುಬಿರನೆ ಓಡುವುದು ಕಾಣಿಸಿತು. ಉಸಿರಾಡುವಷ್ಟು ಹೊತ್ತು ಕೂಡ ನಿಲ್ಲದೆ ಪಾಪಚ್ಚಿ ಅದರ ಹಿಂದೆ ಅತಿ ವೇಗವಾಗಿ ಓಡಿದಳು. ಹಾಗೆ ಓಡಿದ್ದು ಒಳ್ಳೆಯದೇ ಆಯಿತು. ಏಕೆಂದರೆ ಆ ಓಣಿ ಫಕ್ಕನೆ ಬಲಕ್ಕೆ ತಿರುಗಿತು. "ಅಯ್ಯೋ! ನನ್ನ ಮೀಸೆ ಹಾಳಾಗಿ ಹೋಯಿತು! ಎಷ್ಟು ಹೊತ್ತಾಗಿಹೋಯಿತು! ಏನು ಗತಿ!" ಎಂದು ಗಟ್ಟಿಯಾಗಿ ಗೊಣಗುಟ್ಟುತ್ತಾ ಮೊಲವು ಬಲಕ್ಕೆ ತಿರುಗುವ ಹೊತ್ತಿಗೆ ಸರಿಯಾಗಿ ಪಾಪಚ್ಚಿಯೂ ಅದರ ಹತ್ತಿರ ಗಾಳಿಯಂತೆ ಬಿರುಸಾಗಿ ಬಂದು ಸೇರಿದಳು.

ಮೊಲದ ಹಿಂದೆಯೇ ಅವಳೂ ಬಲಕ್ಕೆ ತಿರುಗಿದಳು. ಅದರ ಬೆನ್ನ ಮೇಲೆಯೇ ದೃಷ್ಟಿಯನ್ನು ಯಾವಾಗಲೂ ನಟ್ಟಿದ್ದು ಅದು ಎಲ್ಲಿಯೂ ತಪ್ಪಿಸಿಕೊಂಡು ಹೋಗದ ಹಾಗೆ ನೋಡಿಕೊಳ್ಳಬೇಕೆಂದು ತೀರ್ಮಾನಿಸಿದಳು ............ ಆದರೆ, ಮೊಲವು ಇದ್ದಕ್ಕಿದ್ದಹಾಗೆ ಕಣ್ಮರೆಯಾಗಿ ಹೋಯಿತು. ಅದರ ಸುಳಿವೇ ಸಿಕ್ಕಲಿಲ್ಲ. ಅಷ್ಟು ಬೇಗನೆ ಅದು ಮಾಯವಾದದ್ದು ಹೇಗೆಂದು ಗೊತ್ತಾಗಲೂ ಇಲ್ಲ! ಓಣಿಯೂ ಕೊನೆಗಂಡಿತು.

ಅಲ್ಲಿ ಅಗಲವಾದ, ಹೆಚ್ಚು ಎತ್ತರವಿಲ್ಲದ ಒಂದು ದೊಡ್ಡ ಕೊಠಡಿ. ಹತ್ತಾರು ಸಣ್ಣ ಸಣ್ಣ ದೀಪಗಳು ಅಲ್ಲಲ್ಲಿ ಮಿಣುಕುತ್ತಿದ್ದುವು. ಆದ್ದರಿಂದ ಕೊಠಡಿಯಲ್ಲಿ ತಕ್ಕಮಟ್ಟಿಗೆ ಬೆಳಕಿತ್ತೆನ್ನಬಹುದು.

ಸುತ್ತಲೂ ಬಾಗಿಲುಗಳು ತುಂಬ ಇದ್ದುವು. ಆದರೆ, ಪಾಪಚ್ಚಿಗೆ ಮಾತ್ರ ಹೊರಗೆ ಹೊರಡಲು ಸಾಧಿಸಲಿಲ್ಲ. ಎಲ್ಲಕ್ಕೂ ಭದ್ರವಾಗಿ ಬೀಗ ಹಾಕಿತ್ತು. ಪಾಪ! ಪಾಪಚ್ಚಿ ಬೋನಿಗೆ ಬಿದ್ದ ಜಿಂಕೆಯ ಮರಿಯಂತೆ ಬೆದರಿದಳು. ಒಂದು ಕಡೆಯಿಂದ ಎಲ್ಲಾ ಬೀಗಗಳನ್ನೂ ಹಿಡಿದೆಳೆದು ತೆಗೆಯಲು ಪ್ರಯತ್ನಿಸಿದಳು. ಹಾಗೆಯೇ, ಇನ್ನೊಂದುಸಲ ಎಲ್ಲವನ್ನೂ ಪರೀಕ್ಷಿಸಿದಳು. ಕಡೆಗೆ, ಮನಸೋತು, ಬೇಸತ್ತು, ನಿರಾಶಳಾಗಿ ಕೊಠಡಿಯ ನಡುವೆ ಬಂದು ನಿಂತು ನಿಟ್ಟುಸಿರು ಬಿಟ್ಟಳು. "ದೇವರೇ! ನಾನು ಇಲ್ಲಿಂದ ಹೇಗೆ ತಪ್ಪಿಸಿಕೊಳ್ಳಲಿ? ಮೊಲ ಎಲ್ಲಿಗೆ ಹೋಯಿತು, ಕಾಣೆನಲ್ಲಾ!" ಎಂದು ಅವಳು ವ್ಯಸನಪಟ್ಟಳು.

ಆಗ, ಅವಳ ಹತ್ತಿರವೇ ಇದ್ದ ಒಂದು ಗಾಜಿನ ಗುಂಡು ಮೇಜಿನ ಮೇಲೆ ಅವಳ ದೃಷ್ಟಿ ಬಿತ್ತು. ಅದರಮೇಲೊಂದು ಚಿನ್ನದ ಬೀಗದ ಕೈ ಥಳಥಳನೆ ಹೊಳೆಯುತ್ತಿತ್ತು. ಅದು ಅಲ್ಲಿನ ಬೀಗಗಳಲ್ಲಿ ಯಾವುದಾದರೂ ಒಂದಕ್ಕೆ ಸರಿಹೋಗಬಹುದೆಂದು ಪಾಪಚ್ಚಿಗೆ ತೋರಿತು. ಆದರೆ, ಅವಳ ಅದೃಷ್ಟಕ್ಕೆ ಸರಿಯಾಗಿ, ಬೀಗಗಳೇ ಕೊಂಚ ದೊಡ್ಡವೋ, ಇಲ್ಲದೆ ಹೋದರೆ ಬೀಗದಕೈಯೇ ಕೊಂಚ ಚಿಕ್ಕದೋ, ಏಕೋ ಏನೋ, ಒಂದು ಬಾಗಿಲನ್ನೂ ತೆರೆಯಲು ಸಾಧ್ಯವಾಗಲಿಲ್ಲ. ಇನ್ನೊಮ್ಮೆ ಎಲ್ಲ ಬೀಗ ಗಳನ್ನೂ ಪರೀಕ್ಷಿಸೋಣವೆಂದು ಅವಳು ಕೊಠಡಿಯ ಸುತ್ತ ಬಳಸಿ ಬಂದಳು. ಆಗ, ಅದುವರೆಗೂ ತನ್ನ ಕಣ್ಣಿಗೆ ಬೀಳದ ಬಿಳಿಯ ರೇಷ್ಮೆಯ ತೆರೆಯೊಂದನ್ನು ಕಂಡು ಆಶ್ಚರ್ಯದಿಂದ ನೋಡಿದಳು. ಅದರ ಹಿಂದೆ ಸುಮಾರು ಒಂದು ಒಂದೂವರೆ ಗೇಣು ಎತ್ತರದ ಸಣ್ಣದೊಂದು ಬಾಗಿಲು ಕಾಣಿಸಿತು. ಅದಕ್ಕೆ ಹಾಕಿದ್ದುದು ಒಂದು ಚಿನ್ನದ ಬೀಗ! ಸರಸರನೆ ತನ್ನ ಕೈಯಲ್ಲಿದ್ದ ಬೀಗದ ಕೈಯಿಂದ ಅದನ್ನು ತೆರೆದಳು. ಪಾಪಚ್ಚಿಗೆ ಪರಮಾನಂದವಾಯಿತು.

ಆ ಬಾಗಿಲ ಹತ್ತಿರ ಮಂಡಿಯೂರಿ ಕುಳಿತು ತಲೆಬಗ್ಗಿಸಿ ಪಿಳಪಿಳನೆ ಹೊರಗೆ ನೋಡಿದಳು. ಅಲ್ಲಿ ಬಹಳ ವಿಚಿತ್ರವಾದ ಒಂದು ಮನೋಹರ ದೃಶ್ಯವು ಕಾಣಿಸಿತು. ಎಂತಹ ಸುಂದರವಾದ ಹೂದೋಟ! ಲಾಲ್ ಬಾಗಿಗಿಂತ ಸಾವಿರಪಾಲು ಸೊಗಸು! ಕಾಮನಬಿಲ್ಲಿನಂತೆ ಬಣ್ಣ ಬೀರಿ ಒಂದರಮೇಲೊಂದು ಹಾಯುವ ನೀರಿನ ಬುಗ್ಗೆಗಳು! ಹೊಳೆಹೊಳೆವ ಹೂವುಗಳು! ಹಚ್ಚಹಸುರು ಹುಲ್ಲು! ಅಮೃತಶಿಲೆಯಿಂದ ಮಾಡಿದ ಪುತ್ಥಳಿಗಳ ಸಾಲು! ಹಾಡುತ್ತಾ ಕುಣಿದು ಹಾರುವ ಹಕ್ಕಿಗಳು. ಹಣ್ಣು ಗಳು ಉದುರಿದ್ದರಿಂದ ಕೆಂಪಾಗಿ ಕಾಣುತ್ತಿದ್ದ ಕಾಲುದಾರಿಗಳು. ಅಲ್ಲಲ್ಲಿ ಕೆಲವರು ಆಳುಗಳಲ್ಲದೆ ಇನ್ನು ಯಾರೂ ಆ ಉದ್ಯಾನದಲ್ಲಿ ಸುಳಿದಾಡು ತ್ತಿರಲಿಲ್ಲ.

ಆ ಹಾಳು ಬಾಗಿಲು ಇನ್ನೂ ಕೊಂಚ ಎತ್ತರವಾಗಿರಬಾರದಾಗಿತ್ತೆ? ಪಾಪಚ್ಚಿಯ ಅವಸ್ಥೆ, 'ಕೈಗೆ ಬಂದ ತುತ್ತು, ಬಾಯಿಗಿಲ್ಲ,' ಎನ್ನುವ ಹಾಗಾಯಿತು. ಅವಳ ತಲೆ ಕೂಡ ಆ ಬಾಗಿಲಿನಲ್ಲಿ ಹಿಡಿಸದು. "ಒಂದುವೇಳೆ ನನ್ನ ತಲೆಯನ್ನು ಹೇಗಾದರೂ ತೂರಿಸಿದರೂ, ತೋಳು ಗಳಿಲ್ಲದೆ ಕೈಕಾಲುಗಳಿಲ್ಲದೆ, ಅದು ಮಾತ್ರ, ಪಾಪ, ಒಂಟಿಯಾಗಿ ಅಲ್ಲಿಗೆ ಹೋಗಿ ಏನು ಮಾಡೀತು? ತಸ್ವೀರು ತೆಗೆಯುವ ಕ್ಯಾಮೆರಾದ ಕಾಲುಗಳ ಹಾಗೆ ನನ್ನ ದೇಹವನ್ನೂ ಬೇಕು ಬೇಕಾದಾಗ ಚಿಕ್ಕದು ದೊಡ್ಡದು ಮಾಡಿಕೊಳ್ಳಲು ಸಾಧ್ಯವಾಗುವುದಾದರೆ ಎಷ್ಟು ಅನುಕೂಲ ವಾಗಿರುತ್ತೆ!" ಎಂದು ಮುಂತಾಗಿ ಪಾಪಚ್ಚಿ ಯೋಚಿಸಿದಳು. ತನ್ನನ್ನು ತಾನೇ ಶಪಿಸಿದಳು. ಅಂಥ ವಿಚಿತ್ರವೂ ಏಕೆ ನಡೆಯಬಾರದು, ಎಂದು ಯೋಚಿಸಿದಳು.


ಬಾಗಿಲ ಬಳಿ ಮಲಗಿಕೊಂಡು ಉದ್ಯಾನವನ್ನು ನೋಡುತ್ತಾ ಸುಮ್ಮನೆ ನಾಲಗೆ ಚಪ್ಪರಿಸುತ್ತಿದ್ದರೆ ಫಲವೇನು! ಯಾವುದಾದರೊಂದು ಉಪಾಯದಿಂದ ಆ ತೋಟಕ್ಕೆ ನುಗ್ಗಲೇಬೇಕೆಂದು ಅವಳು ನಿರ್ಧರಿಸಿದಳು. ಮನಸ್ಸಿಲ್ಲದ ಮನಸ್ಸಿನಿಂದ ಎದ್ದು ಗಾಜಿನ ಮೇಜಿನ ಹತ್ತಿರಕ್ಕೆ ಬಂದಳು. ಅಲ್ಲಿ 'ಹಿರಿಯ ಮಕ್ಕಳನ್ನು ಕಿರಿದು ಮಾಡುವ ವಿಧಾನ' ಎಂಬ ಒಂದು ಪುಸ್ತಕವನ್ನೋ, ಇಲ್ಲದಿದ್ದರೆ, ದೊಡ್ಡ ಬಾಗಿಲುಗಳನ್ನು ತೆಗೆಯಲು

ದೊಡ್ಡ ಬೀಗದಕೈಯನ್ನೋ ಅಷ್ಟು ಹೊತ್ತಿಗೆ ಎಲ್ಲಿಂದಲಾದರೂ ಯಾರಾದರೂ ತಂದು ಹಾಕಿರಬಹುದೆಂಬ ಭರವಸೆ, ಆಸೆ, ಚಪಲ!

ಆದರೆ, ........"ಇದೇನಿದು? ಮೊದಲು ಇಲ್ಲಿ ಇರಲೇ ಇಲ್ಲ........ ಆಶ್ಚರ್ಯ! ನಾನು ಯೋಚನೆ ಮಾಡಿದ ಹಾಗೆಯೇ ಆಗಿದೆ!........"

ಮೇಜಿನ ಮೇಲೆ ಒಂದು ಸಣ್ಣ ಸೀಸೆ. ಒಂದು ಪಾವು ನೀರು ಹಿಡಿಯಬಹುದು. ಅದರ ಕತ್ತಿಗೊಂದು ಪಟ್ಟಿ. ಆದರಲ್ಲಿ **"ಕುಡಿಯಿರಿ"** ಎಂದು ದಪ್ಪ ದಪ್ಪವಾದ ಅಕ್ಷರಗಳಲ್ಲಿ ಅಚ್ಚುಹಾಕಿತ್ತು. ಅಂದರೆ, ಅದನ್ನು ಓದಿದ ತಕ್ಷಣವೇ ದಡ್ಡ ಹುಡಿಗಿಯ ಹಾಗೆ, ಪಾಪಚ್ಚಿ ತೆಗೆದುಕೊಂಡು ಕುಡಿದಳೆಂದು ತಿಳಿಯಬೇಡಿ. ಇಲ್ಲ, ಪಾಪಚ್ಚಿ ಅಷ್ಟು ಪೆಚ್ಚು ಏನೂ ಅಲ್ಲ. ಶಾಮುವಾಗಿದ್ದರೆ ಅದನ್ನು ಆಗಲೇ ಕುಡಿದರೂ ಕುಡಿಯುತ್ತಿದ್ದನೋ ಏನೋ? ಆದರೆ, ಪಾಪಚ್ಚಿ, ಯಾವ ಔಷಧಿ ಸೀಸೆಯನ್ನು ಕಂಡರೂ 'ವಿಷ' ಎಂಬ ಒಂದು ಕೆಂಪು ಚೀಟಿ ಅಂಟಿಸಿದೆಯೋ ಇಲ್ಲವೋ ಎಂದು ಮೊದಲು ನೋಡುವಳು. ಅನಂತರ, ಕುಡಿಯಬೇಕೋ, ಬಿಡಬೇಕೋ, ಯೋಚನೆ ಮಾಡುವಳು. ಏಕೆಂದರೆ, ಅವಳು ಕೇಳಿದ್ದ ಅನೇಕ ಕಥೆಗಳಲ್ಲಿ ಚಿಕ್ಕ ಚಿಕ್ಕ ಮಕ್ಕಳು ಸಣ್ಣ ವಿಷಯಗಳನ್ನು ಸಮಯದಲ್ಲಿ ಮರೆತದ್ದರಿಂದ ಅನೇಕ ಅನಾಹುತಗಳಿಗೆ ಸಿಕ್ಕಿಕೊಂಡಿದ್ದರು; ದೊಡ್ಡವರು ಕೊಟ್ಟ ಎಚ್ಚರಿಕೆಗೆ ಅವರು ಕಿವಿಗೊಟ್ಟಿರಲಿಲ್ಲ. ಪಾಪಚ್ಚಿ ಅವೆಲ್ಲವನ್ನೂ ಯಾವಾಗಲೂ ನೆನಪಿನಲ್ಲಿಟ್ಟಿದ್ದಳು; ಉದಾಹರಣೆಗಾಗಿ,—ಕಾದ ಕಬ್ಬಿಣವನ್ನು ಕೈಯಿಂದ ಹಿಡಿದರೆ ಸುಡುತ್ತದೆ, ಚಾಕುವಿನಿಂದ ಬೆರಳನ್ನು ಕುಯ್ದರೆ ನೋವಾಗುತ್ತದೆ, ರಕ್ತ ಬರುತ್ತದೆ, ಕಾಲಿನಮೇಲೆ ಭಾರವಾದ ಸಾಮಾನು ಬಿದ್ದರೆ ಕಣ್ಣಲ್ಲಿ ನೀರು ಬರುತ್ತದೆ, 'ವಿಷ' ಎಂಬ ಚೀಟಿಯನ್ನಂಟಿಸಿರುವ ಸೀಸೆಯೊಳಗಿನ ವಸ್ತುವನ್ನು ಕುಡಿದರೆ ಮೈಗೆ ಕೆಡಕಾಗುತ್ತದೆ........ ಇತ್ಯಾದಿ.

ಆದರೆ, ಆ ಸೀಸೆಯಲ್ಲಿ ಅಂಥಾದ್ದು ಏನೂ ಬರೆದಿರಲಿಲ್ಲ. "ಕುಡಿಯಿರಿ" ಅಷ್ಟೆ. ನಾಲ್ಕೇ ಅಕ್ಷರ. ಮುದ್ದಾಗಿ ಗುಂಡು ಗುಂಡಗೆ ಅಚ್ಚಾಗಿತ್ತು. ಕುಡಿಯುವುದಕ್ಕೆ ಮೊದಲು ಒಂದು ತೊಟ್ಟನ್ನು ನಾಲಗೆಯ




“ ಹಾ ! ಇದೇನು ! ನಾನು ಪುಟಾಣಿ ಹುಡುಗಿಯಾಗುತ್ತಿದ್ದೇನೆ ! ”

ತುದಿಗೆ ತೊಟ್ಟಿಕ್ಕಿಸಿಕೊಂಡು ರುಚಿನೋಡಿದಳು. ಬಹಳ ಚೆನ್ನಾಗಿತ್ತು. ಬೇಲದ ಹಣ್ಣಿನ ಪಾನಕ, ಸೊಗದೆ ಬೇರಿನ ಷರಬತ್ತು, ಮಾವಿನ ಹಣ್ಣಿನ ರಸಾಯನ, ಇವು ಮೂರರ ರುಚಿಯೂ ವಾಸನೆಯೂ ಅದರಲ್ಲಿ ಸೇರಿತ್ತು. ಇನ್ನೇನು? ಕೊಂಚವೂ ಅನುಮಾನಿಸದೆ, ಪಾಪಚ್ಚಿ ಎಲ್ಲವನ್ನೂ ಕುಡಿದೇ ಬಿಟ್ಟಳು.

"ಹಾ! ಇದೇನು! ಏನೋ ಒಂದು ತರಹ ಆಗುತ್ತಾ ಇದೆ! ನಾನು ಪುಟಾಣಿ ಹುಡುಗಿಯಾಗುತ್ತಿದೇನೆ!" ಎಂದು ಪಾಪಚ್ಚಿ ಬೆಚ್ಚಿದಳು. ಹೌದು. ಅವಳು ಹೇಳಿದ್ದು ನಿಜ. ಬಹಳ ಬೇಗನೆ ಅವಳು ಗೇಣು ಎತ್ತರದ ಹುಡುಗಿಯಾಗಿಬಿಟ್ಟಿದ್ದಳು. ಆಗ, ಅವಳ ಮುಖ ಸಂತೋಷದಿಂದ ಅರಳಿತು. ಸಣ್ಣ ಬಾಗಿಲಿನಿಂದ ಹೊರಗೆ ಹೋಗಿ ಆ ಉದ್ಯಾನವನ್ನು ಕಣ್ಣಾರೆ ನೋಡಿ ಅಲ್ಲಿ ಓಡಿ ಆಡಬಹುದಲ್ಲಾ ಎಂದು ಅವಳು ಹಿಗ್ಗಿದಳು. ಆದರೆ, ಅವಳಿಗೆ ಕೊಂಚ ಹೆದರಿಕೆಯೂ ಆಯಿತು. "ಹೀಗೆಯೇ ಚಿಕ್ಕದಾಗುತ್ತಾ ಆಗುತ್ತಾ ಉರಿಯುವ ಮೋಂಬತ್ತಿಯ ಹಾಗೆ, ನಾನು ಏನೂ ಉಳಿಯದೆ ಕರಗಿಹೋಗಿಬಿಟ್ಟರೆ ಏನು ಗತಿ? ಆಗ ನಾನು ಹೇಗಿರುತ್ತೇನೆ?" ಎಂದು ಯೋಚಿಸಿದಳು. ಉರಿದು ಮುಗಿದು ಏನೂ ಉಳಿಯದ ಮೋಂಬತ್ತಿ ಹೇಗಿರುತ್ತದೆ—ಎಂದು ಮನಸ್ಸಿನಲ್ಲಿಯೇ ಚಿತ್ರಿಸಲು ಯತ್ನಿಸಿದಳು. ಅದನ್ನು ಎಂದೂ ನೋಡಿಲ್ಲವಾದ್ದರಿಂದ ಅವಳಿಗೆ ಬಗೆಹರಿಯಲಿಲ್ಲ. ದೇವರ ದಯೆಯಿಂದ ಅವಳಿಗದು ತಿಳಿಯ ಬೇಕಾಗಿಯೂ ಇರಲಿಲ್ಲ ಅನ್ನಿ. ಏಕೆಂದರೆ, ಔಷಧಿಯ ಪ್ರಭಾವ ಬೇಗ ಕಡಮೆಯಾಗುತ್ತಾ ಬಂತು. ಗೇಣು ಎತ್ತರಕ್ಕೆ ಇಳಿದಾಗ, ಚಿಕ್ಕದಾಗು ವುದು ನಿಂತುಹೋಯಿತು.

ಪಾಪಚ್ಚಿ ತೋಟದ ಬಾಗಿಲಕಡೆ ಬೇಗಬೇಗ ನಡೆದಳು. ಆದರೆ, ಮೊದಲು ಹಿಂದಿರುಗಿದಾಗ ಅವಳು ಆ ಬಾಗಿಲ ಬೀಗವನ್ನು ಹಾಕಿ ಬಿಟ್ಟಿದ್ದಳು. ಶೀಶೆಯನ್ನೆತ್ತಿದಾಗ ಬೀಗದ ಕೈಯನ್ನು ಯಥಾಸ್ಥಿತಿ ಗಾಜಿನ ಮೇಜಿನ ಮೇಲೆ ಇರಿಸಿದ್ದಳು. ಈಗ ಅದನ್ನು ತೆಗೆಯುವುದು ಹೇಗೆ? ಕೈಗೆ ಎಟುಕದ ಆ ಮೇಜಿನಿಂದ ಬೀಗದ ಕೈಯನ್ನು ಹೇಗೆ ಸಂಪಾದಿಸುವುದು! ಮೇಜಿನ ಕಾಲನ್ನು ಹಿಡಿದು ಹತ್ತಲು ಶ್ರಮಿಸಿ ಅವಳು ಜಾರಿಬಿದ್ದಳು.

ಪಾಪ! ಪಾಪಚ್ಚಿ ಆಸೆಪಟ್ಟದ್ದೆಲ್ಲವೂ ಹಾಳಾಯಿತು. ಇನ್ನೇನು ಮಾಡು ವುದು? ಅಳುತ್ತಾ ಕುಳಿತಳು........

"ಸಾಕು. ನಿಲ್ಲಿಸು. ಬಾಯಿಮುಚ್ಚು. ಅತ್ತರೆ ಇಲ್ಲಿ ಯಾರೂ ಬಂದು ಎತ್ತಿಕೊಳ್ಳುವುದಿಲ್ಲ." ಇದು ಪಾಪಚ್ಚಿ ತನಗೆ ತಾನೇ ಹೇಳಿ ಕೊಂಡ ಮಾತು. ಹೀಗೆ ತನಗೆ ತಾನೇ ಬೈದುಕೊಂಡು, ಹೊಡೆದು ಕೊಂಡು, ಬುದ್ಧಿವಾದ ಹೇಳಿಕೊಂಡು, ಸಮಾಧಾನ ತಂದುಕೊಳ್ಳು ವುದು ಅವಳ ಪದ್ಧತಿ. ಹಿಂದೆ ಒಂದುಸಲ ಶಾಮುವಿನ ಪುಸ್ತಕದ ಒಂದು ಹಾಳೆಯನ್ನು ಹರಿದದ್ದಕ್ಕಾಗಿ ತನಗೆ ತಾನೆ ಕಿವಿ ಹಿಂಡಿಕೊಂಡು ಅದು ಹುಣ್ಣಾಗಿ ಐದಾರು ದಿನ ಆಸ್ಪತ್ರೆಗೆ ಹೋಗಬೇಕಾಗಿ ಬಂದಿತು. ಇನ್ನೊಂದುಸಾರಿ ತಾನೂ ಪಾಪಚ್ಚಿಯೂ (ಶಾಮು ಸ್ಕೂಲಿಗೆ ಹೋದ ಮೇಲೆ ಮನೆಯಲ್ಲಿ ಅವಳೊಂದಿಗೆ ಆಟವಾಡಲು ಬೇರೆ ಯಾರೂ ಇರು ತ್ತಿರಲಿಲ್ಲ. ಆದ್ದರಿಂದ, ಆವಳು ತನ್ನನ್ನು ಇಬ್ಬರು ಎಂದು ಭಾವಿಸಿ ಕೊಳ್ಳುವಳು.) ಕಣ್ಣಾಮುಚ್ಚಾಲೆ ಆಟವಾಡುತ್ತಾ ಪಾಪಚ್ಚಿಯು ಹತ್ತಿರ ಯಾವುದೋ ಒಂದು ಸುಳ್ಳು ಹೇಳಿದ್ದಕ್ಕಾಗಿ ತನ್ನನ್ನೇ ಬಹಳವಾಗಿ ಹೊಡೆದುಕೊಂಡುಬಿಟ್ಟಿದ್ದಳು. ಹೀಗೆಯೇ, ಯಾರೂ ಹತ್ತಿರದಲ್ಲಿ ಇಲ್ಲ ದಿದ್ದರೆ ತಾನು ಇಬ್ಬರೆಂದು ಭಾವಿಸಿಕೊಂಡು ಮಾತನಾಡುವುದು ಅವಳಿಗೆ ಅಭ್ಯಾಸವಾಗಿತ್ತು. "ಆದರೆ, ಈಗ ನನ್ನನ್ನು ಇಬ್ಬರೆಂದು ಇಟ್ಟುಕೊಳ್ಳುವು ದಕ್ಕಾಗುವುದೇ ಇಲ್ಲ....ಸರಿಯಾದ ಹುಡುಗಿ ಒಬ್ಬಳಿಗೆ ಕೂಡ ಸಾಲದು ಈ ನನ್ನ ವಾಮನಾವತಾರ!" ಎಂದು ಅಂದುಕೊಂಡಳು.

ಪಾಪಚ್ಚಿ ಮೇಜಿನ ಕೆಳಗೆ ನೆಲದಮೇಲೆ ಕುಳಿತು ಕೊರಗುತ್ತಿದ್ದಳು. ಚಿನ್ನದ ಬೀಗದ ಕೈಯ ಹೊಳಪು ಎಲ್ಲೋ ಆಕಾಶದಲ್ಲಿ ಕಾಣಿಸುತ್ತಿತ್ತು. ಅಳುವನ್ನು ಕೊಂಚ ಹೊತ್ತಿನ ಮೇಲೆ ನಿಲ್ಲಿಸಿ ಅವಳು ಸುತ್ತಲೂ ಇನ್ನೊಂದು ಸಾರಿ ನೋಡಿದಳು. ಗೋಡೆಯ ಅಂಚಿನಲ್ಲಿಯೇ ಹೆಜ್ಜೆ ಹಾಕುತ್ತ ನಡೆದು ಹೋದಳು. ಇನ್ನು ಯಾವುದಾದರೂ ಬಾಗಿಲುಗಳಾಗಲಿ, ತೆರೆಗಳಾಗಲಿ ಇವೆಯೇ ಎಂದು ಪರೀಕ್ಷಿಸಿದಳು. ಯಾವುದೂ ಇರಲಿಲ್ಲ.

ಆಗ, ಅಲ್ಲಿ, ಅವಳು ಕುಳಿತಿದ್ದ ಜಾಗದಲ್ಲಿಯೇ ಒಂದು ಸಣ್ಣ ಗಾಜಿನ ಪೆಟ್ಟಿಗೆ! ಶಾಮುವಿನ "ಜಾಮೆಟ್ರಿ" ಪೆಟ್ಟಿಗೆಯಷ್ಟೆ ಚಿಕ್ಕದು. ಪಾಪಚ್ಚಿ

ಅದನ್ನು ತೆಗೆದುನೋಡಿದಳು. ಅದರಲ್ಲಿ ಒಂದು ಜಿಲೇಬಿ ಗಮಗಮಿಸಿತು. "ತಿನ್ನಿರಿ" ಎಂಬ ಮೂರು ಕನ್ನಡ ಅಕ್ಷರಗಳನ್ನು ಒಂದಕ್ಕೊಂದು ಸೇರಿಸಿ ಹೆಣೆದ ಹಾಗೆ ಇತ್ತು ಅದರ ಆಕಾರ. "ಏನಾದರೂ ಆಗಲಿ! ಇದನ್ನು ತಿಂದುಬಿಡುತ್ತೇನೆ. ಎತ್ತರವಾಗಿ ಬೆಳೆದರೆ ಬೀಗದ ಕೈಯನ್ನು ತೆಗೆದು ಕೊಳ್ಳಬಹುದು. ಇನ್ನೂ ಚಿಕ್ಕವಳಾಗಿ ಎತ್ತರ ಕಡಮೆಯಾದರೆ, ಬಾಗಿಲ ಸಂದಿನಿಂದಲೇ ತೋಟಕ್ಕೆ ನುಗ್ಗಿಬಿಡಬಹುದು. ಅಂತೂ, ಜಿಲೇಬಿ ಚೆನ್ನಾಗಿರುವ ಹಾಗಿದೆ. ಆದದ್ದಾಗಲಿ!" ಎಂದು ಪಾಪಚ್ಚಿ ನಿರ್ಧರಮಾಡಿದಳು.

ತನ್ನ ಎತ್ತರ ಹೆಚ್ಚುತ್ತದೋ, ಕಡಮೆಯಾಗುವುದೋ, ಎಂಬುದನ್ನು ಗೊತ್ತುಮಾಡಲು ಮೊದಲು ತನ್ನ ಅಂಗೈಯನ್ನು ತಲೆಯ ಮೇಲುಗಡೆ ಇಟ್ಟುಕೊಂಡಳು, ತಲೆ ಹೋಗಿ ಸೂರಿಗೆ ಹೊಡೆಯುತ್ತದೋ ಏನೋ ನೋಡೋಣ, ಅಂತ. ಅನಂತರ, 'ತಿ' ಚೂರನ್ನು ಮುರಿದು ಬಾಯಿಗೆ ಹಾಕಿಕೊಂಡಳು. ಏನೂ ಆಗಲಿಲ್ಲ. ಹಿಂದೆ ಇದ್ದ ಹಾಗೆಯೇ! ಪಾಪಚ್ಚಿಗೆ ಕೊಂಚ ಆಶಾಭಂಗವಾಯಿತು. ನಿಜವಾಗಿ ನೋಡಿದರೆ ಅವಳ ವ್ಯಥೆಗೆ ಯಾವ ಕಾರಣವೂ ಇರಲಿಲ್ಲ, ಅಲ್ಲವೆ ನೀವೇ ಹೇಳಿ! ಸಾಧಾರಣವಾಗಿ ಜಿಲೇಬಿ ತಿಂದರೆ ಕೂಡಲೇ ಮಕ್ಕಳ ಎತ್ತರ ಎಳ್ಳಷ್ಟೂ ಹೆಚ್ಚುವುದಿಲ್ಲ. ಆದರೂ, ಅಲ್ಲಿ, ಪಾತಾಳದಲ್ಲಿ, ತಿಂದಿದ್ದೆಲ್ಲಕ್ಕೂ ಒಂದು ಅದ್ಭುತವಾಗಲೇ ಬೇಕೆಂದು ಅವಳು ಎದುರುನೋಡುತ್ತಿದ್ದಳು. ಏನೂ ಆಗಲಿಲ್ಲ. ಸರಿ, ಇನ್ನೇನು ಮಾಡುವುದು 'ನ್ನಿ' ಯನ್ನೂ ತಿಂದಳು. ಜಿಲೇಬಿಯ ರುಚಿ ಚೆನ್ನಾಗಿತ್ತು. ಆದ್ದರಿಂದ, ಅವಳು ಅದನ್ನು ಸಂಪೂರ್ಣ ತಿಂದು ಮುಗಿಸಿದಳು.

---

## ಕಣ್ಣೀರಿನ ಕೆರೆ

"ಇದೀಗ ತಮಾಷೆ! ಒಳ್ಳೇ ಗೋಜಿಗ! ಎಂದು ಪಾಪಚ್ಚಿ ಕೂಗಿ ಕೊಂಡಳು. ಆಶ್ಚರ್ಯದ ಭರಾಟೆಯಲ್ಲಿ ಅವಳಿಗೆ ಅಚ್ಚು ಕನ್ನಡ ಮರೆತೇ ಹೋಯಿತು! "ಅಣ್ಣನ ಕ್ಯಾಮೆರಾದ ಕಾಲಿನ ಹಾಗೆ ನಾನೂ ಉದ್ದವಾಗುತ್ತಿದೇನೆ!....ಅಯ್ಯೋ! ನನ್ನ ಕಾಲುಗಳೆಲ್ಲಿ? ಎಷ್ಟು ದೂರ

ದಲ್ಲಿವೆ! ಕಣ್ಣಿಗೆ ಗಾಣಿಸುವುದೇ ಕಷ್ಟ. ಸರಿ! 'ಕಾಲುಗಳೇ! ನಾನು ಹೋಗಿಬರುತ್ತೇನೆ....ಪಾಪ! ನಿಮಗೆ ಇನ್ನು ಜೋಡು ಮೆಟ್ಟಿಸುವವರು ಯಾರು? ನನ್ನಿಂದ ಅಷ್ಟು ಕೆಳಕ್ಕೆ ಬಗ್ಗಲು ಸಾಧ್ಯವಿಲ್ಲ. ನೀವಾಯಿತು, ನಿಮ್ಮ ಪಾಡಾಯಿತು. ನನ್ನನ್ನ ಪೀಡಿಸಬೇಡಿ. ಇನ್ನು ಮೇಲೆ ನನ್ನನ್ನು ನೆಚ್ಚಲೂಬೇಡಿ....ಆದರೆ, ಕಾಲುಗಳ ಸ್ನೇಹ ಉಳಿಸಿಕೊಳ್ಳದಿದ್ದರೆ, ನಾಳೆ ಅವು ನನ್ನನ್ನು ಅಲ್ಲಿ ಇಲ್ಲಿ ಕರೆದುಕೊಂಡು ಹೋಗಬೇಕಲ್ಲ. ಇರಲಿ! ಗೌರಿ ಹಬ್ಬಕ್ಕೆ ಸರಿಯಾಗಿ ಗೊಲಸು ಮಾಡಿಸಿಕೊಡುತ್ತೇನೆ ಅಂತ ಅಣ್ಣ ಹೇಳಿದ್ದ. ಅದನ್ನು ಕೊಟ್ಟರೆ ಅವಕ್ಕೆ ತೃಪ್ತಿಯಾಗಬಹುದು....ಅದನ್ನು ಅವಕ್ಕೆ ಕಳುಹಿಸುವುದು ತಾನೆ ಹೇಗೆ?....ಚಿಂತೆ ಇಲ್ಲ, ಟಪಾಲಿಗೆ ಹಾಕಿದರಾಯಿತು. ವಿಳಾಸ?

ಚಿ. ಸೌ. ಹ. ಕುಂ. ಶೋ. ಪಾಪಚ್ಚಿಯ ಬಲಗಾಲು, ಎಡಗಾಲು,
ಶಾಮು ಓದುವ ಕೊಠಡಿಯ ಸೆಲ್ಫ,
ನಮ್ಮ ಮನೆ ಬೀದಿ,
ಮೈಸೂರು.

(ನಿಮ್ಮ ಕ್ಷೇಮಾಭಿಲಾಷಿ ಪಾಪಚ್ಚಿಯ ಒಲವಿನ ಉಡುಗೊರೆ)

........ಥೂ. ಪಾಪಚ್ಚಿ! ಸಾಕು, ಸುಮ್ಮನಿರೆ. ಯಾಕೊ ಬರಬರುತ್ತಾ ನಿನ್ನ ಮಾತು ಹುಚ್ಚು ಹುಚ್ಚು. ನಿನ್ನ ಕಾಲಿಗೆ ನೀನೆ ಓಲೆ ಬರೆಯುತ್ತೀಯಾ? ಸಾಕು, ನಿಲ್ಲಿಸೆ, ನಿನ್ನ ಪುಣ್ಯಕ್ಕೆ." ಹೀಗೆ ಮಾತನಾಡುತ್ತಾ ಇರುವಾಗ, ಬಹು ಎತ್ತರವಾಗಿ ಬೆಳೆದಳು. ಇನ್ನೂ ಬೆಳೆದು ಆಕಾಶವನ್ನು ತೂತು ಮಾಡಿರುವಳೋ, ಏನೊ? ಅಷ್ಟರೊಳಗೆ ಅವಳ ತಲೆ ಮೇಲುಚಾವಣಿಗೆ ತಗುಲಿತು. ಆಗ, ಅವಳು ಸುಮಾರು ಒಂಬತ್ತಡಿಯಷ್ಟು ಬೆಳೆದುಬಿಟ್ಟಿದ್ದಳು. ಚಿನ್ನದ ಬೀಗದ ಕೈಯನ್ನು ಕೈಯಲ್ಲಿ ಹಿಡಿದುಕೊಂಡು ಒಂದೇ ಹೆಜ್ಜೆಗೆ ತೋಟದ ಕಿರುಬಾಗಿಲ ಹತ್ತಿರ ಬಂದಳು. ಆದರೆ, ಪ್ರಯೋಜನವೇನು? ಹೊರಗೆ ಹೋಗುವುದು ಹಾಗಿರಲಿ, ಕಣ್ಣಿಂದ ಆ ನೋಟವನ್ನು ಇನ್ನೊಮ್ಮೆ ನೋಡುವುದಕ್ಕೂ ಕೂಡ ಸಾಧ್ಯವಾಗಲಿಲ್ಲ. ಪಾಪ! ತನ್ನ ಸಂಕಟವನ್ನು ತೋಡಿಕೊಳ್ಳುವುದಕ್ಕೆ ಅಲ್ಲಿ ಒಂದು ಪ್ರಾಣಿಯಾದರೂ ಇರಬೇಕಲ್ಲ!....ಇನ್ನೇನು ಮಾಡುತ್ತಾಳೆ? ಅಳುತ್ತಾ ಕುಳಿತಳು.

"ನಾಚಿಕೆ ಗೀಚಿಕೆ ಇಲ್ಲವೇನೆ? ಕಂಬದ ಹಾಗೆ ಬೆಳೆದುಬಿಟ್ಟು ಎಳೆಯ ಕೂಸಿನಂತೆ ಬಳಬಳನೆ ಕಣ್ಣೀರು ಸುರಿಸುತ್ತಾಳೆ. ಅವಲಕ್ಷಣ ಸಾಕು. ನಿಲ್ಲಿಸೆ" ಎಂದು ಎಷ್ಟು ಹೇಳಿಕೊಂಡರೂ ಪ್ರವಾಹ ಬತ್ತಲಿಲ್ಲ. ಕನ್ನಂಬಾಡಿ ಕಟ್ಟೆಯ ಕೆಳಬಾಗಿಲುಗಳನ್ನು ತೆರೆದ ಹಾಗೆ! ಅವಳ ಸುತ್ತ ನೀರು ಐದಾರು ಅಂಗುಲ ಆಳದ ಒಂದು ಕೆರೆಯ ಹಾಗಾಗಿ ಬಿಟ್ಟಿತ್ತು. ಯಾವುದನ್ನೂ ಗಣಿಸದೆ, ಯಾರಿಗೂ ಹೆದರದೆ, ಪಾಪಚ್ಚಿ ಅಳುತ್ತಲೇ ಇದ್ದಳು.

ಆಗ ಅವಳ ಹಿಂದುಗಡೆ ಹತ್ತಿರ ಹತ್ತಿರ ಬೇಗನೆ ಬರುತ್ತಿದ್ದ ಹೆಜ್ಜೆ ಸಪ್ಪುಳ ಕೇಳಿಸಿತು. "ನಿಲ್ಲಿಸೆ, ಮಾರಿ! ಯಾರೋ ಗಂಡಸರು ಬರುವ ಹಾಗಿದೆ" ಎಂದು ಬೈದುಕೊಂಡು ಅಳುವನ್ನು ನಿಲ್ಲಿಸಿ ಕಣ್ಣೊರಸಿಕೊಂಡು ಹಿಂದಿರುಗಿ ನೋಡಿದಳು. ಬರುತ್ತಿದ್ದದ್ದು,—ಆ ಬಿಳಿಯ ಮೊಲ. ಕರಿಯ ಅಂಗಿ, ಸರಿಗೆ ರುಮಾಲು, ಕೈಯಲ್ಲಿ ಒಂದು ಬೆಳ್ಳಿಯ ನಸ್ಯದ ಡಬ್ಬಿ, ವಸ್ತ್ರ. ಹಿಂದಿನ ವೇಷ ಕೊಂಚ ಬದಲಾಯಿಸ್ದಿರೂ ಅದೇ ಆತುರ, ಅದೇ ಅವಸರ. "ಅಯ್ಯೋ ದೇವರೇ! ಹೊತ್ತಾಗಿಹೋಯಿತು. ಅಮ್ಮಾವರು ಹೊಡೆದು ಕೆಡವಿಬಿಡುತ್ತಾರೆ. ಅಯ್ಯೋ!"....ಅದೇ ಗೊಣಗು; ಅದೇ ಗೋಳು.

ಪಾಪಚ್ಚಿಗೆ, ಆಗಿನ ದುರವಸ್ಥೆಯಲ್ಲಿ ಯಾರ ಕಾಲಿಗಾದರೂ ಎರಗಿ ಅಲ್ಲಿಂದ ಪಾರಾಗಬೇಕೆನ್ನಿಸಿತು. ಆದ್ದರಿಂದ, ಮೊಲದ ಅವಸರವನ್ನು ಗಣಿಸದೆ ಅವಳು ಅದರ ಹತ್ತಿರ ಸರಿದು, "ರೀ" ಎಂದು ಕರೆದಳು. ಮೊಲಗಳ ಎದೆ ಎಷ್ಟು ಗಟ್ಟಿಯೆಂದು ನಿಮಗೆ ಗೊತ್ತಿರಬಹುದು. ಉತ್ತರ ಕುಮಾರನಿಗೆ ಎಷ್ಟು ಧೈರ್ಯ ಇತ್ತೋ ಅಷ್ಟೇ ಧೈರ್ಯ ಪ್ರತಿಯೊಬ್ಬ ಶಶಿಕುಮಾರನಿಗೂ ಇದೆ ಎಂದರೆ ಸುಳ್ಳಾಗಲಾರದು. ಪಾಪಚ್ಚಿ ಬಹಳ ತಾಳ್ಮೆಯಿಂದ, ನಯ ನಾಜೋಕಿನಿಂದ, ಅಂಜಿಕೆಯಿಂದ, "ರೀ" ಎಂದು ಹೇಳಿದ್ದಳು. ಅದನ್ನು ಕೇಳಿ, ಮೊಲಮಹರಾಯ ಹೆದರಿ ನಡುಗುತ್ತಾ ನಸ್ಯದ ಡಬ್ಬಿಯನ್ನೂ ಕರವಸ್ತ್ರವನ್ನೂ ಕೆಳಗೆ ಕೆಡವಿ, "ಅಯ್ಯೋ! ಅಪ್ಪಾ!" ಎಂದುಕೊಂಡು ಓಡಿಹೋಯಿತು.

ಇನ್ನೇನು ಗತಿ?.....ಮೊಲದ ಕರವಸ್ತ್ರವನ್ನು ತೆಗೆದುಕೊಂಡು ಮುಖವನ್ನು ಒರಸಿಕೊಳ್ಳುತ್ತಾ, ಎಂದಿನಂತೆ ತನಗೆ ತಾನೇ ಬುದ್ಧಿವಾದ ಹೇಳಿಕೊಂಡು, ಹೇಗೋ ಕಾಲವನ್ನು ನೂಕಿದಳು; ಮನಸ್ಸನ್ನು ಸಂತೈಸಲು ಪ್ರಯತ್ನಿಸಿದಳು. "ಇವತ್ತು ಹಾಸಿಗೆಯಿಂದ ಎದ್ದೊಡನೆಯೆ ನಾನು ಯಾರ ಮುಖ ಕಂಡೆ? ನಿನ್ನೆ ರಾತ್ರಿ ಮಲಗಿಕೊಳ್ಳುವ ತನಕ ನಾನು ಪಾಪಚ್ಚಿ ಆಗಿದ್ದೆ. ಆದರೆ, ಬೆಳಗಿನಿಂದ ಬೇರೆ ಇನ್ನು ಯಾವ ಹುಡುಗಿಯೋ ಆಗಿಬಿಟ್ಟಿದ್ದೇನೆಂದು ತೋರುತ್ತೆ. ಯಾರಾಗಿಬಿಟ್ಟೆ? (ತನ್ನ ವಯಸ್ಸಿನ ಇತರ ಹುಡುಗಿಯರ ಹೆಸರುಗಳನ್ನೆಲ್ಲವನ್ನೂ ಒಂದೊಂದಾಗಿ ನೆನಪಿಗೆ ತಂದುಕೊಂಡು)—ನಾನು ಸರಸುವೆ? ಇರಲಾರದು. ಶಾರದಾನೆ? ಇಲ್ಲ. ಅವಳ ಹಾಗೆ ಉದ್ದಮೂತಿ ನನಗೆ ಎಲ್ಲಿದೆ? ಕಮಲುವೆ? ಥೂ. ಅವಳಿಗೆ ನನಗಿರುವ ಹಾಗೆ ಹಸಾದು ರೇಷ್ಮೆಯ ಲಂಗವೇ ಇಲ್ಲ. ಇನ್ನು ಯಾರು? ಪಂಕಜಾನೆ? ಇರುಬಹುದೋ ಏನೋ? ಆದರೆ. ಅವಳಿಗೆ ನನ್ನಷ್ಟು ಬೇಗ ಓದುವುದಕ್ಕೆ ಬರುವುದಿಲ್ಲ. ನಾಗುವೇ? ಪಾಪ! ಅವಳಿಗೆ ಮನೆಯಲ್ಲಿ ನಮ್ಮ ಶಾಮುವಿನ ಹಾಗೆ ಚಿಕ್ಕ ಅಣ್ಣ ಯಾರೂ ಇಲ್ಲ, ಒಬ್ಬಳೇ ಒಬ್ಬಳು ಮನೆಯಲ್ಲಿ ಯಾವಾಗಲೂ ಚೆಂಡು ಆಡುತ್ತಿರಬೇಕು. ಇಲ್ಲ. ನಾನು ನಾಗು ಅಲ್ಲ. ಅದೂ ಅಲ್ಲದೆ, ಅವಳು ಅವಳು, ನಾನು ನಾನು, ಅಲ್ಲವೆ? ನಾನು ಹೇಗೆ ಅವಳಾಗುವುದು? ಹಾಗಾದರೆ, ಈಗ ನಾನು ನಾನೇಯೋ? ಇನ್ನು ಯಾರೂ ಅಲ್ಲವೋ? ಥೂ. ಉತ್ತರವೇ ಸರಿಯಾಗಿ ಬರುವುದಿಲ್ಲ, ಲೆಕ್ಕಕ್ಕೆ. ಗೊತ್ತುಮಾಡುವುದು ಬಹು ಕಷ್ಟ! ಅಕ್ಕ ಇಲ್ಲಿ ಇದ್ದಿದ್ದರೆ ಅವಳನ್ನು ಕೇಳಿ ತಿಳಿದುಕೊಳ್ಳಬಹುದಾಗಿತ್ತು. ಶಾಮುವನ್ನು ಕೇಳಿದರೆ ಅವನು ನಿಜ ಹೇಳದೆ ಸುಮ್ಮನೆ ಗೇಲಿಮಾಡುತ್ತಾನೆ, ಅಷ್ಟೆ. ಅಕ್ಕನೇ ಇರಬೇಕಾಯಿತು ........ ಬೇಡ........ ಪರವಾ ಇಲ್ಲ. ಒಂದು ಉಪಾಯ ಇದೆ. ನನಗೆ ನಿನ್ನೆ ಸಾಯಂಕಾಲ ಬರುತ್ತಿದ್ದ ಪಾಠಗಳೆಲ್ಲವೂ ಈಗ ಸಲೀಸಾಗಿ ಬಾಯಿಗೆ ಬಂದರೆ, ನಾನು ಇನ್ನೂ ಪಾಪಚ್ಚಿಯೇ ಹೌದು. ಇಲ್ಲದೆ ಇದ್ದರೆ, ನಾನು ಪಂಕಜಾ, ಅಥವಾ, ವೇಣಿ. 'ನೋಡೋಣ—ಒಂದು ನಾಲ್ಕು ನಾಲ್ಕು; ಎರಡು ನಾಲ್ಕು ಐದು; ಮೂರು ನಾಲ್ಕು ಸಾಕು; ಮೂರೈದು ಹಾಕು; ಮೂರೆಂಟೈದು

........ 'ಅಬ್ಬಬ್ಬ! ಹೀಗೆ ಇಪ್ಪತ್ತರ ಮಗ್ಗಿತನಕ ಹೇಳಿ ಮುಗಿಸುವುದು ಯಾವಾಗ? ಅದೂ ಅಲ್ಲದೆ ಮಗ್ಗಿಯಿಂದ ಪತ್ತೆಮಾಡಲು ಆಗುವುದಿಲ್ಲ. ಅದು ಸಾಧಾರಣ ಎಲ್ಲರಿಗೂ, ವೇಣೀಗೂ ಸರಿಯಾಗಿಯೇ ಬರುತ್ತೆ. ಭೂ ವಿವರಣೆ ಹೇಳಿ ನೋಡೋಣ........'ಬ್ರಹ್ಮಗಂಗಾ, ಗೋದಾನದಿ, ತುಂಗ, ಕೃಷ್ಣಾ, ಸಾವೇರಿ........' ಅಯ್ಯಯ್ಯೋ! ಒಂದೂ ಸರಿಯಾಗಿ ಬಾಯಿಗೆ ಬರುತ್ತಾ ಇಲ್ಲ. ನಾನು ಪಂಕಜಾನೇ ಆಗಿದೇನೆ........ಅದಿರಲಿ! ........ ಪದ್ಯ? ........ಅದು ತಪ್ಪುವಹಾಗಿಲ್ಲ, ಎಷ್ಟೋಸಲ ಹೇಳಿ ಹೇಳಿ ರೂಢಿ ಯಾಗಿದೆ.... ...ಎನ್ನುತ್ತ ಅವಳು ಎದ್ದುನಿಂತು ಕೈ ಕಟ್ಟಿಕೊಂಡು ಪದ್ಯ ಪಾಠ ಒಪ್ಪಿಸಿದಳು.

ಒಂದು ಮೂರು ಚಕ್ಕುಲಿ ಚೂರು
ಐದು ಎರಡು ಊರಿಗೆ ಹೊರಡು
ನಾಲ್ಕು ಎಂಟು ಅಜ್ಜಿಯ ಗಂಟು
ಏಳು ಆರು ಮೆಣಸಿನ ಸಾರು
ಒಂಭತ್ತು ಹತ್ತು ಕನ್ನಡಿ ಬಿತ್ತು.

ಇದೇನಿದು? ಮೇಡಂ ಹೇಳಿಕೊಟ್ಟಿದ್ದರಲ್ಲಿ 'ಅಜ್ಜಿಯ' ಸಮಾಚಾರವೇ ಇರಲಿಲ್ಲವಲ್ಲಾ! 'ಮೆಣಸಿನ ಸಾರು' ಅನ್ನುವುದೂ ತೀರ ಹೊಸದು. ಅಯ್ಯೋ! ನಾನು ಹೇಳಿದ್ದು ಶುದ್ಧತಪ್ಪು. ಸರಿ! ನಾನು ನಿಜವಾಗಿಯೂ ಪಂಕಜಾ! ಇನ್ನು ನಾನು ಹೋಗಿ ಅವರ ಮನೆಯಲ್ಲಿರಬೇಕಾಗುತ್ತೆ. ಅಲ್ಲಿ ಒಂದು ನಾಯಿಯನ್ನು ಬೇರೆ ಸಾಕುತ್ತಾರೆ. ನನ್ನನ್ನು ಕಂಡರೆ ಅದು ಬೊಗುಳಿಕೊಂಡು ಹಾರುತ್ತೆ .... ಹಾಡಿನ ಮೇಷ್ಟ್ರು ಬೇರೆ ಹಗಲೂ ರಾತ್ರಿ ಪೆಟ್ಟಿಗೆ ಒತ್ತು ಅಂತ ಪ್ರಾಣ ತೆಗೆಯುತ್ತಾರೆ........ಇಲ್ಲ........ನಾನು ಪಂಕಜಾ ಆಗಿಬಿಟ್ಟಿದ್ದರೆ ಖಂಡಿತ ಇಲ್ಲಿಂದ ಹೋಗುವುದೇ ಇಲ್ಲ. ಯಾರಾದರೂ ಬಂದು 'ಬಾರೆ, ಮನೆಗೆ' ಅಂತ ಕರೆದರೆ, 'ನಾನು ಯಾರು ಹೇಳಿ, ನನ್ನ ಹೆಸರೇನು?' ಅಂತ ಕೇಳುತ್ತೇನೆ. ಅವರು ಹೇಳುವ ಹೆಸರಿನ ಹುಡುಗಿಯಾಗಿರುವುದಕ್ಕೆ ನನಗೆ ಇಷ್ಟವಿದ್ದರೆ ಎದ್ದು ಅವರ ಜೊತೆಯಲ್ಲಿ ಹೊರಡುತ್ತೇನೆ. ಇಲ್ಲದಿದ್ದರೆ ತಿರುಗಿ ಪಾಪಚ್ಚಿ ಆಗುವತನಕ ಇಲ್ಲೇ, ಕುಕ್ಕರಿಸುತ್ತೇನೆ........... ಅಷ್ಟೆ! ಯಾರು ಬೇಡ

ಅನ್ನುವುದಕ್ಕೆ ? .... ಯಾಕೆ ಯಾರೂ ಇನ್ನೂ ಬರುವುದಿಲ್ಲ?'' ಪಾಪಚ್ಚಿಗೆ ಮತ್ತೆ ಅಳು ಬಂತು. "ಇಷ್ಟು ಹೊತ್ತಿಗೆ ಅಣ್ಣ ಮನೆಗೆ ಬಂದಿರಬೇಕು. ಪಾಪಚ್ಚಿ ಎಲ್ಲಿ ಅಂತ ಕೇಳಿರಬೇಕು, ಹುಡುಕುತ್ತಿರಬೇಕು........ಒಬ್ಬಳೇ ಇಲ್ಲಿ ಎಷ್ಟು ಹೊತ್ತು ಕುಳಿತಿರಬೇಕೋ?" ಹೀಗೆ, ಪಾಪಚ್ಚಿಯ ಪ್ರಲಾಪ ಬರಬರುತ್ತಾ ಹೆಚ್ಚು ಬೆಳೆಯಿತು. ಕಂಗೆಟ್ಟಂತಾಯಿತು.

ಅಳುತ್ತಿದ್ದ ಹಾಗೆಯೇ ಅವಳ ಕಣ್ಣಿಗೆ ಮೊಲದ ಬೆಳ್ಳಿ ನಸ್ಯದ ಡಬ್ಬಿ ಕಾಣಿಸಿತು. ಅದನ್ನೂ ಕೈಯಲ್ಲಿ ತೆಗೆದುಕೊಂಡಳು. ಬಹಳ ಚಿಕ್ಕ ಡಬ್ಬಿ. ಒಂದು ಬಾದಾಮಿಯಷ್ಟು ಇತ್ತೆನ್ನಬಹುದು. ಆದರೂ, ಅದು ಪಾಪಚ್ಚಿಯ ಕೈ ಹಿಡಿತಕ್ಕೆ ಸರಿಯಾಗಿತ್ತು. "ಇದೇನು ? ನನ್ನ ಕೈ ಇಷ್ಟು ಚಿಕ್ಕದಾಗಿ ಹೋಯಿತೆ?....ಓ! ನಾನು ಇನ್ನೊಂದು ಬಾರಿ ಕಿರಿದಾಗುತ್ತಿದೇನೆ" ಎಂದು ಕೊಳ್ಳುತ್ತಾ, ತನಗೆ ಈಗ ಎಷ್ಟು ಎತ್ತರವೆಂದು ಗೊತ್ತುಮಾಡಲು ಮೇಜಿನ ಬಳಿಗೆ ಬೇಗ ಬೇಗನೆ ನಡೆದಳು. ಹೌದು. ಸುಮಾರು ಒಂದು ಮೊಳ, ಅಷ್ಟೆ! ಅವಳು ಇನ್ನೂ ಕುಗ್ಗುತ್ತಲೇ ಇದ್ದಳು. ಹೀಗೆ ಕಿರಿದಾಗುತ್ತಾ, ಕುಗ್ಗುತ್ತಾ, ಕೊನೆಗೆ 'ಪಾಪಚ್ಚಿ' ಎಂಬ ಹೆಸರೂ ಕೂಡ ನೆಲದ ಮೇಲೆ ಉಳಿಯುವುದೋ ಇಲ್ಲವೋ ಎಂದು ಅವಳಿಗೆ ಹೆದರಿಕೆ ಹತ್ತಿತು. ತನ್ನ ಆಕಾರ ಚಿಕ್ಕದಾಗಲು ಕಾರಣವೇನೆಂದು ಬೇಗ ಬೇಗ ಯೋಚಿಸಿದಳು. ಯಾವುದನ್ನೂ ತಿನ್ನಲಿಲ್ಲ, ಕುಡಿಯಲಿಲ್ಲ. ಶುದ್ಧ ಅನ್ಯಾಯ, ಎಂದುಕೊಂಡಳು. ತಾನು ಉಪಯೋಗಿಸುತ್ತಿದ್ದ ಮೊಲದ ಕರವಸ್ತ್ರವೇ ಕಾರಣವಿರಬಹುದೆಂದು ಊಹಿಸಿ, ಬೇಗನೆ ಅದನ್ನು ದೂರ ಬಿಸಾಡಿದಳು. ದೇವರ ದಯೆಯಿಂದ ತಗ್ಗುವುದೂ ನಿಂತಿತು.

"ಅಬ್ಬಾ! ಉಳಿದುಕೊಂಡೆ" ಎಂದು ಸಣ್ಣ ಬಾಗಿಲಿದ್ದಲ್ಲಿಗೆ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಪುಟಪುಟನೆ ಓಡಿದಳು. ಆದರೆ, ದಾರಿಯಲ್ಲಿ ಕಾಲು ಜಾರಿ, ಅಲ್ಲಿದ್ದ ಒಂದು ಉಪ್ಪುನೀರಿನ ಕೆರೆಯಲ್ಲಿ ಬಿದ್ದಳು. ಪಾಪ! ಕುತ್ತಿಗೆತನಕ ನೀರು. ದಾಟಿಕೊಂಡು ದಡ ಸೇರುವುದು ತುಂಬಾ ಕಷ್ಟವಾಗಿತ್ತು. ಮೊದಮೊದಲು ತಾನು ಬಿದ್ದಿರುವುದು ಸಮುದ್ರದಲ್ಲಿಯೇ ಇರಬೇಕೆಂದು ಪಾಪಚ್ಚಿ ತೀರ್ಮಾನಿಸಿದಳು. "ಹಾಗಾದರೆ ನನಗೆ ಭಯವೇ ಇಲ್ಲ. ಇಲ್ಲಿ ಹತ್ತಿರವೇ ರೈಲು ಸ್ಟೇಷನ್ನಿರುತ್ತೆ. ರೈಲು ಹತ್ತಿ ಮನೆಗೆ

ಹೋಗಬಹುದು" ಎಂದು ಸಮಾಧಾನಪಟ್ಟಳು. (ಏಕೆಂದರೆ, ಎರಡು ವರ್ಷಗಳ ಹಿಂದೆ ಅವಳ ಮನೆಯವರೆಲ್ಲರೂ ಸೇತು ಯಾತ್ರೆಗೆ ಹೋಗಿದ್ದರು. ಪಾಪಚ್ಚಿ ಸಮುದ್ರವನ್ನು ನೋಡಿದ್ದು ಅದೇ ಮೊದಲು. ಸೇತು ಸ್ನಾನವಾದ ಕೂಡಲೆ ಅವರು ರೈಲು ಹತ್ತಿ ಬಿಡಾರದ ಕಡೆ ಹೊರಟಿದ್ದರು. ಆದ್ದರಿಂದ ಸಮುದ್ರವೆಂದರೆ, ಉಪ್ಪುನೀರು, ಜನರ ಗದ್ದಲ, ರೈಲು ಸ್ಟೇಷನ್ ಇವೆಲ್ಲಾ ಒಟ್ಟು ಸೇರಿರುವ ಜಾಗವೆಂದು ಅವಳು ತಿಳಿದುಕೊಂಡಿದ್ದಳು.) ಆದರೆ, ತಾನು ಒಂಬತ್ತಡಿ ಎತ್ತರದ ದೊಡ್ಡ ಹೆಂಗಸಾಗಿದ್ದಾಗ ಅತ್ತ ಕಣ್ಣೀರಿನ ಕೆರೆ ಅದು ಎಂದು ಪಾಪಚ್ಚಿಗೆ ಒಡನೆಯೇ ಗೊತ್ತಾಯಿತು. "ನಾನು ಇಷ್ಟು ಅಳ ಅಳಬಾರದಾಗಿತ್ತು. 'ಕಣ್ಣ ನೀರಲಿ ಮುಳುಗಿ ತೇಲಿದರಹಿತರಾಜರ ಸತಿಯರು' ಎಂದು ಶಾಮು ಓದುತ್ತಿದ್ದ. ಅದರ ಹಾಗೆ, ಈಗ ನನ್ನ ಕಣ್ಣೀರಲ್ಲಿ ನಾನೇ ಮುಳುಗುವ ಹಾಗಾಗಿದೆ. ಇದೆಂತಹ ಶಿಕ್ಷೆ! ಆಗ, ಅದು ಹೇಗೆ ಸಾಧ್ಯ ಎಂದು ಶಾಮು ಅಣ್ಣನನ್ನು ಕಾಡುತ್ತಿದ್ದ. ನಾನು ಹೋಗಿ ಅವನಿಗೆ ಇದನ್ನು ಹೇಳಿದರೂ, 'ಸುಳ್ಳು!' ಎಂದುಬಿಡುತ್ತಾನೆ, ಮಹಾ ತನಗೇ ಎಲ್ಲಾ ತಿಳಿದಿರುವ ಹಾಗೆ!" ಎಂದು ಹೇಳಿಕೊಳ್ಳುತ್ತಾ ಪಾಪಚ್ಚಿ ಆ ಕೆರೆಯ ಅಂಚಿನವರೆಗೂ ಬಂದಳು.

ಆಗ ಅದೇ ಕೆರೆಯಲ್ಲಿ ಕೊಂಚ ದೂರದಲ್ಲೇ ಯಾರೋ ಬಿದ್ದು ಒದ್ದಾಡುತ್ತ ಕೈಕಾಲು ಬಡಿಯುವ ಸದ್ದಾಯಿತು. ಒಂದು ಧ್ರುವ ಕರಡಿಯ ಹಾಗೆ ಕಾಣಿಸಿತು. ಪಾಪಚ್ಚಿಗೆ ದಿಗಿಲಾಯಿತು. ಆದರೆ, ತಾನು ಗೇಣುದ್ದದ ಪುಟ್ಟ ಹುಡುಗಿ ಎಂದು ಜ್ಞಾಪಿಸಿಕೊಂಡ ಮೇಲೆ, "ಓ! ಅದೊಂದು ಬಿಳಿಯ ಇಲಿ. ನನ್ನ ಹಾಗೆ ಅದೂ ನೀರಿಗೆ ಜಾರಿ ಗೋಳಾಡುತ್ತಿದೆ ಅಷ್ಟೆ" ಎಂದು ಕಂಡುಕೊಂಡಳು. ಒಂದು ನನೆದ ಇಲಿಗೆ ಅಷ್ಟು ಹೆದರಿದ್ದಕ್ಕಾಗಿ ಕೊಂಚ ನಾಚಿಕೊಂಡಳು.

"ಇಲ್ಲಿ ಎಲ್ಲವೂ ವಿಪರೀತವಾಗಿದೆ. ನಿನ್ನೆಯಂತೆ ಇವತ್ತಿಲ್ಲ; ಅಲ್ಲೊಂದು ವಿಧ, ಇಲ್ಲೊಂದು ವಿಧ! ಇದು ಯಾವುದೋ ಮಾಯದ ಊರು. ಈ ಇಲಿ ನನ್ನೊಂದಿಗೆ ಮಾತನಾಡಿದರೂ ಆಡಬಹುದು. ಅಂತು ಆಡಿಸಿನೋಡುತ್ತೇನೆ" ಎಂದು, ಪಾಪಚ್ಚಿ, "ರೀ, ಇಲಿಯೇ" ಎಂದು

ಕೂಗಿದಳು- (ಇಲಿಗಳೊಂದಿಗೆ ಸಂವಾದ ಪ್ರಾರಂಭಿಸಲು ಸರಿಯಾದ ಮರ್ಯಾದೆ ಮಾತು ಯಾವುದೆಂದು ಪಾಪಚ್ಚಿಗೆ ಮಾತ್ರವಲ್ಲ, ಅನೇಕ ದೊಡ್ಡ ವಿದ್ವಾಂಸರಿಗೆ ಕೂಡ ತಿಳಿಯದು. ಆದರೂ, ಧೈರ್ಯವಾಗಿ



ಪಾಪಚ್ಚಿ ಮಾತು ಕಥೆ ಪ್ರಾರಂಭಿಸಿಯೇ ಬಿಟ್ಟಳು. ಶಾಮುವಿನ ಹತ್ತಿರ ವಿದ್ದ ವ್ಯಾಕರಣ ಪುಸ್ತಕದಲ್ಲಿ,

| | |
|---|---|
| ಇಲಿ | ಇಲಿಗಳು |
| ಇಲಿಯೇ | ಇಲಿಗಳೇ |
| ಇಲಿಯನ್ನು | ಇಲಿಗಳನ್ನು |
| . . . . | . . . . |

ಎಂದು ಬರೆದಿದ್ದ ರೀತಿಯನ್ನು ಅವಳು ಬಲ್ಲಳು. ಆದ್ದರಿಂದ, "ರೀ, ಇಲಿಯೇ!" ಎಂದು ವಿನಯದಿಂದ ಸಂಬೋಧಿಸಿದಳು.) ಇಲಿ ಕಣ್ಣು ಮಿಟುಕಿಸಿತು; ಬಾಯಿ ತೆರೆಯಲೇ ಇಲ್ಲ. ಎಲ್ಲಿ ಗಂಟಲೊಳಕ್ಕೆ ಉಪ್ಪು ನೀರು ಹೋಗುತ್ತದೆಯೋ ಎಂಬ ಭಯವೋ, ಏನೋ? ತೆಪ್ಪಗಿತ್ತು. "ಓಹೋ! ಇದಕ್ಕೆ ನಮ್ಮ ಕನ್ನಡ ಬರುವುದಿಲ್ಲವೆಂದು ಕಾಣುತ್ತೆ. ಬಣ್ಣ ನೋಡಿ ನಾನು ಆಗಲೇ ತಿಳಿದುಕೊಳ್ಳಬೇಕಾಗಿತ್ತು. ಇದು ಈರೋಪಿ ಯನ್ ಗಣೇಶನ ವಾಹನ ಇರಬೇಕು. ಆದಕ್ಕೇನು? ಇಂಗ್ಲೀಷಿನಲ್ಲೇ

ಒಂದೆರಡು ಮಾತು ಬಿಟ್ಟರಾಯಿತು...." ಎಂದು ಹೇಳುತ್ತಾ, ಪಾಪಚ್ಚಿ, "ರೀ! ಎ ರ್ಯಾಟ್, ಒಂದು ಇಲಿ; ಎ ಕ್ಯಾಟ್, ಒಂದು ಬೆಕ್ಕು, ಸರಿಯೇ ಸಾರ್?" ಎಂದು ಕೇಳಿದಳು.

ಇಲಿ, ಪಾಪ, ನೀರಿನೊಳಕ್ಕೆ 'ಘುಳುಂ' ಎಂದು ಮುಳುಗಿ, ಕೊಂಚ ಹೊತ್ತಿನ ಮೇಲೆ ಉಸಿರನ್ನು ಕಟ್ಟಲಾರದೆ ಪಿಟ ಪಿಟನೆ ಕಣ್ಣು ಬಿಡುತ್ತಾ ಮೇಲಕ್ಕೆ ಬಂದಿತು. ಪಾಪಚ್ಚಿಗೆ ತುಂಬಾ ವ್ಯಥೆಯಾಯಿತು. ಅನ್ಯಾಯ ವಾಗಿ ಈ ಪ್ರಾಣಿಯನ್ನು ಹೆದರಿಸಿದೆನಲ್ಲಾ, ಎಂದು ಕೊರಗಿದಳು. "ತಪ್ಪಾಯಿತು ಸಾರ್! ನಿಮಗಳಿಗೆ ಬೆಕ್ಕನ್ನು ಕಂಡರೆ ಆಗುವುದಿಲ್ಲವೆಂದು ನಾನು ಮರೆತೇಹೋದೆ" ಎಂದು ಬಹಳವಾಗಿ ಬೇಡಿಕೊಂಡಳು "ಕಂಡರೆ ಆಗುವುದಿಲ್ಲವಂತೆ! ನೀವು ಒಂದು ಇಲಿ ಆಗಿದ್ದರೆ ನಿಮಗೆ ಅದನ್ನು ಕಾಣ ದಿದ್ದರೂ ಆಗುತ್ತಿರಲಿಲ್ಲ. ಆ ಮಾತಿನಿಂದಲೇ ನಿಮ್ಮ ಪ್ರಾಣ ಹಾರು ತ್ತಿತ್ತು" ಎಂದು ಇಲಿ ಕೋಪದಿಂದ ಕಿರಲಿತು. "ಅದಿರಲಿ. ಹಾಗೆ ರೇಗಬೇಡಿ. ಕೋಪದಿಂದ ನಿಮ್ಮ ಬಾಲವನ್ನು ಹಾಗೆ ನೆಟ್ಟಗೆ ನಿಲ್ಲಿಸಬೇಡಿ. ಕೊಂಚ ಸಡಿಲ ಬಿಡಿ....ಹಾಗೆ........ಆದರೂ ನಮ್ಮ ಮನೆ ಪಿಲ್ಲಿಯನ್ನು ಒಂದು ಸಲ ನೋಡಿದರೆ, ನೀವು ಏನನ್ನುತ್ತೀರೋ? ಅವಳನ್ನು ಕಂಡರೆ ಬೆಕ್ಕುಗಳ ಮೇಲಿರುವ ದ್ವೇಷವೆಲ್ಲವೂ ತೀರ ಮಾಯವಾಗುವುದು. ಎಂತಹ ಮುದ್ದಾದಬೆಕ್ಕಿನ ಮರಿ, ಗೊತ್ತೆ? ಕಣ್ಣು ಮುಚ್ಚಿಕೊಂಡು ಒಲೆಯಮುಂದೆ ಹಾಲು ಕಾಯಿಸುವುದನ್ನೇ ನೋಡುತ್ತಾ ಕುಳಿತಿರುತ್ತಾಳೆ. ನುಣ್ಣನೆಯ ಬಾಲ ಮಾತ್ರ ಆಚೆ, ಈಚೆ, ಎಡಕ್ಕೆ, ಬಲಕ್ಕೆ ನೆಗೆಯುತ್ತಾ ಇರುತ್ತದೆ. .... ಇಲಿಗಳೇನಾದರೂ .... (ಘುಳುಂ ಎಂಬ ಸದ್ದು) ....ಓ, ಮರೆತೆ........ (ಇಲಿ ಮೇಲಕ್ಕೆ ಬಂತು) ನಿಮಗೆ ರುಚಿಸದಿದ್ದರೆ ಪಿಲ್ಲಿ ವಿಚಾರವನ್ನೇ ನಾವು ಬಿಟ್ಟುಬಿಡೋಣ" ಎಂದು ಪಾಪಚ್ಚಿ ಹೇಳಿದಳು. ಇಲಿಯ ಬಾಲದ ತುತ್ತ ತುದಿ ಕೂಡ ನಡುಗುತ್ತಿತ್ತು. "ಏನು ಹೇಳಿದಿರಿ? ನಾವು ಬಿಟ್ಟುಬಿಡೋಣ, ಅಂದಿರಾ? ನಾವು? ನಾನು ಏನಾದರೂ ಈ ವಿಷಯ ಈಗ ಎತ್ತಿದೆನೇ? ಬೆಕ್ಕುಗಳು—ನೀಚರು, ಚಂಡಾಳರು, ನಮ್ಮ ತಾತ ಮುತ್ತಾತಂದಿರ ಕಾಲದಿಂದಲೂ ನಾವು ಆ ರಾಕ್ಷಸರ ಜೊತೆ ಸೇರುವುದೇ ಇಲ್ಲ. ಕೊಳ್ಳುವುದು ಕೊಡುವುದು, ತಿಂದಿ

ತೀರ್ಥ, ಊಟ ಉಪಚಾರ ಎಲ್ಲವನ್ನೂ ಬಿಟ್ಟಿದ್ದೇನೆ....ಶುದ್ಧ ಅಯೋಗ್ಯರು, ಪುಂಡರು....ಪಾಪಿಗಳು" ಎಂದು ಮುಂತಾಗಿ ಇಲಿ ಶಪಿಸಲು ಪ್ರಾರಂಭಿಸಿತು. "ಇಲ್ಲ, ಇಲ್ಲ, ಆ ಮಾತನ್ನಲ್ಲಿಗೆ ಬಿಟ್ಟೆ! ಕ್ಷಮಿಸಿ....ಹೋಗಲಿ. ....ನಿಮಗೆ ನಾಯಿಗಳು ಸ್ನೇಹಿತರು ತಾನೆ? ಅವರ ವಿಷಯ ಹೇಳಬಹುದು ತಾನೆ? (ಇಲಿ ಸುಮ್ಮನಿದ್ದುದರಿಂದ ಕೊಂಚ ಉತ್ಸಾಹದೊಡನೆ) ನಮ್ಮ ಬೀದಿಯಲ್ಲಿ ಪಂಕಜನ ಮನೆಯಲ್ಲಿ ಒಂದು ಜೂಲುನಾಯಿ ಇದೆ. ಮೂಗಿನ ತುದಿ ಬಾಲದ ತುದಿ ಮಾತ್ರ ಕಪ್ಪು. ಉಳಿದ ಕಡೆಯೆಲ್ಲಾ ಬಿಳುಪು. ಮೈತುಂಬಾ ಸುರುಳಿ ಸುರುಳಿಯಾಗಿದೆ ಕೂದಲು. ಚೆಂಡು ಗಿಂಡು ಎಸೆದರೆ ಓಡಿಹೋಗಿ ಕೈಗೇ ತಂದುಕೊಡುತ್ತದೆ. ಕೂತುಕೊಂಡು ಬಿಸ್ಕತ್ತುಕೊಡು ಎಂದು ಕೈ ನೀಡುತ್ತೆ! ಸಾವಿರ ರೂಪಾಯಿ ಕೊಟ್ಟರೂ ಅಂತಹ ನಾಯಿ ಸಿಗುವುದಿಲ್ಲ ಎಂದು ಅವರ ಮನೆಯವರು ಹೇಳುತ್ತಾರೆ. ಒಂದು ದಿವಸ ಒಂದು ತಮಾಷೆ ಆಯಿತು. ಒಂದು ಇಲಿ ಬಂತಂತೆ. ಆಗ ಅದು ಓಡಿಹೋಗಿ ಅದನ್ನ 'ಗಬಕ್' ಎಂದು (ಮತ್ತೆ 'ಘುಳುಂ' ಎಂಬ ಸದ್ದು!)....ಅಯ್ಯೋ! ನಾನು ಇದನ್ನೂ ಹೇಳಬಾರದಾಗಿತ್ತು. ಎಷ್ಟು ಬೆದರಿಕೊಂಡಿತೋ, ಪಾಪ, ಇನ್ನೂ ಮೇಲಕ್ಕೆ ಬರಲೇ ಇಲ್ಲವಲ್ಲಾ! ಅಯ್ಯೋ! ಇನ್ನೇನು ಗತಿ?....ಅಗೋ ಬಂತು" ಎಂದು ಹೇಳುತ್ತಾ, ಅತ್ತ ಕಡೆ ತಿರುಗಿನೋಡಿದಳು. ಇಲಿ ಬೇಗ ಬೇಗ ಈಜುತ್ತಾ ದೂರ ಸರಿಯುತ್ತಿತ್ತು. ಪಾಪಚ್ಚಿ ಅದರ ಹಿಂದೆ ಹೋಗಿ ಸಮಾಧಾನಪಡಿಸಿದಳು. "ನನ್ನ ಸಂಗ ಬಿಡಬೇಡ್ರಿ! ಕೀಟಲೆ ಮಾತೊಂದೂ ಹೇಳುವುದಿಲ್ಲ ಇನ್ನು" ಎಂದು ಆಣೆ ಇಟ್ಟಳು. ಅದರ ಪ್ರೀತಿ ವಿಶ್ವಾಸಗಳನ್ನ ಮತ್ತೆ ಸಂಪಾದಿಸಿದಳು. ಆಗ ಇಲಿ ಗದ್ಗದ ಸ್ವರದಲ್ಲಿ "ದಡ ಸೇರಿದ ಮೇಲೆ ನನ್ನ ಕಥೆ ಹೇಳುತ್ತೇನೆ. ಆಗ, ನಮಗೂ ನಾಯಿ ಬೆಕ್ಕುಗಳಿಗೂ ಇರುವ ದ್ವೇಷದ ಕಾರಣ ಏನೆಂದು ನಿಮಗೆ ತಿಳಿಯುತ್ತೆ" ಎಂದು ಹೇಳಿತು.

ಆ ಕೆರೆಯಲ್ಲಿ ಇನ್ನೂ ಅನೇಕರು ಕೈಕಾಲು ಬಡಿದುಕೊಳ್ಳುವ ಸದ್ದಾಯಿತು. ಪಾಪಚ್ಚಿ ಒಂದುಸಲ ಕೆರೆಯ ಸುತ್ತ ನೋಡಿದಳು. ಆಶ್ಚರ್ಯ! ಆಗಲೇ ಹತ್ತಿಪ್ಪತ್ತು ಪ್ರಾಣಿಗಳು ಕೆರೆಯಲ್ಲಿ ಜಾರಿಬಿದ್ದು ದಿಕ್ಕುತೋಚದೆ ಕೆರೆತುಂಬ ಈಜಾಡುತ್ತಿದ್ದುವು....ಹೆಂಟೇಗೊದ್ದ, ಗಿಳಿ,

ಹದ್ದಿನ ಮರಿ, ಕಾಜಾಣ, ಅಳಿಲು, ಹಾವುರಾಣಿ, ರೇಷ್ಮೆಹುಳ, ಪಾರಿವಾಳ, ಕಾಡುಕೋಳಿ, ಗೂಬೆ.... ಹೀಗೆ ಯಾವ ಯಾವುದೋ ಪ್ರಾಣಿಗಳು. ಇಷ್ಟೊಂದು ಪ್ರಾಣಿಗಳು ಅಲ್ಲಿ ಹೇಗೆ ಬಂದು ಸೇರಿದುವೋ ದೇವರೇ ಬಲ್ಲ. ಕಡೆಗೆ ಎಲ್ಲವೂ, ಪಾಪಚ್ಚಿಯ ಹಿಂದೆಯೇ ದಡ ಸೇರಿ, ನೆಲದ ಮೇಲೆ ಬಂದು ಕುಳಿತುವು.

---

## ಐಲೋಟ

ಕೆರೆಯ ದಡದಲ್ಲಿ ಅರ್ಧವೃತ್ತಾಕಾರವಾಗಿ ಕುಳಿತಿದ್ದ ಆ ಪ್ರಾಣಿ ಪರಿಷತ್ತು ನೋಡುವುದಕ್ಕೆ ಬಹು ವಿಚಿತ್ರವಾಗಿತ್ತು. ಅದನ್ನು ಕಂಡರೆ ಎಂಥ ಅಳುಮುಖದವನಾದರೂ ನಗದಿರಲಾರ. ಎಲ್ಲಾ ಹಕ್ಕಿಗಳಿಗೂ ರೆಕ್ಕೆಗಳು ಮೈಗೆ ಅಂಟಿಕೊಂಡಿದ್ದುವು. ಅಳಿಲು, ಇಲಿ ಮುಂತಾದವು ಚಳಿಯಿಂದ ಗಡಗಡ ನಡುಗುತ್ತಿದ್ದುವು. ಕೆಲವು ಗಟ್ಟಿಯಾಗಿ ಕೆಮ್ಮುತ್ತಿದ್ದುವು. ಎಲ್ಲಕ್ಕೂ ಒದ್ದೆ, ಚಳಿ, ನೆಗಡಿ. ಹೀಗೆಯೇ ಕೊಂಚ ಹೊತ್ತು ನೀರು ತೊಟ್ಟಿಕ್ಕಿಸುತ್ತಾ ಕುಳಿತಿದ್ದರೆ, ಕೆಲವಕ್ಕೆ ನ್ಯೂಮೋನಿಯಾ ಜ್ವರ ಬರುವುದರಲ್ಲಿ ಸಂದೇಹವೇ ಇರಲಿಲ್ಲ.

ಅಲ್ಲಿ, ಆಗ, ಎಲ್ಲರಿಗೂ ಬೇಕಾಗಿದ್ದದ್ದು ಒಂದೇ—ಮೈ ಒರಸಿಕೊಳ್ಳುವುದಕ್ಕೆ ಒಣಗಿದ ಟವಲುಗಳು. ಆದರೆ, ಅವುಗಳನ್ನು ಎಲ್ಲಿಂದ ಒದಗಿಸುವುದು? ಯಾರು ತಂದುಕೊಡುವರು? ಒದ್ದೆ ಆರಲು ಇನ್ನೇನು ಉಪಾಯ, ಎಂದು ಎಲ್ಲರೂ ಎಲ್ಲರನ್ನೂ ಕೇಳುತ್ತಿದ್ದರು. ಪಾಪಚ್ಚಿಯೂ ಇತರ ಪ್ರಾಣಿಗಳೊಡನೆ ಬಹಳ ಸಲಿಗೆಯಿಂದ ಸಂಭಾಷಿಸತೊಡಗಿದಳು. ಸಲಿಗೆಯ ಮಾತು ಹಾಗಿರಲಿ; ಮಾತು ಬೆಳೆಯುತ್ತಾ ಬೆಳೆಯುತ್ತಾ ಅವಳಿಗೂ ಕೋಳಿಗೂ ಒಂದು ಸಣ್ಣ ಜಗಳವೇ ಪ್ರಾರಂಭವಾಗಿ ಹೋಯಿತು. ಕೊನೆಗೆ ಕಾಡುಕೋಳಿ, "ನಿನಗಿಂತ ನನಗೆ ವಯಸ್ಸಾಗಿದೆ. ಎಷ್ಟಾದರೂ ನಾನು ಹಿರಿಯವಳು. ಚಿಕ್ಕವರು ದೊಡ್ಡವರೆದುರು ಅಡ್ಡ ಮಾತನಾಡಕೂಡದು" ಎಂದಿತು. ಪಾಪಚ್ಚಿಗೆ ಕೋಪ ಬಂತು. ಆದರೂ ಮೊದಲು ಕೋಳಿಯ ವಯಸ್ಸೇನೆಂದು ತಿಳಿದುಕೊಳ್ಳಬೇಕೆಂದು ಯೋಚಿಸಿ, ಅವಳು ಕೋಳಿಯನ್ನು ಅನೇಕ ಸಲ ಕೇಳಿದಳು. ಕಾಡುಕೋಳಿ ಹಠದ ಮುದ್ದೆ!

ತಾನು ಹುಟ್ಟಿ ಎಷ್ಟು ಸಂಕ್ರಾಂತಿಯಾಯಿತೆಂಬ ಗುಟ್ಟನ್ನು ಕಡೆಗೂ ಅದು ಬಿಚ್ಚಲೇ ಇಲ್ಲ. ಆದ್ದರಿಂದ, ವಾಗ್ವಾದ ಅಲ್ಲಿಗೇ ಕೊನೆಗಂಡಿತು.

ಬಿಳಿಯ ಇಲಿ ಒಳ್ಳೆಯ ಸುಟಿಯಾದ ಪ್ರಾಣಿ. ಬುದ್ಧಿವಂತ. ನಾಲ್ಕು ಜನ ತೊಂದರೆಗೆ ಗುರಿಯಾದರೆ ನೋಡಿಕೊಂಡು ಸುಮ್ಮನಿರಲಾರ. ಪರೋಪಕಾರಿ. ಎಲ್ಲರೂ ಒದ್ದೆ ಆರಿಸಿಕೊಳ್ಳಲು ಅದು ಒಂದು ಉಪಾಯ ಹುಡುಕಿತು. ಎಲ್ಲರನ್ನೂ ತನ್ನ ಸುತ್ತ ಬರಮಾಡಿ ಸಾಲಾಗಿ ಕೂರಿಸಿ ಕೊಂಡಿತು. "ನಾನು ಹೇಳುವುದನ್ನು ಸಾವಧಾನವಾಗಿ ಲಾಲಿಸಿ. ನಿಮ್ಮ ಒದ್ದೆ ಬೇಗನೆ ಆರುವ ಹಾಗೆ ನಾನು ಮಾಡುತ್ತೇನೆ. ನನ್ನ ಮಾತುಗಳು ಒಂದರಹಿಂದೊಂದು ಕಿವಿಯೊಳಕ್ಕಿಳಿದ ಹಾಗೆಲ್ಲಾ ನಿಮ್ಮ ಮೈ ಒದ್ದೆ ಆರಿ ನೆಗಡಿ ಹಾರಿ ಹೋಗುತ್ತೆ, ನೋಡುತ್ತಿರಿ" ಎಂದು ಇಲಿ ಕಿರಿಚಿತು. ಎಲ್ಲರೂ ಒಪ್ಪಿದರು. ಇಲಿಯ ಉಪಾಯವೇನಿರಬಹುದೆಂದು ಎಲ್ಲರೂ ಕುತೂಹಲದಿಂದ ಇದಿರುನೋಡಿದರು.

ಸಂಗೀತಗಾರರಂತೆ ಇಲಿಯೂ ಗಂಟಲನ್ನು ಸರಿಪಡಿಸಿಕೊಂಡು, "ಎಲ್ಲರೂ ಸಿದ್ಧವಾಗಿದ್ದೀರೋ? ಹಾಗಾದರೆ ಕೇಳಿ" ಎಂದು ಪ್ರಾರಂಭಿಸಿತು. "ಕೊಂಚ ಒಣವೇದಾಂತ ಹೇಳುತ್ತೇನೆ. ಅದನ್ನು ಕೇಳುತ್ತ ಕುಳಿತರೆ ನಿಮ್ಮ ರೆಕ್ಕೆ ಚರ್ಮ ಒಣಗುತ್ತವೆ. ದಯವಿಟ್ಟು ಯಾರೂ ನಡುವೆ ಮಾತನಾಡಬೇಡಿ....'ಚೇತನಾಚೇತನಾತ್ಮಕವಾದ ಪಂಚಭೂತ ಗಳಿಂದ ಸೃಷ್ಟಿಸಲ್ಪಟ್ಟಿರುವ ಈ ಪ್ರಪಂಚಕ್ಕೆ (ಕಾಜಾಣ ಕೆಮ್ಮಿತು) ಚೈತನ್ಯ ಸ್ವರೂಪನಾದ ಪರಮಾತ್ಮನೇ ಮೂಲಾಧಾರನು. ಚೈತನ್ಯವೆಂಬುದು ಅನಾದಿ ನಿತ್ಯ, ಸ್ವಯಂಜ್ಯೋತಿ, ಮತ್ತು ಅಖಂಡ. ಅದರಲ್ಲಿ ಜ್ಞಾನ ಜ್ಞೇಯಾತ್ಮಕವಾದ ಪ್ರಪಂಚವು....ಇರಲಿ! ಇದಕ್ಕಿಂತ ಶುಷ್ಕವಾದದ್ದು ಇನ್ನೊಂದು ಈಗ ನೆನಪಿಗೆ ಬಂತು. ಅದನ್ನು ಕೇಳಿದರೆ ನಮ್ಮ ಕಾರ್ಯವು ಬೇಗ ಕೈಗೂಡುವುದು....ಸದ್ದು ಮಾಡಬೇಡಿರಿ. ನಮ್ಮ ದೇಶವು ಉತ್ತರ ಅಕ್ಷಾಂಶ ಹನ್ನೆರಡರಿಂದ ಹದಿನೈದು ಡಿಗ್ರಿಗಳವರೆಗೂ ಪ್ರಸರಿಸಿದೆ. ಸಮ ಭಾಜಕ ವೃತ್ತಕ್ಕೂ ಸಂಕ್ರಾಂತಿ ವೃತ್ತಕ್ಕೂ ಮಧ್ಯೆ ಇರುವ ಪ್ರದೇಶಗಳಲ್ಲಿ ಅಹೋರಾತ್ರಿಗಳ ವ್ಯತ್ಯಾಸ ಕಡಮೆ. (ಅಲ್ಲಿ ಹಗಲೆಲ್ಲ ರಾತ್ರಿಯಷ್ಟು ಕತ್ತಲೆ ಇದ್ದರೆ, ಅದೇ ನನಗೆ ಸ್ವರ್ಗ, ಎಂದು ಗೂಬೆ ಪಿಸುಗುಟ್ಟಿತು.)

ಮೇಷಸಂಕ್ರಮಣ ಕಾಲದಲ್ಲಿ ಸಮಭಾಜಕ ವೃತ್ತದಲ್ಲಿ ಸೂರ್ಯನು ನೆಟ್ಟಗೆ ನೆತ್ತಿಯ ಮೇಲೆ ಕಾಣುವನಷ್ಟೆ! ಆಗ ನಮ್ಮ ಸೀಮೆಯಲ್ಲಿ ಕೊಂಚ ಓರೆಯಾಗಿ ದಕ್ಷಿಣಕ್ಕೆ ಕಾಣುವನು. ಮುಂದೆ....' "

ಆಗ, ಗಿಳಿ ಬೇಸರಿಕೆಯಿಂದ ಆಕಳಿಸುತ್ತಾ "ಸಾಕಪ್ಪಾ, ಸಾಕು!" ಎಂದು ಹೇಳಿತು. ಇಲಿಗೆ ಕೋಪ ಬಂತು. ಆದರೂ ಜಾಣತನದಿಂದ ಗಿಳಿ ಹೇಳಿದ್ದನ್ನು ಕೇಳದೆ ಇದ್ದ ಹಾಗೆ ನಟಿಸಿ "ಯಾರೋ ಮಾತನಾಡಿದ ಹಾಗಿತ್ತು. ನೀವೋ?" ಎಂದು ಗಿಳಿಯ ಕಡೆ ಥಟಕ್ಕನೆ ತಿರುಗಿತು. ಎಲ್ಲರೂ ಆ ಕಡೆ ನೋಡಿದರು. ಗಿಳಿಯ ಮುಖ ಬೆಳ್ಳಗಾಯಿತು. ಆದರೂ, "ನಾನಲ್ಲ, ಸ್ವಾಮಿ!" ಎಂದು ಸುಳ್ಳುಹೊಡೆಯಿತು. "ನೀವಲ್ಲವೋ? ಕ್ಷಮಿಸಿ ನಿಮ್ಮ ದನಿಯಂತೆ ಇತ್ತು".... ಮುಂದೆ ದಿನೇ ದಿನೇ ಸೂರ್ಯನು ಉಚ್ಚನಾಗುತ್ತಾ, ಜೂನ್ ಇಪ್ಪತ್ತೊಂದರಲ್ಲಿ, ಅಂದರೆ, ಕರ್ಕಾಟಕ ಸಂಕ್ರಮಣದಲ್ಲಿ ಅಹಸ್ಸು ಪರಮಾವಧಿಯನ್ನು ಹೊಂದುವುದು.'' ಪ್ರಾಣಿಗಳಿಗೆಲ್ಲಾ ಈ ಪುರಾಣ ಕೇಳಿ ಪೂರಾ ಬೇಜಾರು, ಕೋಪ. "ನಮ್ಮ ಶಾಂತತೆಯೂ ಪರಮಾವಧಿಯನ್ನು ಹೊಂದಿಬಿಟ್ಟಿದೆ" ಎಂದು ಕೋಳಿ ಕೂಗಿಯೇಬಿಟ್ಟಿತು.

"ಹಾಗಾದರೆ ನಾನೊಂದು ಉಪಾಯ ಹೇಳುತ್ತೇನೆ. ಮಾತಿನಿಂದ ನೈ ಒದ್ದೆ ಹೋಗುವುದೇ ಇಲ್ಲ...." ಎಂದು ಹೆಂಟೇಗೊದ್ದ ಹಳದಿ ಮುಖವನ್ನು ನೀಲೀ ಮಾಡಿಕೊಳ್ಳುತ್ತಾ ಹೇಳಿತು. "ನನಗಂತೂ ಇನ್ನೂ ಚಳಿ ಚಳಿ" ಎಂದು ಪಾಪಚ್ಚಿ ಗೊಣಗಿದಳು. "ಏನದು ಉಪಾಯ, ಹೇಳಿ, ಮಾಡೋಣ" ಎಂದು ಎಲ್ಲರೂ ಏಕ ಕಂಠವಾಗಿ ಕೇಳಿಕೊಂಡರು. ಅದಕ್ಕೆ ಅದು, "ಅದರ ಹೆಸರು, 'ಐಲುರೇಸು'" ಎಂದು ಹೇಳಿ ಸುಮ್ಮನಾಯಿತು. ಹಾಗೆಂದರೇನು? ವಿವರ ಗಿವರ ಅಪ್ಪಣೆಯಾಗಲಿ!" ಎಂದು ಯಾರಾದರೂ ಕೇಳಲಿ, ಕೇಳಿದ ಮೇಲೆ ವಿವರಿಸಿದರಾಯಿತು, ಈಗಲೇ ಏಕೆ ಹೇಳಬೇಕು, ಎಂಬುದು ಅದರ ಜಂಬ. ಅದಕ್ಕೆ ತಕ್ಕ ಶಾಸ್ತಿಯಾಗಲೆಂದು ಎಲ್ಲರೂ ಕೊಂಚಹೊತ್ತು ಸುಮ್ಮನಿದ್ದರು. ಯಾರೂ ಕೇಳದಿದ್ದರೆ ಏನು ಗತಿ, ಎಂದು ಹೆಂಟೇಗೊದ್ದಕ್ಕೆ ದಿಗಿಲು ಹತ್ತಿತು. ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾ ಒಳಗೊಳಗೆ ನಗು

ತ್ತಿದ್ದರು. ಕಡೆಗೆ, ಪಾಪಚ್ಚಿಗೆ ಅದರ ಅವಸ್ಥೆಯನ್ನು ಕಂಡು ಕನಿಕರ ವಾಯಿತು. "'ಐಲುರೇಸು' ಅಂದರೆ ಏನು?" ಎಂದು ಅವಳ ಮೋಡಂ ಮಾತಿನಲ್ಲೇ ಗಂಭೀರಸ್ವರದಲ್ಲಿ ಕೇಳಿದಳು.

ಹೆಂಟೇಗೊದ್ದ ತಕ್ಷಣವೇ ಎದ್ದು, "ವಿವರಿಸುವುದಕ್ಕಿಂತ ಓಡಿಸಿಯೇ ತೋರಿಸುತ್ತೇನೆ. ಬನ್ನಿ" ಎಂದು ಹೇಳಿತು. ಮೊದಲು ತನ್ನ ಬಾಲದಿಂದ ಡೊಂಕು ಡೊಂಕಾಗಿ ಸುಮಾರು ಚಕ್ರಾಕಾರದಲ್ಲಿ ಒಂದು ಗೆರೆಯನ್ನೆಳೆಯಿತು. ಅನಂತರ, ಎಲ್ಲರನ್ನೂ ಕರೆದುತಂದು ಆ ಗೆರೆಯ ಮೇಲೆ ಅಲ್ಲಲ್ಲಿ ಕೊಂಚ ದೂರ ದೂರವಾಗಿ ನಿಲ್ಲಿಸಿತು ಐಲೋಟದಲ್ಲಿ "ವನ್, ಟೂ, ತ್ರೀ, ಆಫ್" ಯಾವುದೂ ಇಲ್ಲವೆಂದೂ, ಬೇಕು ಬೇಕಾದವರು ಬೇಕು ಬೇಕಾದ ಕಡೆ, ಗೆರೆಯ ಮೇಲೋ, ಗೆರೆಯ ಒಳಗೋ, ಹೊರಗೋ, ಹೇಗೋ ಓಡಬೇಕೆಂದೂ ಸಾರಿತು. ಕಾಲು ಸೋತು ಸುಸ್ತಾಗಿ ಕೆಳಗೆ ಬೀಳುವತನಕ ಓಡಬಹುದೆಂದೂ ಒಪ್ಪಿತು. ಎಲ್ಲರೂ ಚೆಲ್ಲಾಪಿಲ್ಲಿ ಓಡಿದರು. ಅಂತು ಇಂತು, ಹೀಗೆ ಅರ್ಧ ತಾಸು ಓಡಿದ ಮೇಲೆ ಎಲ್ಲರ ಮೈಯೂ ಆರಿತು. ಕೆಲವರು ಸೆಕೆಯಿಂದ ಬೆವರುವುದಕ್ಕೂ ಪ್ರಾರಂಭ!

ದಾಹವಂತೂ ಎಲ್ಲರ ಗಂಟಲಿಗೂ ಗಂಟುಬಿತ್ತು. "ಓಟ ಮುಗಿಯಿತು, ಸ್ಟಾಪ್! ಎಂದು ಹೆಂಟೇಗೊದ್ದ ಕೂಗಿತು. ಎಲ್ಲರೂ ಅದರ ಸುತ್ತ ಕುಳಿತು ಸುಧಾರಿಸಿಕೊಳ್ಳುತ್ತಿದ್ದರು. ಕೆಲವರು, "ಐಲೋಟದಲ್ಲಿ ಗೆದ್ದವರು ಯಾರು?" ಎಂದು ಕೇಳಿದರು. ಈ ಪ್ರಶ್ನೆಗೆ ಉತ್ತರ ಹೇಳುವುದು ಕೊಂಚ ಕಷ್ಟವಾಗಿತ್ತು. ಪಾಪ! ಹೆಂಟೇಗೊದ್ದ ಏನು ಹೇಳುವುದಕ್ಕೂ ತೋಚದೆ ಆಲೋಚನೆಯಲ್ಲಿಯೇ ಮುಳುಗಿತ್ತು. ಅದರ ಮುಖದ ಬಣ್ಣ ಕೊಂಚ ಕೊಂಚವಾಗಿ ಬದಲಾಯಿಸುತ್ತಾ ಕೊನೆಗೆ ರಕ್ತದಂತೆ ಕೆಂಪಾಯಿತು. ಕಡೆಗೆ "ಎಲ್ಲರೂ ಗೆದ್ದರು. ಎಲ್ಲರಿಗೂ ಪಾರಿತೋಷಿಕವನ್ನು ಹಂಚಲಾಗುವುದು" ಎಂದು ಹೇಳಿತು. ಪ್ರಾಣಿಗಳಿಗೆ ಹಿಡಿಯಲಾರದ ಸಂತೊಷ. ಜಯಘೋಷ. ಅವಾಂತರವೋ ಅವಾಂತರ. ಎಲ್ಲವೂ ಆನಂದದಿಂದ ಕುಣಿದಾಡಿ ಕಿಚಿಪಿಚಿ ಕೂಗಿದುವು.

"ಬಹುಮಾನವನ್ನು ದಯಪಾಲಿಸುವವರು ಯಾರು?" ಎಂದು ಕೆಲವರು ಕೇಳಿದರು. "ಅವಳು" ಎಂದು ಹೆಂಟೇಗೊದ್ದ ಪಾಪಚ್ಚಿಯ

ಕಡೆ ಮೂತಿ ಚಾಚಿತು, ಸರಿ! ಎಲ್ಲರೂ ಪಾಪಚ್ಚಿಯನ್ನು "ಬಹುಮಾನ, ಬಹುಮಾನ! ಚಿನ್ನ! ಬೆಳ್ಳಿ!" ಎಂದು ಬೇಡಿದರು. ಪಾಪ! ಅವಳು ಏನು ಮಾಡಿಯಾಳು? ಅತ್ತರೆ ಯಾರೂ ಬಿಡುವ ಹಾಗಿಲ್ಲ, ಏನು ಕೊಡುವುದೆಂದು ಶಾಮುವನ್ನಾದರೂ ಕೇಳಿ ತಿಳಿದುಕೊಳ್ಳುವ ಹಾಗಿರಲಿಲ್ಲ. ಕಿಸೆಯಲ್ಲಿ ಕೈಯಿಟ್ಟು ಏನಾದರೂ ಇದೆಯೇ ಎಂದು ನೋಡಿದಳು. ಆಗ, ಬೆಳಗ್ಗೆ, ಪಕ್ಕದ ಮನೆ ಶಾರದಾ ಕೊಟ್ಟಿದ್ದ ಕಡಲೆಬೀಜ ಐದಾರು ಜೇಬಿನಲ್ಲಿರುವುದು ಪತ್ತೆಯಾಯಿತು. ಸಿಪ್ಪೆ ಸುಲಿದು ಒಂದೊಂದು ಬೀಜವನ್ನು ಒಬ್ಬೊಬ್ಬರಿಗೆ ಕೊಟ್ಟಳು. ದೇವರ ದಯೆಯಿಂದ ಕಣ್ಣೀರಲ್ಲಿ ಕಡಲೆಕಾಯಿ ಅಷ್ಟು ನೆನೆದಿರಲಿಲ್ಲ. ಎಲ್ಲರಿಗೂ ಒಂದೊಂದು ಬೀಜದಂತೆ ಸರಿಯಾಗಿ ಹಂಚಿದಳು. ಅಲ್ಲಿಗೆ ಜೇಬೂ ಬರಿದಾಯಿತು. ಆಗ, "ಅವಳಿಗೆ ಯಾವ ಬಹುಮಾನವೂ ಬೇಡವೆ?" ಎಂದು ಇಲಿ ಕೇಳಿತು. "ಆಹ! ಕೊಟ್ಟೇಕೊಡಬೇಕು. ಕೊಡದೆಯಿರುವುದು ಯಾವ ನ್ಯಾಯ?" ಎಂದು ಹೆಂಟೇಗೊದ್ದ ಹೇಳಿತು. ಯಾವ ವಿಚಿತ್ರ ಬಹುಮಾನವನ್ನು ಪ್ರಾಣಿಗಳು ತನಗೆ ಕೊಡಬಹುದೆಂದು ಪಾಪಚ್ಚಿ ಆಲೋಚಿಸಿದಳು. ಆದರೆ, ಅಳಿಲು, "ಅಕ್ಕಾ! ನಿಮ್ಮ ಜೇಬಿನಲ್ಲಿ ಇನ್ನೇನಿದೆ, ನೋಡಿ" ಎಂದು ಬೇಡಿಕೊಂಡಿತು. ಪಾಪಚ್ಚಿ ಒಂದು ಸಣ್ಣ ರಬ್ಬರ್ ಚೂರನ್ನು ತೆಗೆದು ಹೆಂಟೇಗೊದ್ದನ ಕೈಗೆ ಕೊಟ್ಟಳು. ಅದನ್ನು ಆದರದಿಂದ ಸ್ವೀಕರಿಸಿ, ಹೆಂಟೇಗೊದ್ದ ಪಾಪಚ್ಚಿಯ ಸುತ್ತ ಎಲ್ಲರನ್ನೂ ಕರೆದು ಕೂರಿಸಿ, "ಈ ದಿನ ಇಲ್ಲಿ ನೆರೆದಿರುವ ಮಹಾಪ್ರಾಣಿಗಳ ಪರವಾಗಿ, ಅವರ ಜ್ಞಾಪಕಾರ್ಥವಾಗಿ ಈ ರಭ್ರವೃಕ್ಷ ರಸಘಟ್ಟಿಯನ್ನು ತಮಗೆ ಸಮರ್ಪಿಸಿರುತ್ತೇವೆ, ಸ್ವೀಕರಿಸಬೇಕು, ಮಹಾತಾಯಿ!" ಎಂದು ಒಂದು ದೊಡ್ಡ ಉಪನ್ಯಾಸವನ್ನು ಕೊಟ್ಟಿತು. ಕೆಲವರು ಚಪ್ಪಾಳೆ ತಟ್ಟಿದರು. ಉಳಿದವರು ರೆಕ್ಕೆ ಬಡಿದರು. ಗಿಳಿ ಮಾತ್ರ, "ಈಗ ಹೇಳಿದ್ದು ಕನ್ನಡವೋ ಸಂಸ್ಕೃತವೋ?" ಎಂದು ಕೇಳಿ ಹೆಂಟೇಗೊದ್ದನ ಭಾಷಾಶೈಲಿಯನ್ನು ಕೊಂಚ ಹಾಸ್ಯಮಾಡಿತು ಪಾಪಚ್ಚಿಗೆ ನಗು ಬಂತು. ಆದರೂ ಇತರರು ಅಷ್ಟು ಗಂಭೀರವಾಗಿರುವುದನ್ನು ಕಂಡು ಅವಳು ನಗುವನ್ನು ತಡೆದಳು. ತನ್ನ ಕೃತಜ್ಞತೆಯನ್ನು ಸೂಚಿಸುವ ಸಲುವಾಗಿ ಅವಳು ಯಾವ ಉಪನ್ಯಾಸವನ್ನೂ ಕೊಡಲಿಲ್ಲ. ಸುಮ್ಮನೆ

ಕೈ ಜೋಡಿಸಿ, ತಲೆಬಾಗಿ ಸಭೆಗೆ ವಂದನೆಯನ್ನರ್ಪಿಸಿ ಬಹುಮಾನವನ್ನು ಮತ್ತೆ ಜೇಬಿನಲ್ಲಿರಿಸಿದಳು. ಅಷ್ಟೆ.

ಅನಂತರ ಎಲ್ಲರೂ ಕಡಲೆಕಾಯಿ ಬೀಜವನ್ನು ತಿಂದರು. ಕೆಲವರಿಗೆ ಅದರ ರುಚಿ ಗೊತ್ತಾಗುವಷ್ಟರಲ್ಲಿಯೇ ಬೀಜ ಒಳಕ್ಕೆ ಹೋಗಿಬಿಟ್ಟಿತಂತೆ. ಹಲ್ಲಿಮರಿಗೆ ಒಂದು ಅನಾಹುತವೇ ಆಯಿತು. ಜೀಜ ಗಂಟಲಲ್ಲಿ ಸಿಕ್ಕಿ ಕೊಂಡಿತು. ಏನು ಮಾಡುವುದು ? ಪ್ರಾಣಕ್ಕೆ ಬಂತು. ಆದರೆ, ಅಳಿಲು ಬಹಳ ಬುದ್ಧಿವಂತಿಕೆಯಿಂದ ಅದರ ಹೆಕ್ಕತ್ತಿಗೆ ಸರಿಯಾಗಿ ಒಂದು ಪೆಟ್ಟು ಕೊಟ್ಟು ಕಡಲೆಕಾಯಿ ಬೀಜವನ್ನು ಒಳಕ್ಕೆ ನೂಕಿತು. ಇಲ್ಲದಿದ್ದರೆ ಅದರ ಗತಿ ಏನಾಗುತ್ತಿತ್ತೋ, ಶಿವನೇ ಬಲ್ಲ

---

## ಬಾಲ-ಕಥೆ

ಮತ್ತೊಮ್ಮೆ ಎಲ್ಲರೂ ಬಿಳಿ ಇಲಿಯ ಸುತ್ತ ಸೇರಿದರು. ಪಾಪಚ್ಚಿ, "ರೀ, ನಿಮ್ಮ ಚರಿತ್ರೆ ಹೇಳುತ್ತೇನೆ ಅಂದಿರಲ್ಲಾ. ನಾ.... ....ಮತ್ತು ಬೆ....ಗಳ ಮೇಲೆ ನಿಮಗೆ ಏಕೆ ದ್ವೇಷ ಉಂಟಾಯಿತೆಂದು ತಿಳಿಸುತ್ತೇನೆ ಅಂದಿರಿ. ಈಗ ಹೇಳಿ. ಇವರೆಲ್ಲರೂ ಇದಾರೆ. ಸರಿಯಾದ ಸಮಯ. ಕಥೆ ಕೇಳೋಣ" ಎಂದಳು. ಇಲಿ "ನನ್ನ ಗೋಳು ಕಥೆಯೆಲ್ಲವನ್ನೂ ಸವಿಸ್ತಾರವಾಗಿ ಹೇಳಲು ಸಮಯ ಸಾಲದು. ನಿಮಗೂ ಪುರಸತ್ತಿರ ಲಾರದು. ಈಗ ಬರಿಯ ಬಾಲಕಥೆಯನ್ನು ಮಾತ್ರ ಹೇಳುತ್ತೇನೆ. ಆಮೇಲಿನ ಕಥೆಯನ್ನು ಇನ್ನೊಂದು ದಿನ ಕೇಳುವಿರಂತೆ" ಎಂದಿತು.

ಪಾಪಚ್ಚಿಯ ಮನಸ್ಸಿನಲ್ಲಿ 'ಬಾಲಕಥೆ' ಎಂದರೆ ಇಲಿಯ ಉದ್ದ ವಾದ 'ಬಾಲದ ಕಥೆ' ಎಂದು ಭಾಸವಾಯಿತು. ಬಾಲಕಥೆಯೆಂದು ಇಲಿ ಹೇಳಿದಾಗ, ಅದು ತನ್ನ ಬಾಲ್ಯದ ಕಥೆಯೆಂದೇ ತಿಳಿದುಕೊಂಡಿತು— ರಾಮಾಯಣದಲ್ಲಿ ಬಾಲಕಾಂಡ ಎಂದು ಹೇಳುವ ಹಾಗೆ. ಆದರೂ ಪಾಪಚ್ಚಿ ಇಲಿಯ ಬಾಲವನ್ನೇ ನೋಡುತ್ತಾ, ಕಥೆಯ ಪ್ರತಿಯೊಂದು ಭಾಗವನ್ನೂ ಬಾಲದ ಒಂದು ಭಾಗದ ಕಥೆಯೆಂದು ಭಾವಿಸುತ್ತಿದ್ದಳು. ಇಲಿಯ ಕಥೆ ಬೆಳೆದ ಹಾಗೆಲ್ಲಾ ಅದರ ಬಾಲವೂ ಕೂಡ ಡೊಂಕು ಡೊಂಕಾಗಿ ಬೆಳೆದ ಹಾಗೆ ಅವಳಿಗೆ ತೋರಿತು.

ಟೈಗರೆಂಬ ನಾಯಿ ತನ್ನ

ನೆರೆಯಲಿದ್ದ ಇಲಿಯು ಕರೆದು,

"ನಿನ್ನ ಮೇಲೆ ತಪ್ಪು ಹೊರಿಸಿ

ಜಡ್ಜಿ ಮುಂದೆ ನಿಲಿಸುವೆ,

ಬಾರೊ ಬೇಗ" ಎಂದಿತು.

ಇಲಿಯುಃ, ಪಾಪ, ಅತ್ತು ಕರೆದು

"ಕೇಸು, ಗೀಸು, ಜಡ್ಜಿ, ಗಿಡ್ಜಿ

ಬೇಡಿ, ಬಿಡಿರಿ!" ಎನ್ನಲು

"ನಾನೆ ಲಾಯರ್ನಾನೆ ಜಡ್ಜಿ"

ಎಂದು ನಾಯಿ ಬೊಗಳುತಾ

ಮರಣ ಶಿಕ್ಷೆ

ವಿಧಿಸಿತು.

ಹಿಡಿದು

ತಿಂದಿತು.

ಪಾಪಚ್ಚಿ ಕಥೆಯ ಮೇಲೆ ಗಮನವಿಡದೆ ತನ್ನ ಡೊಂಕು ಬಾಲವನ್ನೇ ದಿಟ್ಟಿಸುತ್ತಿದ್ದುದು ಹೇಗೋ ಇಲಿಗೆ ತಿಳಿದುಹೋಯಿತು. ಅದು, "ನನ್ನನ್ನು ಕಥೆ ಹೇಳಬೇಕೆಂದು ಕಟ್ಟುಮಾಡಿ ಕೂರಿಸಿ ಈಗ ಯಾವುದೋ ಜ್ಞಾನದಲ್ಲಿ ಇರುವೆಯಲ್ಲಾ ? ಇದು ಸರಿಯೆ? ಇದೇ ನಿಮ್ಮ ಮರ್ಯಾದೆಯೋ ?" ಎಂದು ಅವಳನ್ನು ಗದರಿಸಿತು. "ಇಲ್ಲ, ನಾನು ಕಥೆ ಕೇಳುತ್ತಿದ್ದೆ. ಈಗ ೧೩ನೆಯ ಡೊಂಕಿಗೆ ಬಂದಿದೀರಿ, ಅಲ್ಲವೆ?" ಎಂದು ಪಾಪಚ್ಚಿ ಕೇಳಿದಳು. ಇಲಿ ಕೋಪದಿಂದ ಕಿಡಿ ಕಿಡಿಯಾಗಿ "ಒಳ್ಳೆ ಗಂಟುಬಿತ್ತಲ್ಲಾ, ಈ ಹುಡುಗಿ!" ಎಂದು ಗೊಣಗಿತು. "ಅಯ್ಯೋ! ಬಾಲದಲ್ಲಿ ಗಂಟು ಬಿತ್ತೇನು? ಪರವಾ ಇಲ್ಲ. ನಾನು ಬಿಡಿಸುತ್ತೇನೆ" ಎಂದು ಪಾಪಚ್ಚಿ ಏನೂ ತಿಳಿಯದವಳ ಹಾಗೆ ಹೇಳಿಬಿಟ್ಟಳು. ಇಲಿಗೆ ಪೂರಾ ರೇಗಿತು; ಅದರ ಮೂಗರಳಿತು; ಮೀಸೆ ಕುಣಿಯಿತು) ಬಾಲ ನೆಟ್ಟನೆ ನಿಂತುಕೊಂಡಿತು. 'ವಿಠಲಾಚಾರರ ಪುರಾಣ ಬಿಟ್ಟಲ್ಲಿಗೆ' ಅಂದ ಹಾಗೆ ಇಲಿ ಹೊರಟೇಹೋಯಿತು. ಎಲ್ಲರೂ, "ಬನ್ನಿ, ನಿಮ್ಮ ಕಥೆ ಪೂರೈಸಿಬಿಡಿ!" ಎಂದು ಬೇಡುತ್ತಾ ಅದರ ಹಿಂದೆಯೇ ಕೊಂಚ ದೂರ ಹೋಗಿ ಕಾಲು ಹಿಡಿದು ಕೇಳಿಕೊಂಡರು. ಊ ಹುಂ. ಮುನಿಸಿಕೊಂಡು ಓಡಿಯೇ ಹೋಯಿತು ಮೂಷಿಕ!

"ಇದೇನನ್ಯಾಯ! ಕಥೆಯನ್ನು ಅರ್ಧದಲ್ಲಿ ಅಮಂಗಳದಲ್ಲೇ ನಿಲ್ಲಿಸಿ ಇಷ್ಟೊಂದು ಜನರ ಮಾತನ್ನು ದೂಡಿಬಿಟ್ಟು ತನ್ನ ಹಠವೇ ಹಠ ಎಂದು ಓಡಿಬಿಡುವುದೇ?" ಎಂದು ಗಿಳಿ ಹೇಳಿತು. ಅಲ್ಲಿದ್ದ ಒಂದು ಮುದಿ ಗೂಬೆ ತನ್ನ ಮೊಮ್ಮಗುವನ್ನು ಹತ್ತಿರಕ್ಕೆಳೆದು "ನೋಡಿದೆಯಾ, ಮಗೂ, ಕೋಪ ಎಂದರೆ ಎಷ್ಟು ಕೆಟ್ಟದ್ದು. ಅದರಿಂದಾಗುವ ಹಾನಿಗಳೆಷ್ಟೆಂದು ನೋಡಿ ತಿಳಿದುಕೋ. 'ಕೋಪವೆಂಬುದನರ್ಥಸಾಧನ, ಕೋಪವೇ....'" ಎಂದು ಉಪದೇಶ ಮಾಡಿತು. ಗೂಬೆ ಮರಿ, "ಸಾಕು, ಅಜ್ಜಿ, ನಿನ್ನ ನೀತಿ ಬೋಧೆ. ಅದು ತಿಳಿದುಕೋ, ಇದು ತಿಳಿದುಕೋ, ಎಂದು ಮೂರು ಹೊತ್ತೂ ಕೇಳಿಕೇಳಿ ನನ್ನ ಕಿವಿ ಹುಣ್ಣಾಗಿದೆ. ನನಗೆ ಬೇಜಾರಾಗಿ ನಾನು ಹಗಲು ಹಗಲೇ ಎಲ್ಲಾದರೂ ದೇಶಾಂತರ ಹೊರಟುಬಿಡುತ್ತೇನೆ, ಅಷ್ಟೆ!" ಎಂದು ಎದುರುಬಿತ್ತು. ಪಾಪ. ಮುದಿಗೂಬೆ ಏನು ಮಾಡೀತು?

ಕಣ್ಣು ಮುಚ್ಚಿಕೊಂಡು "ರಾಮ, ರಾಮ" ಎಂದಿತು. "ನಮ್ಮ ಮನೆ ಪಿಲ್ಲಿ ಇಲ್ಲಿದ್ದಿದ್ದರೆ ಇಲಿಯ ಅಹಂಕಾರವನ್ನು ಅಡಗಿಸಿ ಹಿಂದಕ್ಕೆ ಸರಸರನೆ ಎಳೆದು ತಂದಿರುತ್ತಿದ್ದಳು" ಎಂದು ಪಾಪಚ್ಚಿ ತನಗೆ ತಾನೇ ಹೇಳಿಕೊಂಡಳು. ಆದರೂ ಅದು ಗಿಳಿಗೆ ಕೇಳಿಸಿ, "ಪಿಲ್ಲಿ ಅಂದರೆ ಯಾರು?" ಎಂದು ಪ್ರಶ್ನೆ ಹಾಕಿತು. ಪ್ರಾಣಿಗಳೆಲ್ಲವೂ ಅವಳ ಹತ್ತಿರ ಬಂದುವು. ಪಿಲ್ಲಿಯ ಗುಣಕಥನ ಮಾಡುವುದೆಂದರೆ ಪಾಪಚ್ಚಿಗೆ ಪರಮ ಸಂತೋಷ. "ಪಿಲ್ಲಿ ನಮ್ಮ ಮನೆ ಬೆಕ್ಕು. ಇಲಿಗಳನ್ನು ಹಿಡಿಯುವುದರಲ್ಲಿ ಪ್ರವೀಣೆ. ಹಕ್ಕಿಗಳನ್ನು ಹಿಡಿಯುವುದರಲ್ಲಿ ಬಲು ಜಾಣೆ. ಅವು ಕಣ್ಣಿಗೆ ಬಿದ್ದರೆ ಸಾಕು, ಯಮನ ಕೈಗೆ ಸಿಕ್ಕಿದ ಹಾಗೆ, ಬಿಡುಗಡೆಯೇ ಇಲ್ಲ."

ಪಾಪಚ್ಚಿ ಇಷ್ಟು ಹೇಳಿದ್ದೇ ತಡ, ಅಲ್ಲಿ ಒಂದು ದೊಡ್ಡ ಗದ್ದಲವೆದ್ದಿತು. ಹಕ್ಕಿಗಳೆಲ್ಲವೂ ಹೇಗಾದರೂ ಜಾರಿಕೊಳ್ಳುವುದೇ ಮೇಲೆಂದು ಮೆತ್ತಗೆ ಹೊರಟುಹೋಗಲು ಉಪಾಯವನ್ನು ಹುಡುಕಿದವು. ಗಿಳಿ, "ಅಯ್ಯೋ! ತುಂಬಾ ಹೊತ್ತಾಗಿರಬೇಕಲ್ಲವೆ? ನಾನು ಮನೆಗೆ ಹೋಗಬೇಕು. ಯಜಮಾನರು ಬರುವ ಸಮಯ" ಎಂದು ಹೇಳಿ ಹೊರಟಿತು. ಕಾಜಾಣ ತನ್ನ ಮಕ್ಕಳ ಕೈಗಳನ್ನು ಹಿಡಿದುಕೊಂಡು, "ಬನ್ನಿರಪ್ಪಾ, ಬನ್ನಿ. ತೂಕಡಿಸಬೇಡಿ. ಮನೆಗೆ ಹೋಗಿ ಹಾಸಿಗೆ ಹಾಸಿ ಮಲಗುವಿರಂತೆ" ಎಂದು ಹೇಳುತ್ತಾ ತಪ್ಪಿಸಿಕೊಂಡಿತು.... ಕೊನೆಗೆ ಅಲ್ಲಿ ಪಾಪಚ್ಚಿ ಒಬ್ಬಳೇ ಉಳಿದಳು.

"ನಾನು ಪಿಲ್ಲಿಯ ಮಾತನ್ನೆತ್ತಬಾರದಾಗಿತ್ತು" ಎಂದು ಪಾಪಚ್ಚಿ ಮನನೊಂದಳು. "ಇಲ್ಲಿ ಒಬ್ಬರಿಗೂ ಅವಳ ಮಾತು ರುಚಿಸುವುದಿಲ್ಲ. ಯಾರಿಗೂ ಅವಳ ನಡತೆ ಸರಿದೋರುವುದಿಲ್ಲ. ಯಾಕೋ ಕಾಣೆ. ಅವಳಂಥ ಬೆಕ್ಕು ಇನ್ನು ಯಾರ ಮನೆಯಲ್ಲಿಯೂ ಇಲ್ಲ...." ಎಂದು ಬಹಳ ವ್ಯಸನಪಟ್ಟಳು.

ಪಾಪ! ಚಿಕ್ಕ ಹುಡುಗಿ! ಅಲ್ಲಿ ಆ ಅರೆಬೆಳಕಿನಲ್ಲಿ ಸದ್ದಿಲ್ಲದ ಆ ಪಾತಾಳದಲ್ಲಿ ಒಬ್ಬಳೇ ಹೇಗೆ ಕಾಲಕಳೆದಳೋ ದೇವರೇ ಬಲ್ಲ. ಸುಮಾರು ಒಂದು ಗಂಟೆಯ ಕಾಲ ಒಂಟಿಯಾಗಿ ಯಾವ ಯಾವುವೋ ಯೋಚನೆ

ಗಳಲ್ಲಿದ್ದಳು. ಕೊನೆಗೆ, ಪಟ ಪಟ ಹೆಜ್ಜೆಯ ಸದ್ದಾಯಿತು. ಬಾಲಕಥೆ ಯನ್ನು ಮುಗಿಸಿಯೇ ಹೋಗೋಣವೆಂದು ಇಲಿ ಹಿಂದಿರುಗಿರಬಹುದೆಂದು ಅತ್ತಕಡೆ ತಿರುಗಿನೋಡಿದಳು.

---

## ಸಣ್ಣಪ್ಪನ ಸಾಹಸ

ಬಂದದ್ದು ಇಲಿ ಅಲ್ಲ, ........ ಬಿಳಿಯ ಮೊಲ. ಗಾಬರಿಯಿಂದ ಅರಳಿದ ಕಣ್ಣುಗಳು. ಏನನ್ನೋ ಹುಡುಕುತ್ತಿರುವಂತೆ ನಾಲ್ಕು ಕಡೆಗೂ ನೋಡುತ್ತಾ ಸರಸರನೆ ಮೊಲವು ಒಳಗೆ ಬಂತು. ಒಳಗೊಳಗೆ ಏನೇನೊ ಗೊಣಗುಟ್ಟುತ್ತಲೇ ಇತ್ತು. "ಅಯ್ಯೋ! ಅಮ್ಮಾವರು ಏನಂದಾರು ? ನನ್ನ ಕರವಸ್ತ್ರ, ಡಬ್ಬಿ! ಸನ್ನಿಧಾನದಲ್ಲಿ ಏನು ಅವಮಾನವಾಗುವುದೋ ತಿಳಿಯದು. ಅಯ್ಯೋ! ನನ್ನ ಹಾಳು ಮೀಸೆಯೇ! ನನ್ನ ಕತ್ತು ಕುಯ್ದು ಬಿಡುತ್ತಾರೆ ಇವತ್ತು, ಖಂಡಿತ. ಬೆಕ್ಕಿನ ಬಾಲ ನುಣ್ಣಗೆ, ನನ್ನ ತಲೆ ಮಣ್ಣಿಗೆ! ಎಲ್ಲಿ ಹಾಕಿಬಿಟ್ಟೆ? ದೇವರೇ!" ಎಂದು ಹೇಳುತ್ತಾ ಮೊಲವು ಪಾಪಚ್ಚಿ ಇದ್ದಲ್ಲಿಗೆ ಬಂತು.

"ಡಬ್ಬಿ, ಕರವಸ್ತ್ರ ಇಲ್ಲೇ ಎಸೆದು ಓಡಿಹೋಯಿತು! ಈಗ ಪೇಚಾಡುತ್ತಾ ಇದೆ, ಮಂಕು" ಎಂದು ಹೇಳುತ್ತಾ ಪಾಪಚ್ಚಿಯೂ ಸುತ್ತ ನೋಡಿದಳು. "ಪಾಪ! ಒಂದು ನಸ್ಯದ ಡಬ್ಬಿ ಇಲ್ಲದಿದ್ದರೆ ತಲೆ ಕಡಿದು ಹಾಕುವ ಶಿಕ್ಷೆಯೇ? ಏನನ್ಯಾಯ?" ಎಂದು ಹೇಳಿ ಪಾಪಚ್ಚಿ ಅಲ್ಲೆಲ್ಲಾ ಹುಡುಕಿದಳು. "ನಾನೆಲ್ಲಿ ಇಟ್ಟೆನೋ ಜ್ಞಾಪಕಬರಲಿಲ್ಲವಲ್ಲಾ" ಎಂದು ವ್ಯಥೆಪಟ್ಟಳು.

ಆದರೆ, ಇದೀಗ ವಿಚಿತ್ರ! ಅಲ್ಲಿ ಅವರೆಲ್ಲರೂ ಬಿದ್ದೊದ್ದಾಡಿದ ಕೆರೆಯೂ ಇರಲಿಲ್ಲ, ಗಾಜಿನ ಮೇಜೂ ಇರಲಿಲ್ಲ, ಕರವಸ್ತ್ರವೂ ಮಾಯವಾಗಿತ್ತು. ಆ ಸ್ಥಳವೇ ಬದಲಾಗಿ ಒಂದು ಹೊಸ ರೂಪನ್ನು ತಳೆದಿತ್ತು.

ಅಷ್ಟರಲ್ಲಿಯೇ ಮೊಲದ ದೃಷ್ಟಿ ಪಾಪಚ್ಚಿಯ ಮೇಲೆ ಬಿತ್ತು. ಅದು ಅವಳನ್ನು ಕುರಿತು, "ತಿಮ್ಮಿ! ಇಲ್ಲಿ ಏನು ಮಾಡುತ್ತೀಯೇ? ನಡಿ

ಮನೆಗೆ! ಓಡು! ನನ್ನ ಕೊಠಡಿಯಲ್ಲಿರುವ ಮೇಜಿನ ಮೇಲೆ ಡಬ್ಬಿ, ಕರವಸ್ತ್ರ ಎರಡೂ ಇವೆ. ತೆಗೆದುಕೊಂಡು ಓಡಿ ಬಾ! ನಾನಿಲ್ಲಿಯೇ ನಿಂತಿರುತ್ತೇನೆ" ಎಂದು ರೇಗಿ ಕೂಗಿ ಆಜ್ಞಾಪಿಸಿತು.

ಪಾಪಚ್ಚಿಗೆ ಭಯವಾಯಿತು. ಏಕೆಂದರೆ, ಅಂದಿನವರೆಗೂ ಹೀಗೆ ಅಣ್ಣ ತಮ್ಮ ಯಾರೂ ಅವಳನ್ನು ಮಾತನಾಡಿಸಿರಲಿಲ್ಲ. ಅವಳು ಏನೊಂದೂ ಉತ್ತರ ಹೇಳದೆ ಮೊಲ ತೋರಿಸಿದ ಜೆರಳಿಗೆ ನೇರವಾಗಿ ಓಡಿದಳು........ಪಾಪ! ತನ್ನ ಹೆಸರು 'ತಿಮ್ಮಿ' ಎಂದಲ್ಲ ಎಂದು ಹೇಳುವು ದಕ್ಕೂ ಕೂಡ ಅವಳಿಗೆ ಆಗ ಧೈರ್ಯಬರಲಿಲ್ಲ.

ಕೊಂಚ ದೂರ ಹೋದಮೇಲೆ "ನಾನೇನು ಅವನ ಆಳೇ? 'ನಡಿ,' 'ಓಡು,' 'ಬಾ,' 'ಹೋಗು,' ಅಂತ ಹೇಳುವುದಕ್ಕೆ. ಇರಲಿ! ನಾನು 'ತಿಮ್ಮಿ' ಅಲ್ಲ ಎಂದು ತಿಳಿದಾಗ ಅವನಿಗೇ ನಾಚಿಕೆಯಾಗುತ್ತೆ. ಇಂಥಾ ವಳನ್ನು ಹೀಗೆ ಅಂದೆನಲ್ಲಾ ಎಂದು ಆಗ ನೊಂದುಕೊಳ್ಳುತ್ತಾನೆ, ಇರಲಿ. ಈ ಅವಮಾನಕ್ಕೆ ಅದೇ ಸರಿಯಾದ ಶಿಕ್ಷೆ ಎಲ್ಲೋ, ಶುದ್ಧ ಮಂಕು ದಿಣ್ಣೆ. ತಿಮ್ಮಿ ಅಂತೆ ನಾನು, ತಿಮ್ಮಿ! ಏನಾದರೂ ಆಗಲಿ! ಅವನು ಹೇಳಿದ ಸಾಮಾನು ಸಿಕ್ಕಿದರೆ ತೆಗೆದುಕೊಂಡು ಹೋಗಿ ಕೊಡೋಣ. ಪಾಪ! ತಲೆ ಹೋಗುವ ಸಂದರ್ಭವಂತೆ" ಎಂದು ಹೇಳುತ್ತಾ ಓಡಿದಳು.

ಅಷ್ಟುಹೊತ್ತಿಗೆ ಸರಿಯಾಗಿ ಒಂದು ಪುಟಾಣಿ ಬಂಗಲೆಯ ಬಾಗಿ ಲೆದುರಿಗೆ ಬಂದಳು. ಅಲ್ಲಿ ಒಂದು ಹಿತ್ತಾಳೆ ತಗಡಿನ ಮೇಲೆ ಹೊಳೆ ಹೊಳೆವ ಕೆಂಪು ಅಕ್ಷರಗಳಲ್ಲಿ "ಬಿ. ಮೊಲ" ಎಂದು ಬರೆದಿತ್ತು. ಬಾಗಿಲನ್ನು ತಟ್ಟಿದಳು. ಅದು ತಾನಾಗಿಯೇ ತೆರೆಯಿತು ಪಾಪಚ್ಚಿ ಹೆದರದೆ ಒಳಗೆ ನುಗ್ಗಿದಳು. ಹೊಸಲನ್ನು ದಾಟಿದ ಕೂಡಲೇ ಮಹಡಿಗೆ ಹೋಗುವ ಮೆಟ್ಟಲು ಸಾಲು ಕಾಣಿಸಿತು. ಮೆಟ್ಟಲುಗಳನ್ನು ಒಂದು ಸಲಕ್ಕೆ ಎರಡು ಮೂರಾಗಿ ಹಾರುತ್ತಾ ಮೇಲಕ್ಕೆ ಹೋದಳು. ನಿಜವಾದ 'ತಿಮ್ಮಿ', ಮೊಲದ ಮನೆ ಆಳು ತನ್ನನ್ನು ಎಲ್ಲಿಯಾದರೂ ಕಂಡರೆ ಏನು ಮಾಡುವಳೋ ಎಂದು ಅವಳಿಗೆ ದಿಗಿಲು.

"ಇದೇನು ಹಣೇಬರಹ! ಮೊಲದ ಜವಾನಿ! ಮನೆಯಲ್ಲಿ ಅಣ್ಣ ಮಹಡಿ ಮೇಲಿನಿಂದ ಏನಾದರೂ ತೆಗೆದುಕೊಂಡು ಬಾ ಎಂದರೆ 'ಊಹೂಂ' ಎಂದು ಹೇಳಿ ಶಾಮುವನ್ನೇ ಮೆಟ್ಟಲು ಹತ್ತಿಸುತ್ತಿದ್ದೆ. ಸರಿ. ಇನ್ನೇನು! ಪಿಲ್ಲಿ ಕೂಡ ನನ್ನನ್ನು ಬೇಕು ಬೇಕಾದ ಕಡೆ ಓಡಿಸುತ್ತಾಳೆ. 'ಪಾಪಚ್ಚಿ! ಇಲ್ಲಿ ಬಾ! ಬೇಗ ಬಾ! ನನ್ನ ಜತೆಯಲ್ಲಿ ಪಕ್ಕದ ಮನೆತನಕ ಬಾ. ಕತ್ತಲೆ. ಒಬ್ಬಳೇ ಹೋಗಲಾರೆ' ಅನ್ನುತ್ತಾಳೆ. ಅಮ್ಮ ನನ್ನನ್ನು 'ಊಟಕ್ಕೇಳು' ಅಂದರೆ, 'ಇಗೋ ಬಂದೆ, ಅಮ್ಮಾ! ಪಿಲ್ಲಿ ನನ್ನನ್ನು ಇಲ್ಲಿ ಕೂರಿಸಿಬಿಟ್ಟು ಹೋಗಿದಾಳೆ. ಇದರೊಳಗೆ ಒಂದು ಇಲಿ ಸೇರಿಕೊಂಡಿದೆಯಂತೆ. ಅದು ಹೊರಗೆ ಬಂದು ಓಡಿಹೋಗದ ಹಾಗೆ ನಾನು ಇಲ್ಲೇ ಕಾಯುತ್ತಿರಬೇಕಂತೆ. ಈಗ ಬಂದುಬಿಡುತ್ತಾಳೆ. ನಾನು ಇಲ್ಲಿಂದ ಕದಲಬಾರದಂತೆ ಈಗ ಬಂದುಬಿಡುತ್ತಾಳೆ. ಪಕ್ಕದ ಮನೆಗೆ ಹಾಲು ಕುಡಿಯುವುದಕ್ಕೆ ಹೋಗಿದಾಳೆ' ಅಂತ ನಾನು ಹೇಳ ಬೇಕಾಗುತ್ತೆ. ಆದರೆ, ಹೀಗೆಲ್ಲಾ ನನ್ನ ಕೈಯಲ್ಲಿ ಕೆಲಸ ತೆಗಿಸುವುದನ್ನು ಅಣ್ಣ ಕಂಡರೆ ಮನೆಯಿಂದ ಒದ್ದೋಡಿಸಿಬಿಡುತ್ತಾನೆ, ಅಷ್ಟೆ. ಪಿಲ್ಲೀನ! ಮೊದಲಿಂದಲೂ ಶಾಮು ಚಾಡಿ ಹೇಳಿಹೇಳಿ ಅಣ್ಣನಿಗೆ ಅವಳು ಅಂದರೆ ಅಷ್ಟಷ್ಟೆ!"

ಇಷ್ಟುಹೊತ್ತಿಗೆ ಪಾಪಚ್ಚಿ ಬಂಗಲೆಯ ಉಪ್ಪರಿಗೆಯಲ್ಲಿದ್ದ ಮೊಲದ ಖಾಸ್ ಕೊಠಡಿಗೆ ಬಂದುಬಿಟ್ಟಿದ್ದಳು. ತಕ್ಕಮಟ್ಟಿಗೆ ವಿಶಾಲವಾಗಿಯೇ ಇತ್ತು. ಅಲ್ಲಿ ಒಂದು ಆರಾಮ ಕುರ್ಚಿ. ಅದರ ಮೇಲೆ ಒರಗಿಕೊಂಡು ಹಾಗೆಯೇ ಕೈನೀಡಿದರೆ ಸಿಕ್ಕುವಷ್ಟು ಹತ್ತಿರದಲ್ಲಿ ಅಷ್ಟೇ ಎತ್ತರದ ಒಂದು ಕರಿಯ ಮರದ ಗುಂಡು ಮೇಜು. ಅದರ ಮೇಲೆ ತರತರದ ನಶ್ಯದ ಡಬ್ಬಿಗಳು, ಬಣ್ಣಬಣ್ಣದ ಕರವಸ್ತ್ರಗಳು. ಎರಡನ್ನು ಆರಿಸಿ ಎತ್ತಿಕೊಂಡು ಬಾಗಿಲ ಹತ್ತಿರಕ್ಕೆ ಧಾವಿಸಿದಳು. ಗೋಡೆಯ ತುಂಬ ಮೊಲದ ಮರಿಗಳ ಪಟಗಳಿದ್ದುವು. ಎಲ್ಲವೂ ಒಂದಕ್ಕಿಂತ ಇನ್ನೊಂದು ಜೀವಕಳೆಯಿಂದ ತುಂಬಿ, ಮುದ್ದಾಗಿದ್ದುವು. ಎಲ್ಲದರ ಕಣ್ಣಲ್ಲಿಯೂ ಕೆಂಚಗೆ ಚಟುವಟಿಕೆ ತುಳುಕುತ್ತಿತ್ತು. ಅವುಗಳನ್ನು ನೋಡಿ ಆನಂದಪಡುತ್ತಾ ಪಾಪಚ್ಚಿ ಕೊಂಚಹೊತ್ತು ಅಲ್ಲಿಯೇ ನಿಂತಳು.

ಅಲ್ಲಿ ಒಂದು ನಿಲುವುಗನ್ನಡಿಯೂ ಇತ್ತು. ಅದರ ಪಕ್ಕದಲ್ಲಿ, ಕಿಟಕಿಯಲ್ಲಿಯೇ, ಒಂದು ಶೀಷೆಯ ತುಂಬ ನೀಲಿ ಬಣ್ಣದ ಯಾವುದೋ ಔಷಧಿಯಿದ್ದದ್ದು ಅವಳ ಕಣ್ಣಿಗೆಬಿತ್ತು. "ಕುಡಿಯಿರಿ" ಎಂದು ಬರೆದಿರಲಿಲ್ಲವಾದರೂ ಅವಳಿಗೆ ಕುಡಿಯೋಣವೆನಿಸಿತು. ವಾಸನೆ ಚೆನ್ನಾಗಿಯೇ ಇತ್ತು. "ವಿಷ" ಎಂಬ ಚೀಟಿಯೂ ಇರಲಿಲ್ಲ. "ಇನ್ನೇನು? ಅಪಾಯವೇನೂ ಆಗಲಾರದು. ಏನಾದರೂ ತಮಾಷೆ ಆದರೂ ಆಗಬಹುದು. ನಾನು ಇಷ್ಟು ಗಿಡ್ಡವಾಗಿರುವುದರಿಂದಲೇ ಕಂಡಕಂಡವರೆಲ್ಲರೂ ನನಗೆ ಕೆಲಸ ಹೇಳುತ್ತಿರುವುದು! ದೇವರೇ ಗತಿ! ಏನಾಗುತ್ತೆ ಎಂದು ನೋಡಿಯೇ ಬಿಡೋಣ" ಎಂದು ಎರಡು ಮೂರು ಚಮಚಗಳಷ್ಟು ಔಷಧಿಯನ್ನು ಕುಡಿದೇ ಬಿಟ್ಟಳು!

ಆ ಔಷಧಿಯ ಪ್ರಭಾವ ಏನನ್ನುತ್ತೀರಿ! ಅಬ್ಬಬ್ಬ! ಅದ್ಭುತವಾದ ಶಕ್ತಿ. ಮಾಟದ ನೀರು ಅದು. ನಾಲ್ಕು ತೊಟ್ಟು ಒಳಗೆ ಬೀಳುವುದರೊಳಗೆ ಪಾಪಚ್ಚಿಯ ತಲೆ ಮೇಲುಚಾವಣಿಗೆ ಹೊಡೆಯಿತು. ಕೊಂಚ ಹೊತ್ತಿನಲ್ಲಿಯೇ ಬೆನ್ನು ಬಗ್ಗಿಸದೆ ನಿಲ್ಲಲಾಗಲಿಲ್ಲ. ನೆಲದ ಮೇಲೆ ಒರಗಿಕೊಳ್ಳಬೇಕಾಯಿತು. ಕಾಲುಗಳನ್ನು ಗೋಡೆಯ ಮೇಲೆ ಏರಿಸಬೇಕಾಯಿತು. "ಇನ್ನೂ ಬೆಳೆದರೆ ಬಹಳ ತೊಂದರೆ........ಈ ಕೋಣೆಯಿಂದ ಹೊರಗೆ ಹೇಗೆ ಹೋಗುವುದು? ಆ ತಿಮ್ಮಿ ಬಂದರೆ ಏನು ಗತಿ? ........ಥೂ. ನಾನು ಅಷ್ಟು ಕುಡಿಯಬಾರದಾಗಿತ್ತು" ಎಂದು ಪಾಪಚ್ಚಿ ತನಗೆ ತಾನೇ ಹೇಳಿಕೊಂಡಳು........ಆಗ ಅವಳು ಸುಮಾರು ಮೂರಾಳು ಎತ್ತರ, ಎತ್ತರದಷ್ಟೇ ದಪ್ಪ. ಪಾಪ! ಒಂದು ಕೈಯನ್ನು ತಲೆದಿಂಬಾಗಿಟ್ಟುಕೊಂಡು, ಕಾಲನ್ನು ಮಡಿಚಿ, ಬಾಗಿಲಿಗೆ ತಲೆ ತಗುಲಿಸಿಕೊಂಡು ಮಲಗಿಕೊಂಡಳು. ಇನ್ನೊಂದು ಕೈಯನ್ನು ಕಿಟಕಿಯಿಂದ ಹೊರಗೆ ನೀಡಬೇಕಾಯಿತು. "ಬಂದದ್ದೆಲ್ಲಾ ಬರಲಿ, ಗೋವಿಂದನ ಕೃಪೆಯಿರಲಿ" ಎನ್ನುವ ಹಾಗೆ ಅವಳು ಸುಮ್ಮನೆ ಸದ್ದುಮಾಡದೆ ಬಿದ್ದಿದ್ದಳು. ಪಾಪಚ್ಚಿಯ ಪುಣ್ಯಕ್ಕೆ ಔಷಧಿಯ ಶಕ್ತಿ ಅಲ್ಲಿಗೇ ಮುಗಿಯಿತು.

"ಮನೆಯಲ್ಲಿ ಇದಕ್ಕಿಂತ ಎಷ್ಟೋ ನೆಮ್ಮದಿಯಾಗಿದ್ದೆ. ಹೀಗೆ ಘಳಿಗೆ ಘಳಿಗೆಗೂ ಕುಗ್ಗುವ ಹಿಗ್ಗುವ ಕಾಟ ಇರಲಿಲ್ಲ. ಇಲಿಗಳೂ

ಮೊಲಗಳೂ ಓಡಾಡಿಸುತ್ತಿರಲಿಲ್ಲ........ ಥೂ. ನಾನಿಲ್ಲಿಗೆ ಧುಮುಕಿದ್ದೇ ತಪ್ಪು........ ಅಂತು, ಅಕ್ಕ ಹೇಳುತ್ತಿದ್ದ ಕಥೆಗಳಲ್ಲಿ ನಡೆಯುವ ಹಾಗೆ ನನಗೂ ಆಗುತ್ತಿವೆ. ಆಗ ಶಾಮು ಅದೆಲ್ಲಾ ಸುಳ್ಳು, ನಂಬಬಾರದು ಎಂದು ಹೇಳುತ್ತಿದ್ದ. ಈಗ? ನನ್ನ ಅನುಭವಗಳನ್ನೂ ಬರೆದು ಅಚ್ಚು ಹಾಕಿಸಿ, ಅಕ್ಕನ ಕೈಲಿ ಕೊಟ್ಟು ಓದಿಸಬೇಕು. ಆಗಲಾದರೂ ಶಾಮು ನಂಬುತ್ತಾನೋ ಏನೋ? ನಾನಿನ್ನೂ ಪುಟ್ಟ ಹುಡುಗಿ. ಪುಸ್ತಕ ಬರೆದರೆ ಯಾರೂ ಓದುವುದಿಲ್ಲ. ನಗುತ್ತಾರೆ, ಅಷ್ಟೆ! ಏನು? ನಾನು ಚಿಕ್ಕ ಹುಡುಗಿಯೇನು? ಸರಿಹೋಯ್ತು. ಕೊಠಡಿ ತುಂಬಾ ಆವರಿಸಿಕೊಂಡು ಜಾಗ ಸಾಲದೆ ಪೇಚಾಡುತ್ತಿದೇನೆ! ಹೋಗಲಿ! ಎತ್ತರ ದಪ್ಪ ಎಷ್ಟು ಹೆಚ್ಚಾದರೂ ಮನುಸ್ಸು ಮಾತ್ರ ಕೂಡಿಬರದೆ ಇದ್ದರೆ ಅದೇ ಪುಣ್ಯ........ ಇಲ್ಲ, ಇಲ್ಲ...........ಅದೂ ಕಷ್ಟವೆ. ಅಮ್ಮನ ಹಾಗೆ ಆಗದಿದ್ದರೆ, ಯಾವಾಗಲೂ ಪಾಠ ಗಟ್ಟಿಮಾಡಬೇಕಾಗುತ್ತೆ........... ಭೂವಿವರಣೆ, ವ್ಯಾಕರಣ, ಹಾರ್ಮೋನಿಯಂ........ಅಯ್ಯಯ್ಯೋ!"

ಹೀಗೆ ತನಗೆ ತಾನೇ ಏನೇನೋ ಹೇಳಿಕೊಳ್ಳುತ್ತಾ ಪಾಪಚ್ಚಿ ಆ ಕೋಣೆಯಲ್ಲಿಯೇ ಮಲಗಿದ್ದಳು. ಎದ್ದು ನಿಲ್ಲಲು ಸಾಧ್ಯವೇ ಆಗಲಿಲ್ಲ. ಆಗ ಹೊರಗಡೆ ಯಾರೋ "ತಿಮ್ಮಿ, ತಿಮ್ಮಿ" ಎಂದು ಕೂಗಿದರು. "ಡಬ್ಬಿ ಎಲ್ಲಿ? ಹೊತ್ತಾಗಿ ಹೋಯಿತು. ಬೇಗ ತಾ" ಎಂದು ಹೇಳಿದರು. ಅನಂತರ ಮೆಟ್ಟಲುಗಳ ಮೇಲೆ ಯಾರೋ ಕುಪ್ಪಳಿಸಿಕೊಂಡು ಬರುವ ಸದ್ದಾಯಿತು. ತಾನು ಸಾವಿರ ಮೊಲಗಳಷ್ಟು ದಪ್ಪವಾಗಿದ್ದರೂ ಪಾಪಚ್ಚಿಗೆ ನಡುಕಹತ್ತಿತು...........ಆ ಮನೆಯೆಲ್ಲವೂ ಅವಳೊಂದಿಗೆ ನಡುಗಿತು!

ಮೊಲ ಬಾಗಿಲನ್ನು ತಟ್ಟಿತು; ತಳ್ಳಿತು; ತೆಗೆಯಲು ಪ್ರಯತ್ನಿಸಿತು: ಸಾಧ್ಯವಾಗಲಿಲ್ಲ. "ಚಿಂತೆ ಇಲ್ಲ; ಕಿಟಕಿಯಿಂದ ಒಳಗೆ ನುಗ್ಗುತ್ತೇನೆ" ಎಂದು ಹೇಳುತ್ತಾ ಮೆಟ್ಟಲನ್ನಿಳಿಯಿತು. "ನುಗ್ಗದ ಹಾಗೆ ನಾನು ಮಾಡುತ್ತೇನೆ" ಎಂದು ಪಾಪಚ್ಚಿ ನಿರ್ಧರ ಮಾಡಿಕೊಂಡಳು........ಕೊಂಚ ಹೊತ್ತಿನಲ್ಲಿ ಹೊರಗೆ, ಕಿಟಕಿಯ ಹತ್ತಿರ ಮೊಲದ ಮಾತು ಕೇಳಿಸಿತು.

ಪಾಪಚ್ಚಿ ಕೈಯನ್ನು ಕೊಂಚ ಹೊರಕ್ಕೆ ಚಾಚಿ ಬೀಸಿದಳು............ ಅವಳ ಕೈಗೆ ಯಾವುದೂ ಸಿಕ್ಕಲಿಲ್ಲ. ಆದರೂ, "ಅಯ್ಯಪ್ಪಾ!" ಎಂಬ ಒಂದು ಆರ್ತಧ್ವನಿ ಮಾತ್ರ ಕೇಳಿಸಿತು. ಯಾವುದೋ ಒಂದು ಪದಾರ್ಥ ಕೆಳಗೆ ಹೂವಿನ ಕುಂಡಗಳ ಮೇಲೆ ಬಿತ್ತು ........ ಅನಂತರ ಕೊಂಚ ಹೊತ್ತು ಮೌನ........

ಮತ್ತೆ ಮೊಲದ ಧ್ವನಿ!........ಹಿಂದಿನಷ್ಟು ಜೋರಾಗಿಲ್ಲ ........ ಕೀಚಲು........ ನೋವಿನಿಂದ ನರಳುತ್ತಿರುವ ಹಾಗಿದೆ........ "ಕರಿಯ! ಕರಿಯ! ಎಲ್ಲಿದ್ದೀಯಾ?" ಆಗ ಕರಿಯನೆಂಬುವನು, "ಇಲ್ಲಿದೇನೆ ಬುದ್ಧಿ! ನೆಲ ತೋಡಿ ಮಾವಿನಹಣ್ಣು ತೆಗೆಯುತ್ತಾ ಇದೇನೆ, ಬುದ್ದಿ!" ಎಂದು ಉತ್ತರಕೊಟ್ಟನು. ಪಾಪಚ್ಚಿಗೆ ಆಶ್ಚರ್ಯವಾಯಿತು. "ಥತ್! ಮಾವಿನ ಹಣ್ಣಿಗೆ ನೆಲ ತೋಡುತ್ತಾನಂತೆ!" ಎಂದು ತನಗೆ ತಾನೇ ಹೇಳಿ ಕೊಂಡಳು. "ಇಲ್ಲಿ ಬಾ!........ಕೈ ಹಿಡಿದುಕೊ........ ಮೆಲ್ಲಗೆ........ ಹಾಗೆ. ಹಾಗೆ ........ ಅಯ್ಯೋ! ಅಲ್ಲಿ ಮುಟ್ಟಬೇಡ ........ ಪೂರಾ ನೋವು .... ಹಾಗೆ........ನೋಡು, ಕರಿಯ, ಆ ಕಿಟಕಿಯಲ್ಲಿ ಕಾಣುತ್ತಾ ಇರುವುದು ಏನು?" ಎಂದು ಮೊಲವು ಕೇಳಿತು. "ಅದೇ? ಅದೊಂದು ಅಸ್ತ, ಬುದ್ಧಿ! ಬಲಅಸ್ತ, ಬುದ್ಧಿ" ಎಂದು ಕರಿಯ ಹೇಳಿದ.

ಪಾಪಚ್ಚಿಗೆ ತಡೆಯಲಾರದ ನಗು ಬಂತು. ಹಸ್ತ ಎನ್ನುವುದಕ್ಕೆ ಕರಿಯ ಅಸ್ತ ಎಂದಿದ್ದ! ಅಲ್ಲದೆ, ಅದು ಅವಳ ಎಡಗೈಯಾಗಿತ್ತು. ಆದರೂ ಗಟ್ಟಿಯಾಗಿ ನಕ್ಕರೆ ಕಟ್ಟಡವೇ ತಲೆಯಮೇಲೆ ಬೀಳಬಹುದೆಂಬ ಭಯದಿಂದ ಅವಳು ತಡೆದಳು. ಮೊಲವು "ಅಸ್ತವಂತೆ, ಅಸ್ತ! ಕಿಟಕಿ ತುಂಬ ತುರುಕಿಕೊಂಡಿದೆ; ಅಷ್ಟು ದೊಡ್ಡ ಅಸ್ತ ಯಾವ ಪ್ರಾಣಿ ಗಿದೆಯೋ? ಯಾರಾದರೂ ನಕ್ಕಾರು ...... ಇನ್ನೊಂದುಸಾರಿ ಹೀಗೆ ಪೆಚ್ಚು ಪೆಚ್ಚಾಗಿ ಒರಲಿದರೆ ಬುರುಡೆ ಮೇಲೆ ಕುದಿಯುವ ನೀರು ಹೊಯ್ದು ಬಿಟ್ಟೇನು,—ಜೋಕೆ!" ಎಂದು ಕರಿಯನನ್ನು ಗದರಿಸಿತು. "ದೊಡ್ಡದಾಗಿದೆ; ದಪ್ಪನಾಗಿದೆ. ಆದರೂ ಅದು ಅಸ್ತ ಎನ್ನುವುದರಲ್ಲಿ ಸಂದೇಹವಿಲ್ಲ ಬುದ್ಧಿ. ಬಲಅಸ್ತ, ಬುದ್ದಿ" ಎಂದು ಕರಿಯ ಮತ್ತೆ ಹೇಳಿದ.

"ಸರಿ! ಹೇಗಾದರೂ ಆಗಲಿ! ಅದು ಅಲ್ಲಿಗೆ ಹೇಗೆ ಬಂತು? ನಿನ್ನನ್ನು ಇಲ್ಲಿ ಕಾವಲಾಗಿ ಇರಿಸಿರುವುದು ಏತಕ್ಕೆ? ಹೋಗಿ ಅಲ್ಲಿಂದ ಅದನ್ನು ತೆಗೆದು, ದೂರ ಎಸೆದು ಬಿಡು" ಎಂದು ಮೊಲವು ಆಜ್ಞಾಪಿಸಿತು.

ಇದಾದ ಬಹಳ ಹೊತ್ತಿನತನಕ ಮಾತೇ ಇಲ್ಲ........ ಕಿಟಕಿಯ ಕೆಳಗಡೆ ಕೆಲವು ಪ್ರಾಣಿಗಳು ಒಟ್ಟಿಗೆ ಸೇರಿ ಏನೋ ಪಿತೂರಿ ನಡೆಸುತ್ತಿರ ಬೇಕೆಂದು ಪಾಪಚ್ಚಿ ಊಹಿಸಿದಳು; ಯಾಕೆಂದರೆ ಗುಜು ಗುಜು ಸದ್ದು ಮಾತ್ರ ಎಡೆಬಿಡದೆ ಕೇಳಿಸುತ್ತಿತ್ತು. ಕ್ರಮೇಣ ಅವರ ಚರ್ಚೆ ಕೊಂಚ ಸ್ಪಷ್ಟವಾಗುತ್ತಾ ಬಂತು. ಅಲ್ಲಲ್ಲಿ ಕೆಲವು ಮಾತುಗಳು ಮಾತ್ರ ಪಾಪಚ್ಚಿಯ ಕಿವಿಯನ್ನು ಮುಟ್ಟಿದುವು. "ನನ್ನ ಕೈಲಾಗುವುದಿಲ್ಲ, ಅಬ್ಬಬ್ಬಾ" "ಲೋ, ಹೇಡಿ, ಹೇಳಿದಹಾಗೆ ಕೇಳೋ" "ಹತ್ತು, ಗೋಡೆಯ ಮೇಲೆ" "ಬಿರುಗಾಳಿ ಬಡಿದಹಾಗೆ ಬಡೀತದೆ ಬುದ್ಧಿ" "ಚಾಕು ತೆಗೆದುಕೊಂಡು ಹೋಗು"........ ಪಾಪಚ್ಚಿ ಇನ್ನೊಂದುಸಲ ಕೈಯನ್ನು ಬೀಸಿದಳು........ ಈಸಲ ಎರಡು ಆರ್ತಧ್ವನಿಗಳು........ "ಅಯ್ಯೋ?"........"ಅಯ್ಯೋ!"........ಅಷ್ಟೆ. ಇಬ್ಬರು ಕೆಳಗೆ ಬಿದ್ದ ಸದ್ದು. ಮೊದಲಿಗಿಂತ ಹೆಚ್ಚು ಅನಾಹುತ.

ಅನಂತರ ಒಂದು ಗಾಡಿ ತುಂಬ ಪ್ರಾಣಿಗಳು ಮನೆಯ ಗೋಡೆಯ ಹತ್ತಿರವೇ ಬಂದು ಇಳಿದ ಹಾಗೆ ಗದ್ದಲವಾಯಿತು. ಅವರೆಲ್ಲರೂ ಏನೇನೋ ಬಹಳ ಹೊತ್ತು ಪಿಸುಗುಟ್ಟುತ್ತಿದ್ದರು........ಆಮೇಲೆ ಗಲಾಟೆ. ಜಗಳ. "ಇನ್ನೊಂದು ಏಣಿ ಇಲ್ಲವೋ?" "ಇಲ್ಲಿಗೆ ಎರಡು ಇಟ್ಟಿಗೆ ತೆಗೆದುಕೊಂಡು ಬಾ." "ಹಗ್ಗ ಸಾಲದು" "ಸಣ್ಣಪ್ಪ ತರುತ್ತಾ ಇದಾನೆ" "ಬೇಡ, ಬೇಡ, ಕೆಳಗಿರಿಸಬೇಡ" "ಇನ್ನೊಂದು ಏಣಿ ಎಲ್ಲೋ" "ಇಲ್ಲಿ ತಾ, ಮಗೂ" "ಸಣ್ಣಪ್ಪಾ, ನೀನೇ ಗತಿಯಪ್ಪಾ" "ನನಗೆ ಹೇಳಿದ್ದು ಒಂದೇ ಏಣಿ" "ಎಲ್ಲಿಂದ ವಕ್ಕರಿಸಿತು ಈ ಪಿಶಾಚಿ" "ಆ ಮೂಲೆಯಲ್ಲಿ ಮಡಗು" "ಕಿಟಕಿ ಮಟ್ಟಕ್ಕೆ ಬರುತ್ತೋ" "ಸಣ್ಣಪ್ಪಾ, ಬುದ್ಧಿಯವರು ಇನಾಮು ಕೊಡುತ್ತಾರೆ" "ಹೆಂಚು ಬೀಳುತ್ತಾ ಇದೆ, ಕುಳ್ಳಯ್ಯಾ" "ಓಡು, ಓಡು" "ಎರಡು ಏಣಿ

ಗಳನ್ನೂ ಒಟ್ಟಿಗೆ ಕಟ್ಟು" "ಸೂರು ಭಾರ ತಡಿಯುತ್ತದೇನೋ?" ........... ಹೀಗೆ.

"ಓಹೋ! ಸಣ್ಣಪ್ಪ ಎನ್ನುವವನು ಏಣಿಯ ಮೇಲೆ ಕಿಟಕಿಯ ತನಕ ಹತ್ತಿಬಂದು ನನ್ನ ಕೈ ಕತ್ತರಿಸಿ ಬಿಡುತ್ತಾನೋ ಏನೋ? ಇರಲಿ! ಬರಲಿ!" ಎಂದು ಪಾಪಚ್ಚಿ ಕೈಯನ್ನು ಆದಷ್ಟು ಒಳಕ್ಕೆಳೆದು ಕೊಂಡು ಮುಷ್ಟಿಬಿಗಿದು ಸಿದ್ಧಳಾದಳು. ಗೋಡೆಯ ಆಚೆ ಕರಕರ ಸದ್ದಾಯಿತು. ಸುಮ್ಮನಿದ್ದಳು. ಕಿಟಕಿಯ ಹತ್ತಿರ ಹೊರಗಡೆ ಯಾವುದೋ ಒಂದು ಪ್ರಾಣಿ ಹರಿದಹಾಗಾಯಿತು. ಆಗ, "ಇಗೋ, ಸಣ್ಣಪ್ಪನ ಗತಿ ಪೂರೈಸಿತು" ಎಂದು ಹೇಳುತ್ತಾ ಕೈಯನ್ನು ಬೀಸಿದಳು.

"ಅಯ್ಯೋ! ಸಣ್ಣಪ್ಪ ಬಿದ್ದ" ಎಂದು ಹತ್ತಾರು ಪ್ರಾಣಿಗಳು ಒಂದಾಗಿ ಕಿರಿಚಿಕೊಂಡುವು. "ಹಿಡಿದುಕೊಳ್ಳಿರೋ, ಬೆಪ್ಪುಗಳಿರಾ" ....ಮೊಲದ ಧ್ವನಿ. ಆಮೇಲೆ ಕೊಂಚ ಹೊತ್ತು ಮೌನ........ ಮತ್ತೆ ಗಲಾಟೆ. "ತಲೆ ಸ್ವಲ್ಪ ಎತ್ತಿ ಹಿಡಿ....ಹಾಗೆ .... ನೀರು ಚಿಮುಕಿಸು.... ಗಾಳಿ ಬೀಸು....ದೂರ ಸರಿಯಿರಿ........ಉಸಿರಾಡಲಿ ಪಾಪ! ಕರಿಯ, ಹಿಂದಕ್ಕೆ ಬಾ........ ಸಣ್ಣಪ್ಪಾ, ಸಣ್ಣಪ್ಪಾ........ಸುಧಾರಿಸಿಕೋ........ ಕೂತುಕೋ, ಹಾಲು ಕುಡಿ ಒಂದು ಚಮಚ. ಒಳಗಡೆ ಇರುವುದು ಏನು, ಹೇಳೋ ಬೇಗ" "ಬಗುಳೋ ಗಟ್ಟಿಯಾಗಿ" "ಹೇಳೋ ನಿಧಾನವಾಗಿ" "ಬಾಯಿ ಬಿಡೋ"........ಹೀಗೆ ಪ್ರಾಣಿಗಳು ಒಂದಾದ ಮೇಲೊಂದು ಹೇಳತೊಡಗಿದುವು.

"ನಾನು ಯಾವುದನ್ನೂ ಖಂಡಿತವಾಗಿ ಹೇಳಲಾರೆ........ನನಗೆ ತಿಳಿದದ್ದಿಷ್ಟು; ದೊಡ್ಡದೊಂದು ಒನಕೆ ಒಳಗಿಂದ ಬಂತು........ಬೀಸಿತು ........ನಾನು ಮೇಲಕ್ಕೆ ಹಾರಿದೆ. ಕೆಳಕ್ಕೆ ಬಿದ್ದೆ........ಬೆನ್ನು ಮೂಳೆ ಮುರಿದಿದೆಯೋ, ಏನೋ? ಅರ್ಧ ಬಾಲ ಎಲ್ಲೋ ಮುರಿದು ಬಿತ್ತು" ಎಂದು ಸಣ್ಣಪ್ಪ ಹೇಳಿದ. "ಹೋದ ಬಾಲ ಮತ್ತೆ ಬೆಳೆಯುತ್ತೆ........ ....ಸದ್ಯಃ ಉಳಿದುಕೊಂಡೆಯಲ್ಲಾ, ನಿನ್ನ ಕೈಹಿಡಿದವಳ ತಾಳಿ ಗಟ್ಟಿ ಯಾಗಿತ್ತು" ಎಂದು ಮುದುಕರೊಬ್ಬರು ಹೇಳಿದರು.

ಆಮೇಲೆ ಕೊಂಚಹೊತ್ತು ಸದ್ದೇ ಇಲ್ಲ. ಕೊನೆಗೆ ಕೇಳಿಸಿತು, ಮೊಲದ ಅಧಿಕಾರವಾಣಿ,—"ಮನೆಗೆ ಬೆಂಕಿ ಇಟ್ಟುಬಿಡಿ. ನನ್ನ ಬಂಗಲಿ ಸುಟ್ಟು ಬೂದಿಯಾಗಲಿ, ಚಿಂತೆಯಿಲ್ಲ. ಆದದ್ದಾಗಲಿ, ಅನಿಷ್ಟ ತೊಲಗಲಿ." ಪಾಪಚ್ಚಿಗೆ ಭಯವಾಯಿತು. "ಹಾಗೇನಾದರೂ ಮಾಡಿದರೆ, ಪಿಲ್ಲಿಯನ್ನು ಛೂ ಬಿಡುತ್ತೇನೆ! ಮ್ಯಾವು!" ಎಂದು ಗರ್ಜಿಸಿದಳು....ಹೊರಗಡೆ ಮಾತು ನಿಂತಿತು. ಯಾವ ಪ್ರಾಣಿಯ ಕಿಚಿಪಿಚಿಯೂ ಇಲ್ಲ- ಎಲ್ಲಕ್ಕೂ ಪ್ರಾಣಭಯ ಹತ್ತಿತು!

"ಮುಂದೆ ಇನ್ನೇನು ತಂತ್ರ ಯೋಚಿಸುತ್ತಾರೋ?" ಎಂದು ಪಾಪಚ್ಚಿ ಚಿಂತಿಸಿದಳು. ಎರಡು ಮೂರು ನಿಮಿಷಗಳು ಹಾಗೆಯೇ ಕಳೆದು ಹೋಯಿತು. "ತಲೆಯೊಳಗೆ ಮಿದುಳಿದ್ದರೆ, ಮೊದಲು ಸೂರನ್ನೇ ಕಳಚಿ ಬಿಸಾಕಬೇಕು, ಅವರು", ಎಂದುಕೊಂಡಳು. ಆಗ, ಮೊಲ ಯಾರನ್ನೋ ಹತ್ತಿರ ಕರೆದು "ಎರಡು ಕುಕ್ಕೆ ತುಂಬ ಸಾಕು. ಬೇಗ ತೆಗೆದುಕೊಂಡು ಓಡಿ ಬಾ" ಎಂದು ಹೇಳಿತು. "ಏನದು? ಎರಡು ಕುಕ್ಕೆ ತುಂಬ?" ಎಂದು ಪಾಪಚ್ಚಿಗೆ ಯೋಚನೆ ಹತ್ತಿತು! ಅಷ್ಟು ಹೊತ್ತಿಗೆ ಸರಿಯಾಗಿ ಮೇಲಿನ ಹೆಂಚೊಂದನ್ನು ಯಾರೋ ತೆಗೆದ ಹಾಗಾಯಿತು. ಅಲ್ಲಿಂದ, ಹತ್ತು ಹನ್ನೆರಡು ಹಿಡಿ ಸಣ್ಣ ಕಲ್ಲುಗಳು ಆವಳ ಮೈಮೇಲೆ ಬಿದ್ದುವು. ಹೆಚ್ಚು ನೋವಾಗಲಿಲ್ಲ. ಆದರೂ, ಕೋಪಬಂತು. "ಓಹೋ! ಈ ಕುಚೇಷ್ಟೆಯನ್ನು ನಾನು ನಿಲ್ಲಿಸುತ್ತೇನೆ" ಎಂದು ಯೋಚಿಸಿ, "ಬೇಡಿ! ಇಂಥಾ ಕಲ್ಲು ಕೆಲಸವನ್ನು ಇನ್ನೊಂದು ಸಲ ಮಾಡಬೇಡಿ. ಅನ್ಯಾಯವಾಗಿ ಹಾಳಾಗಬೇಡಿ!" ಎಂದು ಪಾಪಚ್ಚಿ ಕೂಗಿದಳು. ಮತ್ತೆ ಸದ್ದಡಗಿತು. ಯಾರ ಹಾರಾಟ ಓಡಾಟವೂ ಇಲ್ಲ. ಆದರೆ ಒಂದು ದೊಡ್ಡ ಗುಂಪು ಎಲ್ಲೋ ದೂರದಲ್ಲಿ ಸೇರಿತ್ತೆಂದು ಪಾಪಚ್ಚಿಗೆ ಗೊತ್ತಾಯಿತು. ಏಕೆಂದರೆ ಪಿಸುಗುಟ್ಟುವುದು ಮಾತ್ರ ದೂರದಿಂದ ಗಾಳಿಯಲ್ಲಿ ಕೇಳಿ ಬರುತ್ತಿತ್ತು.

ಒಳಗೆ ಬಿದ್ದದ್ದು ಕಲ್ಲುಗಳೇ? ಅಲ್ಲ. ಅವು ಸಕ್ಕರೆ ಬಾದಾಮಿ ಹಣ್ಣುಗಳು. "ಪಾಪ! ಈ ಊರಲ್ಲಿ ಕಲ್ಲೇ ಸಿಕ್ಕುವುದಿಲ್ಲವೋ ಏನೋ

ಇರಲಿ! ನನ್ನ ಅದೃಷ್ಟ........ಈ ಊರಲ್ಲಿ ಹಸಿವಿನ ಹೊತ್ತಿಗೆ ಸರಿಯಾಗಿ ಯಾರನ್ನಾದರೂ ರೇಗಿಸಿದರೆ ಸಾಕು........ ಅವರು ನಮ್ಮ ಮೇಲೆ ಎಸೆಯುವ ಕಲ್ಲು ಹಣ್ಣನ್ನು ತಿಂದು ಸುಖವಾಗಿರಬಹುದು. ಇದು ಒಳ್ಳೆಯ ಉಪಾಯ!........ ಆದರೆ ಗ್ರಹಚಾರ!........ ಇವನ್ನು ತಿನ್ನ ಬಹುದೋ?........ತಿಂದರೇನು? ಏನಾದರೂ ಮಾರ್ಪಾಡಾಗಬಹುದು, ಅಲ್ಲವೆ? ನನ್ನ ಆಕಾರ ಇನ್ನು ಬೆಳೆಯುವ ಹಾಗೆಯೇ ಇಲ್ಲ; ಆದ್ದರಿಂದ, ಈ ಹಣ್ಣಲ್ಲಿ ಮಾಟವಿದ್ದರೆ, ನನಗೂ ವೈಚಿಕ್ಕದಾಗಲೇಬೇಕು. ಹಾಗಾದರೆ ಹೆದರಿಕೆ ಏಕೆ?" ಎಂದು ಹೇಳುತ್ತಾ ಎರಡು ಹಣ್ಣನ್ನು ಬಾಯಿಗೆ ಹಾಕಿಕೊಂಡಳು.

ಹೌದು. ಪಾಪಚ್ಚಿಯ ಊಹೆ ತಪ್ಪಾಗಲಿಲ್ಲ. ಪಾತಾಳದಲ್ಲಿ ಯಾವುದನ್ನು ತಿಂದರೂ ಒಂದು ವಿಚಿತ್ರವಾದ ಬದಲಾವಣೆ ಆಗಿಯೇ ಆಗುತ್ತದೋ ಏನೋ?........ ಎಂತಹ ಶಕ್ತಿ!........ ಪಾಪಚ್ಚಿ ಮತ್ತೆ ಚಿಕ್ಕಹುಡುಗಿಯಾದಳು .... ಒಂದು ಬೀಗದ ಕೈಯಷ್ಟು ಸಣ್ಣವಳಾದಳು.

"ಇದೇ ಸಮಯ, ಇದೇ ಸಮಯ, ಇದೇ ಸಮಯವು!!" ಎಂದು ಹಾಡುತ್ತಾ, ಬಾಗಿಲ ಸಂದಿನಿಂದ ನುಸುಳಿದಳು. ಹೊರಗಿನ ಮೆಟ್ಟಿಲುಗಳ ಮೇಲೆ ಜಾರಿಕೊಂಡು ಕೆಳಗೆ ಬಿದ್ದಳು. ಕೈಕಾಲು ಮುರಿಯದೆ ಹೇಗೋ ಮೊಲದ ಬಂಗಲಿಯಿಂದ ಹೊರಗೆ ಬಂದಳು. ಅಲ್ಲಿ ಅಂಗಳದಲ್ಲಿ ಅವಳ ಹಿಂದಿನ ಆಕಾರ, ಗದಾಹಸ್ತ, ಅಟ್ಟಹಾಸ, ಇವುಗಳನ್ನೇ ಚರ್ಚಿಸುತ್ತಿದ್ದ ದೊಡ್ಡ ಸಭೆ ನೆರೆದಿತ್ತು. ಸಭಾ ಮಧ್ಯದಲ್ಲಿ ಒಂದು ಹಲ್ಲಿಯನ್ನು (ಅದೇ ಅತಿ ಸಾಹಸಿಯಾದ ಸಣ್ಣಪ್ಪ) ಒಂದು ಹಸುರೆಲೆಯ ಮೇಲೆ ಮಲಗಿಸಿದ್ದರು. ಎರಡು ಹಲ್ಲಿಯ ಮರಿಗಳು ಎರಡು ಪಕ್ಕಗಳಲ್ಲಿಯೂ ಕುಳಿತು ಸಣ್ಣಪ್ಪನ ಕೈಕಾಲುಗಳನ್ನು ಎಳೆದು, ಮಡಿಸಿ, ಅವುಗಳಿಗೆ ಎಣ್ಣೆ ತಿಕ್ಕುತ್ತಿದ್ದುವು. ಮೊಲ ಒಂದು ಕರಟದಿಂದ ಹಲ್ಲಿಗೆ ಕಷಾಯವನ್ನು ಕುಡಿಸುತ್ತಿತ್ತು. ಅವಳಿಗೆ ಆಗ "ಅಯ್ಯೋ! ಪಾಪ" ಎನಿಸಿತು.

ಆ ಸಭೆಯ ಅಂಚಿನಲ್ಲಿಯೇ ಕುಳಿತು ಮಾವಿನಹಣ್ಣನ್ನು ತಿನ್ನುತ್ತಿದ್ದ ಒಂದು ಅಳಿಲುಮರಿ ಅವಳನ್ನು ಕಂಡು ಕಿಚು ಕಿಚೆಂದು ಕಿರಿಚಿತು.

ಎಲ್ಲರೂ ಅವಳ ಕಡೆ ತಿರುಗಿನೋಡಿದರು. ಕೆಲವರು ಧೈರ್ಯದಿಂದ ಬೆನ್ನಟ್ಟಿ ಬಂದರು. ಆದರೂ, ಪಾಪಚ್ಚಿ ಸರಸರನೆ ಓಡಿ ಅಲ್ಲಿದ್ದ ಒಂದು ಹುಲ್ಲಿನ ಪೊದೆಯೊಳಗೆ ಸೇರಿಕೊಂಡಳು.

ಅವಳನ್ನು ಅಲ್ಲೆಲ್ಲ ಹುಡುಕಿ ಆಯಾಸಗೊಂಡು ಪ್ರಾಣಿಗಳು ಮತ್ತೆ ಸಭೆ ಸೇರಿ, ಸುಮ್ಮನಿರುವುದೇ ಮೇಲೆಂದು ತೀರ್ಮಾನಿಸಿ ಮನೆಗಳಿಗೆ ತೆರಳಿದುವು.

---

## ಹಸುರು ಹುಳು

ಹುಲ್ಲಿನ ಪೊದೆಯಿಂದ ಪಾಪಚ್ಚಿ ಮೆಲ್ಲಮೆಲ್ಲನೆ ಹೊರಗೆ ಬಂದು ಬಂಗಲಿಯಿಂದ ದೂರದೂರವಾಗಿ ನಡೆದು ಅಲ್ಲಿದ್ದ ಒಂದು ತೋಟದ ಹತ್ತಿರಕ್ಕೆ ಬಂದಳು. "ಅಬ್ಬಾ! ಎಂಥಾ ಅನಾಹುತವನ್ನು ತಪ್ಪಿಸಿಕೊಂಡು ಬಂದ ಹಾಗಾಯಿತು! ಅವರು ಆ ಮನೆಗೆ ಬೆಂಕಿ ಇಟ್ಟಿದ್ದರೆ ನನ್ನ ಗತಿ ಏನಾಗುತ್ತಿತ್ತೋ?" ಎಂದು ಯೋಚಿಸಿ ಸಮಾಧಾನಪಟ್ಟಳು. "ಇನ್ನು ಮೇಲೆ ಮಾಡಬೇಕಾದ ಕೆಲಸಗಳೆರಡು. ಒಂದನೆಯದು, ನನ್ನ ನಿಜವಾದ ಗಾತ್ರವನ್ನು ಪುನಃ ಸಂಪಾದಿಸುವುದು; ಎರಡನೆಯದು, ಆ ಉದ್ಯಾನವನ್ನು ಪ್ರವೇಶಿಸುವುದು. ಇಷ್ಟು ಹೊತ್ತು ಇಲ್ಲಿ ಒದ್ದಾಡಿದ ಮೇಲೆ, ಇಷ್ಟು ಕಷ್ಟಗಳನ್ನನುಭವಿಸಿದ ಮೇಲೆ ಆ ತೋಟವನ್ನು ನೋಡದೆ ಹಿಂದಿರುಗುವುದು ಸರಿಯಲ್ಲ. ಅದನ್ನು ನೋಡದೆ ಮನೆಗೆ ಹೋದರೆ, ಶಾಮು ಏನಂತಾನೆ? ನನಗೂ ಎಂದೆಂದಿಗೂ ಆ ಕೊರತೆ ಒಳಗೇ ಚುಚ್ಚುತ್ತಿರುತ್ತದೆ" ಎಂದು ಅವಳು ತನಗೆ ತಾನೇ ಹೇಳಿಕೊಂಡಳು.

ಪಾಪಚ್ಚಿಯ ತೀರ್ಮಾನವು ತುಂಬ ಹೊಗಳತಕ್ಕದ್ದೇ. ನಾವೂ ಪಾಪಚ್ಚಿಯ ಸ್ಥಾನದಲ್ಲಿದ್ದಿದ್ದರೆ ನಮಗೂ ಹಾಗೆಯೇ ಅನ್ನಿಸುವುದು. ಆದರೆ, ಮಾಡಬೇಕಾದ ಉಪಾಯವೇನು? ಅದು ಮಾತ್ರ ಅವಳಿಗೆ ತಿಳಿಯದು. ಒಟ್ಟಿನಲ್ಲಿ ಒಂದನ್ನು ಮಾತ್ರ ಹೇಳಬಹುದು. ಪಾತಾಳದ ಪರಿಸ್ಥಿತಿಯನ್ನು ನೋಡಿದರೆ, ಯಾವುದನ್ನಾದರೂ ತಿನ್ನಬೇಕು, ಅಥವಾ

ಕುಡಿಯಬೇಕು. ಆದರೆ, ಯಾವುದನ್ನ, ಎನ್ನುವುದೇ ಅವಳಿಗೆ ಬಗೆ ಹರಿಯಲಿಲ್ಲ.

ಏನು ಮಾಡಬೇಕೆಂದು ತೋಚದೆ ಅವಳು ಅತ್ತಿತ್ತ ಅಲೆಯುತ್ತಿದ್ದಳು. ಪ್ರತಿಯೊಂದು ಹೂವನ್ನೂ ಹುಲ್ಲನ್ನೂ ನಿಧಾನವಾಗಿ ಬಾಯಿಗೆ ಹಾಕಿ, ಪರೀಕ್ಷಿಸುತ್ತ ಮುಂದೆ ನಡೆದಳು. ಆದರೆ, ಅವುಗಳಲ್ಲೊಂದರಲ್ಲಿಯೂ ಯಾವ ಅತಿಶಯವಾದ ಶಕ್ತಿಯೂ ಇದ್ದ ಹಾಗೆ ಕಾಣಿಸಲಿಲ್ಲ. ತಿನ್ನಿರಿ, ಕುಡಿಯಿರಿ, ಎಂದು ಒಂದರ ಮೇಲೂ ಬರೆದಿರಲಿಲ್ಲ.

ಗೊಳ್........ಗೊಳ್ !........ಕಾಲಭೈರವನಂತೆ ಒಂದು ನಾಯಿ ದಾರಿಯಲ್ಲಿ ಮಲಗಿತ್ತು. ಕೀಲಿಕೈಯಷ್ಟು ಕುಳ್ಳಾಗಿದ್ದ ಪಾಪಚ್ಚಿಗೆ ಅದು ಹಾಗೆ ಕಾಣಿಸಿತು, ಅಷ್ಟೆ! ನಿಜಕ್ಕೂ ಅದು ಎರಡು ತಿಂಗಳು ವಯಸ್ಸಿನ ಮುದ್ದು ಮರಿ. ಬೊಗಳುವ ನಾಯಿಯನ್ನು ಕಂಡರೆ ಕಚ್ಚು ಅಂತ ಏನಾದರೂ ಕೊಡುವುದು, ಚಿಕ್ಕಮಕ್ಕಳ ಚೇಷ್ಟೆ. ಸರಿ. ಪಾಪಚ್ಚಿ ಕೂಡ ಒಂದು ಕಡ್ಡಿ ತೆಗೆದು ಅದರ ಬಾಯಿಗೆ ಅಡ್ಡವಾಗಿ ಹಿಡಿದಳು. ಅದನ್ನು ಕಚ್ಚಿ ಚೂರುಮಾಡಲು ನಾಯಿಮರಿ ಗಗನಕ್ಕೆ ಹಾರಿತು. ಧೊಪ್ಪನೆ ಕೆಳಕ್ಕೆ ಬಿತ್ತು. ಬಲಕ್ಕೂ ಎಡಕ್ಕೂ ಕಡ್ಡಿಯನ್ನು ಎಳೆದಾಡಿತು. ಎಲ್ಲಿ ತನ್ನ ಮೈಮೇಲೆ ಬಿದ್ದು ಬಜ್ಜಿ ಮಾಡುತ್ತದೋ ಎಂದು ಪಾಪಚ್ಚಿ ದಿಗಿಲುಪಟ್ಟಳು. ಓಡೋಡಿ ಹೋಗಿ, ಅವಳು ಒಂದು ಗಿಡದ ಮರೆಯಲ್ಲಿ ಅವಿತುಕೊಂಡಳು. ಕಡ್ಡಿಯನ್ನು ಕಚ್ಚಿಕೊಂಡು ನಾಯಿ ಸರ‍್ರನೆ ಮುಂದಕ್ಕೆ ಓಡಿತು ? ಆಟವಾಡುತ್ತ ಸರ‍್ರನೆ ಹಿಂದಕ್ಕೆ ಹಾರಿತು. ಕಡೆಗೆ, ಆಯಾಸದಿಂದ, ಹ ....ಹ್ಹ ಹ.... ಹ್ಹ ಎಂದು ಉಸಿರುಬಿಡುತ್ತ ನಾಲಗೆ ನೀಡಿ ಬೆವರು ಸುರಿಸುತ್ತ ಹಿಂಗಾಲ ಮೇಲೆ ಮೈ ಇರಿಸಿ ಕೂತುಕೊಂಡಿತು. ಕಣ್ಣನ್ನು ಅರೆಮುಚ್ಚಿತು. ಇದೀಗ ಸುಮುಹೂರ್ತ ಎನ್ನುತ್ತ ಪಾಪಚ್ಚಿ ಬಿರು ಬಿರನೆ ದೂರ ದೂರ ಧಾವಿಸಿದಳು. ನಾಯಿ ಬೊಗುಳಿದ ದನಿ ಗೊಳ್..... ಗೊಳ್..... ಗೊಳ್..... ಗೊಳ್..... ಗೊಳ್..... ಎಂದು ಸಣ್ಣದಾಗುತ್ತ ಬಂತು !

ಪಂಕಜನ ಮನೆ ನಾಯಿಗಿಂತ ಇದರ ಜಾತಿ ಉತ್ತಮ ; ಬಣ್ಣವೂ ಅಚ್ಚ ಬಿಳುಪು. ಆಳತೆ ಅಷ್ಟು ಭಯಂಕರವಾಗಿರದಿದ್ದರೆ, ಕೇಳಿದಾಗಲೆಲ್ಲ

ಕೈ ಕೊಟ್ಟು ಕುಲುಕುವುದಕ್ಕೆ, ಹೇಳಿದಾಗಲೆಲ್ಲ ಚೆಂಡು ತರುವುದಕ್ಕೆ, ಅದಕ್ಕೆ ಕಲಿಸಬಹುದಾಗಿತ್ತು...........ಅಂದರೆ, ಅದು ಸರಿಯಾಗಿಯೇ ಇದೆ! ನಾನೇ ಅನ್ಯಾಯದ ಕುಳ್ಳಿ! "ಚೋಟುದ್ದ ಹುಡುಗಿ ನೀನು! ಎಷ್ಟೇ ನಿನ್ನಹಂಕಾರ?" ಎಂದು ಅಮ್ಮ ಬೈಯುವುದಕ್ಕೆ ಸರಿಯಾಗಿ, ನಾನೇ ಚೋಟುದ್ದವಾಗಿದೇನೆ! ನಾಯಿಮರಿಯ ತಪ್ಪು ಏನೂ ಇಲ್ಲ.... ಈಗ, ಯಥಾಪ್ರಕಾರದ ಪಾಪಚ್ಚಿಯಾಗಲು ನಾನು ಯಾವುದನ್ನು ಕುಡಿಯುವುದು, ಎಂಥದ್ದನ್ನು ತಿನ್ನುವುದು?....ಥೂ! ಒಂದೂ ಅರ್ಥವಾಗುವುದಿಲ್ಲ........

ಹೀಗೆ ಮುಂದು ಮುಂದಕ್ಕೆ ಹೆಜ್ಜೆಯಿಡುತ್ತಿರಲು......ಅಲ್ಲಿ, ಒಂದು ಅಣಬೆ. ಪಾಪಚ್ಚಿಗಿಂತ ಕೊಂಚ ಎತ್ತರವಾಗಿ, ಕೆಂಪಗೆ ದಪ್ಪವಾಗಿ ಬೆಳೆದಿತ್ತು ಆ ಅಣಬೆ. ಅದನ್ನೊಂದು ಸಾರಿ ಬಳಸಿ ಬಂದು ಅದರ ಮೇಲು ಭಾಗದಲ್ಲಿ ಏನಿರಬಹುದೆಂದು ನೋಡುವುದಕ್ಕಾಗಿ ತುದಿಗಾಲಿನಲ್ಲಿ ನಿಂತು ಕತ್ತೆತ್ತಿದಳು.

ಅಲ್ಲಿ ಒಂದು ಹಸುರು ಹುಳು. ಕಣ್ಣು ಮುಚ್ಚಿಕೊಂಡು ಗುಡಿಗುಡಿ ಸೇದುತ್ತಾ, ಅದರ ಸೇವನೆಯಿಂದ ಮತ್ತು ತಲೆಗೇರಿದ್ದರಿಂದ ಆನಂದದಲ್ಲಿ ಮುಳುಗಿ ಮೌನವಾಗಿ ಕುಳಿತಿತ್ತು. ಬಾಯಿಂದ ಹೊರಟ ಹೊಗೆ ಸುರುಳಿಸುರುಳಿಯಾಗಿ ಆಕಾಶಕ್ಕೆ ಏರುತ್ತಿತ್ತು, ಪಾಪಚ್ಚಿಗೆ ಆಶ್ಚರ್ಯವಾಯಿತು. ಗುಡಿಗುಡಿಯನ್ನು ಅವಳು ನೋಡಿದ್ದು ಅಂದೇ ಮೊದಲು. ಶಾಮುವಿನ ಚರಿತ್ರೆ ಪುಸ್ತಕದಲ್ಲಿ ಕೆಲವು ಮುಸಲ್ಮಾನ್ ದೊರೆಗಳು ಗುಡಿಗುಡಿ ಸೇದುವ ಚಿತ್ರಗಳಿದ್ದುವು. ಹಸುರು ಹುಳುವಿನ ತಲೆಯ ಮೇಲೂ ಆ ಚಿತ್ರಗಳಲ್ಲಿರುವಂತೆಯೇ ರುಮಾಲು, ಮುತ್ತಿನಸರ, ಶಿರ್ಪೇಷ್ ಮುಂತಾದವುಗಳಿದ್ದುವು. ಪಾಪಚ್ಚಿ ಆ ಹುಳು ನವಾಬನನ್ನು ಎವೆ ಮುಚ್ಚದೆ ನೋಡಿದಳು. ಹುಳುವೂ ಅವಳನ್ನು ದಿಟ್ಟಿಸಿ ನೋಡಿತು. ಕಡೆಗೆ ಗುಡಿಗುಡಿಯನ್ನು ಬಾಯಿಂದ ನಿಧಾನವಾಗಿ ತೆಗೆದು ಅಣಬೆಯ ಮೇಲೆ ನಿಧಾನವಾಗಿ ಇರಿಸಿ, "ನೀನು ಯಾ........ರು?" ಎಂದು ಕೇಳಿತು.



“ ಅಲ್ಲಿ ಒಂದು ಹಸುರು ಹುಳು. ಕಣ್ಣು ಮುಚ್ಚಿಕೊಂಡು ಗುಡಿಗುಡಿ ಸೇದುತ್ತಾ.......ಆನಂದದಲ್ಲಿ ಮುಳುಗಿ ಮೌನವಾಗಿ ಕುಳಿತಿತ್ತು.”

ಅದರ ಸೋಮಾರಿತನವನ್ನೂ ಅಸಡ್ಡೆಯನ್ನೂ ಕಂಡು ಪಾಪಚ್ಚಿಗೆ ನಗು ಬಂತು. "ಬಾಯಿಬಿಡುವುದೇ ಇಷ್ಟು ಲಕ್ಷಣವಾದರೆ, ಈ ಕ್ರಿಮಿ ರಾಜನೊಂದಿಗೆ ಮಾತು ಕಥೆ ಹೇಗೆ ಆಡುವುದು?" ಎಂದು ಅವಳು ಯೋಚಿಸಿದಳು. "ನೀನು ಯಾ.......ರು?" ಎಂದು ಇನ್ನೊಂದು ಸಾರಿ ಹುಳು ಕೇಳಿತು. "ನಾನು ಯಾರು ಎಂದು ನನಗೇ ಇನ್ನೂ ಸರಿಯಾಗಿ ಗೊತ್ತಿಲ್ಲ ಮಹಾಸ್ವಾಮಿ! ಬೆಳಗ್ಗೆ ನಾನು ಹಾಸಿಗೆಯಿಂದೆದ್ದಾಗ ಯಾರಾಗಿದ್ದೆ ಎಂಬುದನ್ನು ಮಾತ್ರ ಬಲ್ಲೆ" ಎಂದು ಪಾಪಚ್ಚಿ ಹೇಳಿದಳು. ಹುಳುವಿನ ಬಡಮೆದುಳಿಗೆ ಇದು ಅರ್ಥವಾಗಲಿಲ್ಲ. ಅದಕ್ಕೆ ಕೊಂಚ ಕೋಪಬಂದಿರಬೇಕು. ಏಕೆಂದರೆ, ಅದು "ಹಾಗೆಂದರೇನು? ವಿಶದವಾಗಿ ಶ್ರುತಪಡಿಸು" ಎಂದು ಕೇಳಿತು.

"ಇದಕ್ಕಿಂತ ಸ್ಪಷ್ಟವಾಗಿ ಹೇಳಲು ನನ್ನಿಂದ ಸಾಧ್ಯವಿಲ್ಲ. ಏಕೆಂದರೆ, ನೋಡಿ........ ಇವತ್ತು ಬೆಳಗ್ಗಿನಿಂದ ನಾನು ನಾನೇ ಅಲ್ಲ. ಇದಕ್ಕಿಂತ ಸ್ಪಷ್ಟವಾಗಿ ಹೇಳುವುದಕ್ಕೆ ನನಗೆ ಬರದು.... ಒಂದೇ ದಿನದಲ್ಲಿ ಇಷ್ಟು ಆಕಾರ, ಅವತಾರ ಬದಲಾಯಿಸಿದರೆ ಎಂಥವರಿಗೂ ತಲೆ ಕೆಟ್ಟು, ಮಂಕು ಕವಿದು ಹೋಗುತ್ತೆ" ಎಂದು ಪಾಪಚ್ಚಿ ನಾಚಿಕೆಯಿಂದ ನೆಲ ನೋಡುತ್ತ ಹೇಳಿದಳು.

ಹುಳುವಿಗೆ ಅವಳ ಮಾತಿನಲ್ಲಿ ಪೂರ ಅಪನಂಬಿಕೆ. ಬೇಸರಿಕೆ. ಅದು ಕೊಂಚ ಕೋಪಿಸಿ "ಕವಿದು ಹೋಗುವುದಿಲ್ಲ" ಎಂದು ಹೇಳಿತು. "ಇರಲಿ. ನಾಳೆ ನೀವೂ ಕೂಡ ಒಂದು ದಾರದ ಗೂಡಿನೊಳಗೆ ಸೇರಿ ಕದ ಹಾಕಿಕೊಂಡು ಒಂದು ವಾರವೋ ಎರಡು ವಾರವೋ ಸತ್ತಹಾಗೆ ಬಿದ್ದಿದ್ದು ಚಿಟ್ಟೆಯಂತೆ ಆಕಾರ ಬದಲಾಯಿಸಿ ಹೊರಗೆ ಬರುವಾಗ ನೋಡುತ್ತೀರಿ, ನಿಮಗೂ ತಲೆ ಕೊಂಚ ಹೇಗೆ ಹೇಗೋ ಆಗುತ್ತೆ," ಎಂದು ಪಾಪಚ್ಚಿ ಬಿಸಿಬಿಸಿಯಾಗಿ ಒರಟು ಮಾತನ್ನಾಡಿದಳು. "ಆಗುವುದಿಲ್ಲ" ಎಂದು ಹುಳು ಹಠಹಿಡಿಯಿತು.

ಆ ರುಮಾಲು ತಲೆಯೊಳಗೆ ಏನು ದುರಹಂಕಾರ! ಏತಿ ಅಂದರೆ ಪ್ರೇತಿ! ಮಾತಿನಲ್ಲಿ ಕೊಂಚವೂ ನಯವಿಲ್ಲ. ನಾಜೋಕಿಲ್ಲ. ಬಾಯಿಂದ

ಮುತ್ತುಗಳು ಉದುರಿಹೋಗಬಹುದೆಂಬ ಭಯದಿಂದಲೋ ಏನೋ, ಒಂದೆರಡು ಮಾತಿಗಿಂತ ಹೆಚ್ಚಾಗಿ ಆಡುತ್ತಲೇ ಇರಲಿಲ್ಲ. ಪಾಪಚ್ಚಿಗೆ ರೇಗಿತು. "ನಿಮ್ಮ ತಲೆ ನಮ್ಮದರ ಹಾಗಲ್ಲವೋ, ಏನೋ? ನನಗೇನೋ ಹಾಗೆಯೇ" ಎಂದು ಸಿಡುಕಿದಳು. "ನನಗೆ ಎಂದು ಹೇಳಿದೆಯಲ್ಲಾ! ನೀನು ಯಾರು?" ಎಂದು ಹುಳು ಹಳೆಯ ರಾಗವನ್ನೇ ಹಾಡಿತು.

"ಇದೆಂತಹ ತುಂಟತನ?" ಪಾಪಚ್ಚಿಗೆ ಏನು ಹೇಳಬೇಕೆನ್ನುವುದು ತೋಚಲೇ ಇಲ್ಲ. ಕಡೆಗೆ, "ಅದಿರಲಿ! ತಾವು ಯಾರು ಅಂತ ಮೊದಲು ಅಪ್ಪಣೆಯಾಗಲಿ!" ಎಂದು ಕೇಳಿದಳು. ಹುಳು ಮತ್ತೆ ಗುಡಿಗುಡಿಯನ್ನು ತೆಗೆದುಕೊಂಡು ಬಾಯಲ್ಲಿಟ್ಟು ಸೇದುತ್ತಾ ಹೊಗೆ ಬಿಡುತ್ತಾ "ಯಾಕೆ ಹೇಳಬೇಕು?" ಎಂದು ಕಣ್ಣು ಮುಚ್ಚಿಕೊಂಡು ಉತ್ತರಕೊಟ್ಟಿತು. "ಈ ದರಿದ್ರ ಪ್ರಾಣಿಗೆ ಇವತ್ತು ಬುದ್ಧಿ ನೆಟ್ಟಗಿಲ್ಲ. ಇದರೊಂದಿಗೆ ಯಾಕೆ ಸುಮ್ಮನೆ ಮಾತು? ಇನ್ನೆಲ್ಲಿಗಾದರೂ ಹೋಗೋಣ" ಎಂದು ಪಾಪಚ್ಚಿ ಗುಣುಗುಟ್ಟುಕೊಂಡು ಹೊರಟಳು. "ಬಾ, ತಂಗಿ! ಹಿಂದಕ್ಕೆ ಬಾ. ಎಲ್ಲಿಗೆ ಓಡುತ್ತೀಯೆ? ಮುಖ್ಯವಾದ ಒಂದು ವಿಷಯ ಹೇಳುವುದಕ್ಕಿದೆ" ಎಂದು ಹುಳು ಅವಳನ್ನು ಕರೆಯಿತು. ಪಾಪಚ್ಚಿಗೆ ಅರ್ಧ ಕೋಪ, ಅರ್ಧ ಆಸೆ. ಅವಳು ಹಿಂದಿರುಗಿದಳು. "ಕೋಪ ಬಲು ಕೆಟ್ಟದ್ದು. ಅತ್ತೆಯ ಮನೆಗೆ ಹೋಗಿ ಒಳ್ಳೆಯ ಸೊಸೆಯೆಂದು ಹೆಸರು ಪಡೆಯ ಬೇಕಾದರೆ ಈಗಲಿಂದಲೇ ನೀನು ಕೋಪವನ್ನು ಬಿಟ್ಟುಬಿಡಬೇಕು" ಎಂದು ಹುಳು ಉಪದೇಶ ಪ್ರಾರಂಭಿಸಿತು. "ಈ ಕಗ್ಗ ಕೇಳಿದೇನೆ" ಎಂದು ಪಾಪಚ್ಚಿ ತನಗೆ ತಾನೇ ಹೇಳಿಕೊಂಡು, ಬಂದ ಕೋಪವನ್ನು ನುಂಗಿಕೊಂಡಳು. ಗುಡಿಗುಡಿಯಿಂದ ಹೊಗೆ ಎಳೆಯುತ್ತಾ ಹಾಗೆಯೇ ಎಂಟು ಹತ್ತು ನಿಮಿಷಗಳ ಕಾಲ ಹುಳು ತೆಪ್ಪಗಿತ್ತು. ಅನಂತರ "ಬೆಳಗಿನಿಂದ ನಿನಗೆ ಏನೇನು ಬದಲಾವಣೆ ಆಯಿತು? ವಿವರಿಸು" ಎಂದು ಕೇಳಿತು.

ತನ್ನ ಗೋಳನ್ನು ಹೇಳಿಕೊಳ್ಳಲು ಇಲ್ಲಿ ಒಬ್ಬನಾದರೂ ಸಿಕ್ಕಿದನಲ್ಲಾ ಎಂದು ಪಾಪಚ್ಚಿಗೆ ಬಹಳ ಸಂತೋಷವಾಯಿತು. "ನಾನು ಈಗ

ಯಾರೋ ಆಗಿಬಿಟ್ಟಿದ್ದೇನೆ. ಯಾರು ಎಂದು ನನಗೆ ತಿಳಿಯದು. ನಿಮಿಷಕ್ಕೆ ಒಂದು ನವೀನ! ನಿನ್ನೆಯ ಸಾಯಂಕಾಲದತನಕ ಬಾಯಿಗೆ ಬರುತ್ತಿದ್ದ ಪಾಠಗಳಲ್ಲಿ ಒಂದೂ ಈಗ ಸರಿಯಾಗಿ ನೆನಪಿನಲ್ಲಿಲ್ಲ. ಘಳಿಗೆಗೊಂದು ಆಕಾರ. ಕಾಲಿಟ್ಟಕಡೆ ಕುಚೋದ್ಯ. ಹೀಗಾಗುತ್ತಿದೆ" ಎಂದು ಪಾಪಚ್ಚಿ ವ್ಯಸನದಿಂದ ಹೇಳಿದಳು.

"ಇರಲಿ! ಯಾವ ಯಾವುದು ಮರೆತುಹೋಗಿದೆ?" ಎಂದು ಹುಳು ವಿಚಾರಿಸಿತು. "ಒಂದು ಎರಡು ಎಂಬ ಪದ್ಯ ಹೇಳಿ ನೋಡಿದೆ. ತಪ್ಪು ತಪ್ಪಾಗಿ ಬಂತು." "ಚಿಂತೆ ಇಲ್ಲ! ಗೋವಿನ ಹಾಡು ಹೇಳು, ನೋಡೋಣ" ಎಂದು ಹುಳು ಅಪ್ಪಣೆಮಾಡಿತು.

ಪಾಪಚ್ಚಿ ಕೈಕಟ್ಟಿಕೊಂಡು ಎದ್ದು ನಿಂತು ಹೇಳತೊಡಗಿದಳು.

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದಿ
ಕರಿಯ ಮಾಳಿಂಗನೆಂಬ ತಾತನ
ಪರಿಯ ನಾನೆಂತು ಪೇಳ್ವೆನು!

ಕಲ್ಲುಸಕ್ಕರೆ ಮಡಿಲೊಳಿಟ್ಟು
ಗೊಲ್ಲ ಹುಡುಗರು ಕಾಣದಂತೆ
ಮೆಲ್ಲ ಮೆಲ್ಲನೆ ನುಂಗಿ ನೋಣೆಯುತ
ಅಲ್ಲಿ ಮೆರೆದನರಣ್ಯದಿ.

ಉದಯಕಾಲದೊಳೆದ್ದು ದಾಸರು
ಪದಗಳೆಲ್ಲವ ಹಾಡಿಕೊಂಡು
ಮುದದಿ ಹುಡುಗರನಟ್ಟಿಕೊಂಡು
ನದಿಗೆ ಹೋದರು ಈಜಲು.

ಅದುವರೆಗೂ ಸುಮ್ಮನೆ ಕೇಳುತ್ತಿದ್ದ ಹುಳು ಥಟಕ್ಕನೆ, "ಸಾಕು. ನಿಲ್ಲಿಸು. ಶುದ್ಧ ಅಸಂಬದ್ಧ" ಎಂದು ಪಾಪಚ್ಚಿಯನ್ನು ಗದರಿಸಿತು. "ಅಲ್ಲಲ್ಲಿ ಒಂದೊಂದು ತಪ್ಪಿರಬಹುದು, ಸಾರ್, ಅಷ್ಟೆ!" ಎಂದು

ಅವಳು ದೈನ್ಯದಿಂದ ಹೇಳಿದಳು. ಮೇಷ್ಟರ ಮುಂದೆ ನಿಂತು ಪಾಠ ಒಪ್ಪಿಸುತ್ತಿದೇನೆಂಬುದು ಅವಳ ಭಾವನೆ "ಮೊದಲಿಂದ ಕೊನೆಯುವ ರೆಗೂ ತಪ್ಪು, ಅವಲಕ್ಷಣದ ಮುದ್ದೆ" ಎಂದು ಹುಳು ಹೇಳಿತು. ಅನಂತರ ಇಬ್ಬರೂ ಕೊಂಚ ಹೊತ್ತು ಮಾತನಾಡಲೇ ಇಲ್ಲ........

ಕಡೆಗೆ ಹುಳು, "ನಿನಗೆ ಎಷ್ಟು ಎತ್ತರವಿರಬೇಕೆಂದು ಆಸೆ?" ಎಂದು ಕೇಳಿತು. "ಅಂಥ ಹಠವೇನೂ ಇಲ್ಲ ನನಗೆ. ಎಷ್ಟೇ ಎತ್ತರ ವಿರಲಿ ಆಗಾಗ್ಗೆ ಬದಲಾಯಿಸುತ್ತಿರಬಾರದು, ಅಷ್ಟೆ ನೋಡಿ" ಎಂದು ಪಾಪಚ್ಚಿ ಹೇಳಿದಳು. "ನೋಡುವುದಿಲ್ಲ" ಎಂದು ಹುಳು ಕೋಪದಿಂದ ಹೇಳಿತು........ಪಾಪಚ್ಚಿಗೆ ಬಹಳ ರೇಗಿತು. ಏನು ಮಾಡುವುದು? ಹೇಳಿದ್ದಕ್ಕೆಲ್ಲಾ ಕುತರ್ಕ, ವಿತಂಡ, ಅಡ್ಡಮಾತು!

"ತಂಗಿ! ನಿನಗೆ ಈಗಿರುವ ಎತ್ತರ ಸಾಕೆ?" ಎಂದು ಹುಳು ಕೇಳಿತು. ಪಾಪಚ್ಚಿ ಎಚ್ಚತ್ತಳು. ಏನೋ ಒಂದು ಉಪಾಯವನ್ನು ಹುಳು ತನಗೆ ಉಪದೇಶಮಾಡಬಹುದೆಂದು ಅವಳಿಗೆ ಆಸೆಯಾಯಿತು. "ಇನ್ನೂ ಒಂದು ಮೊಳ ಹೆಚ್ಚಾಗಿದ್ದರೆ ಮೇಲು. ಈಗಿನ ಹಾಗೆ ಮೂರಂಗುಲವಿದ್ದರೆ ಎಲ್ಲರೂ ತುಳಿಯುತ್ತಾರೆ, ಹಳಿಯುತ್ತಾರೆ, ಗಿಡ್ಡಿ ಅನ್ನುತ್ತಾರೆ" ಎಂದಳು. "ಏಕೆ? ಮೂರಂಗುಲ ಸರಿಯಾದ ಎತ್ತರ ವಲ್ಲವೆ? ನನ್ನ ಎತ್ತರವೂ ಅಷ್ಟೆ!" ಎಂದು ಹೇಳಿ ಹುಳು ನೆಟ್ಟನೆ ಅಣಬೆಯ ಮೇಲೆ ಎದ್ದು ನಿಂತುಕೊಂಡಿತು. ಹೌದು, ಅದೂ ಸರಿಯಾಗಿ ಮೂರಂಗುಲ. ಆಗ ಪಾಪಚ್ಚಿ "ನಿಮಗೆ ನಿಮ್ಮ ಎತ್ತರ ರೂಢಿಯಾಗಿದೆ. ಆದ್ದರಿಂದ, ನಿಮಗೆ ಒಪ್ಪುತ್ತೆ" ಎಂದು ಹೇಳಿದಳು. "ನಿನಗೂ ಒಂದೆರಡು ದಿನಗಳಲ್ಲಿ ರೂಢಿಯಾಗುತ್ತೆ. ಸ್ವಲ್ಪ ತಾಳು" ಎಂದು ಹೇಳಿ, ಹುಳು ಗುಡಿಗುಡಿಯನ್ನು ಕೆಳಗಿರಿಸಿ, ಆಕಳಿಸಿ, ಎರಡು ಮೂರುಸಲ ಮೈಮುರಿದು ನಾಯಿ ಕೊಡೆಯಿಂದ ಮೆಲ್ಲಗೆ ನೆಲಕ್ಕಿಳಿದು ಸರಸರನೆ ಹುಲ್ಲಿನ ರಾಶಿಯೊಳಕ್ಕೆ ಹೊರಟುಹೋಯಿತು........

ಪಾಪಚ್ಚಿಗೆ ಆಗ ಎಷ್ಟು ವ್ಯಥೆಯಾಗಿರಬೇಕೆಂದು ನೀವೇ ಯೋಚನೆ ಮಾಡಿ! ಬೆಕ್ಕಿನ ಚೆಲ್ಲಾಟಕ್ಕೆ ಸಿಕ್ಕಿದ ಇಲಿಯ ಹಾಗೆ ಅವಳು ಇಷ್ಟು

ಹೊತ್ತೂ ಒದ್ದಾಡಿದಳು. ಕಡೆಗೂ ಉಪಾಯ ಹೇಳದೆ ಹುಳು ಹೊರಟೇ ಹೋಯಿತು, ಶನಿ........ಅಷ್ಟರಲ್ಲಿ ಅದು ಹಿಂದಿರುಗಿತು. "ಒಂದು ಕಡೆ ತಿಂದರೆ ಬೆಳೆಯುತ್ತೆ, ಇನ್ನೊಂದು ಕಡೆ ತಿಂದರೆ ಎತ್ತರ ಕಡಮೆ ಯಾಗುತ್ತೆ" ಎಂದು ಹೇಳಿ, ಮತ್ತೆ ಮುಂದಕ್ಕೆ ಪ್ರಯಾಣ ಬೆಳೆಸಿತು.

"ಯಾವುದರ ಒಂದು ಕಡೆ?" ಎಂದು ಅವಳು ಚಿಂತಿಸುವುದ ರೊಳಗೆ "ಅಣಬೆಯ ಒಂದು ಕಡೆ" ಎಂದು ಹುಳು ಉತ್ತರ ಹೇಳಿತು. ಪಾಪಚ್ಚಿ ಅಣಬೆಯನ್ನೇ ದಿಟ್ಟಿಸುತ್ತಾ ಕೊಂಚ ಹೊತ್ತು ಹಾಗೆಯೇ ನಿಂತಳು. ಯಾವ ಕಡೆ ತಿಂದರೆ ಕುಗ್ಗುತ್ತೇನೆ, ಯಾವ ಕಡೆ ತಿಂದರೆ ಹಿಗ್ಗುತ್ತೇನೆ ಎಂದು ಕಣ್ಣನೋಟದಿಂದ ಪತ್ತೆಮಾಡಬಹುದೆಂದು ಅವಳ ಊಹೆ. ಅದು ಛತ್ರಿಯ ಹಾಗೆ ಗುಂಡಾಗಿದ್ದದ್ದರಿಂದ ಅದಕ್ಕೆ ಯಾವ ಕಡೆಯೂ ಇರಲಿಲ್ಲ. ಎಲ್ಲಿಡೆಯೂ ಒಂದೇ ಬಣ್ಣ, ಒಂದೇ ದಪ್ಪ. ಅಂತು, ಅವಳು ಅದರ ಸುತ್ತ ಕೈಗಳೆರಡನ್ನೂ ಚಾಚಿ ನಿಂತು ಎರಡು ಚೂರು ಮುರಿದುಕೊಂಡಳು.

ಯಾವುದನ್ನು ಮೊದಲು ತಿನ್ನುವುದು ಎಂದು ಅನುಮಾನಿಸುತ್ತಾ ಒಂದು ಕೈಯಲ್ಲಿದ್ದ ಚೂರನ್ನು ಕೊಂಚ ಕಚ್ಚಿದಳು. ತಕ್ಷಣವೇ ಅವಳ ಗಲ್ಲ ಕಾಲಿಗೆ ತಗುಲಿ ದೊಡ್ಡ ಪೆಟ್ಟಾಯಿತು. ಪಾಪ! ಅವಳಿಗೆ ಗಾಬರಿ ಯಾಯಿತು. ಹೀಗೆ ಕುಗ್ಗಿಕುಗ್ಗಿ ನೆಲಸಮವಾಗಿ, ಸಾಸಿವೆಯಾದರೆ ಏನು ಗತಿ? ಹೆಚ್ಚು ಕಾಲವಿಳಂಬಮಾಡದೆ ಇನ್ನೊಂದು ಕೈಯಲ್ಲಿದ್ದ ಚೂರನ್ನು ಕೊಂಚ ತಿನ್ನಲೇಬೇಕೆಂದು ಅವಳು ಮನಗಂಡಳು. ಜಾಣೆ. ಆದರೆ ಬಾಯನ್ನು ತೆರೆದು ಅಣಬೆಯ ಚೂರನ್ನು ಒಳಗೆ ತುರುಕುವುದೇ ಬ್ರಹ್ಮಪ್ರಯತ್ನವಾಗಿ ಹೋಯಿತು. ಕೊನೆಗೆ, ಹೇಗೋ ಕಷ್ಟದಿಂದ ಒಂದು ರಾಗಿ ಕಾಳಿನಷ್ಟು ತಿಂದಳು.

"ಅಬ್ಬ! ಕೊಂಚ ಗಾಳಿ ಬಂತು!" ಎಂದು ಪಾಪಚ್ಚಿ ಸಂತೋಷ ಪಟ್ಟಳು. ಅವಳ ತಲೆಯ ಮೇಲೆ ಅಪಾರವಾದ ನೀಲಿಯ ಆಕಾಶ. ಭೂಮಿ ಅವಳಿಗೆ ಪಾತಾಳದಲ್ಲಿ ಕಾಣಿಸಿತು. ನೀಲಗಿರಿ ಬೆಟ್ಟದ ಸಾಲು ದಿಗಂತದಲ್ಲಿ ಶೋಭಿಸಿತು. ಆದರೆ, ಅವಳ ತೋಳುಗಳ ಸುದ್ದಿಯೇ

ಇರಲಿಲ್ಲ. ಕೆಳಗೆ ಬರಿಯ ಒಂದು ಹಸುರು ಚಾಪೆಯನ್ನು ಹಾಸಿದ್ದ ಹಾಗಿತ್ತು. "ಅಯ್ಯೋ! ನನ್ನ ತೋಳುಗಳೆಲ್ಲಿ, ಕೈಗಳೆಲ್ಲಿ?" ಎಂದು ಪಾಪಚ್ಚಿ ಗೋಳಾಡಿದಳು. ಕೈಗಳನ್ನು ಬೀಸಲು ಯತ್ನಿಸಿದಳು. ಆದರೆ, ಅವು ಎಲ್ಲೋ ಕೆಳಗೆ ದೂರದಲ್ಲಿ ಮರಗಳ ಕೊಂಬೆಗಳ ನಡುವೆ ಕೊಂಚ ಅಲ್ಲಾಡಿದುವು, ಅಷ್ಟೆ! ಕಣ್ಣಿಗೆ ಕಾಣಿಸಲೇ ಇಲ್ಲ. ಆಗ, ತಾನು ನಿಂತಿದ್ದು ಒಂದು ದೊಡ್ಡ ಹಸುರು ಬಯಲಿನ ಮಧ್ಯೆ ಎಂದು ಅವಳಿಗೆ ಗೊತ್ತಾಯಿತು. ಅವಳ ಕತ್ತು ಬಹಳ ನೀಳವಾಗಿತ್ತು. ತಲೆಯು ನಕ್ಷತ್ರಗಳನ್ನು ಕೀಳುವಂತಿತ್ತು.



ಆಗ ಒಂದು ಪಾರಿವಾಳದ ಹಕ್ಕಿ ಅವಳ ತಲೆಯ ಹತ್ತಿರಕ್ಕೆ ಹಾರಿ ಬಂದು, ಅವಳ ಮೇಲೆ ಉಗುಳಿ, ಅವಳನ್ನು ಬೈದು, ಬಹಳವಾಗಿ ಪೀಡಿಸ ತೊಡಗಿತು. ತನ್ನ ಗೂಡಿನಿಂದ ಮೊಟ್ಟೆಗಳನ್ನು ಅಪಹರಿಸಿ ತಿನ್ನಲು ಬಂದಿರುವ ಒಂದು ದೊಡ್ಡ ಹಾವೆಂದು ಅದು ಪಾಪಚ್ಚಿಯ ಕತ್ತು ತಲೆಗಳನ್ನು ನೋಡಿ ತಿಳಿದುಕೊಂಡಿತ್ತು. "ಹಾವು, ಹಾವು!" ಎಂದು ಅರಚಿಕೊಂಡಿತು. "ನಾನು ಹಾವಲ್ಲ, ಪಾರಿ!" ಎಂದು ಅವಳು ಎಷ್ಟು ಹೇಳಿದರೂ ಕೇಳಲಿಲ್ಲ. "ಅಯ್ಯೋ! ನಾನು ಮರಗಳ ಹೊದರುಗಳಲ್ಲಿ, ಬೇಲಿಗಳ ಸಂದಿಯಲ್ಲಿ, ಎಲ್ಲಿ ಗೂಡುಕಟ್ಟಿ ಮರಿಗಳನ್ನು ಸಾಕುತ್ತಿದ್ದರೂ ಹಾವುಗಳಿಗೇ ಆಹುತಿಯಾಗುತ್ತವೆ. ಕಡೆಗೆ, ಈ ಮರದ ತುತ್ತತುದಿಯಲ್ಲಿ ಗೂಡುಕಟ್ಟಿ ಮುದ್ದಾದ ಮೂರು ಮೊಟ್ಟೆಗಳನ್ನು ಇಟ್ಟು, ಮೂರುವಾರ ನಿದ್ದೆಕೆಟ್ಟು, ಮರಿಗಳನ್ನು ಸಾಕಿದರೆ, ಇಲ್ಲಿಗೂ ಬಂದೆಯಾ, ಮಾರಿ!" ಎಂದು ಯದ್ವಾತದ್ವಾ ಶಪಿಸಿತು. "ಹಾಗೆ ಅನ್ನಬೇಡಿ! ನಾನು ಹಾವಲ್ಲ. ನಾನೊಂದು ಚಿಕ್ಕ ಹುಡುಗಿ. ನನ್ನ ಹೆಸರು........" ಎಂದು ಪಾಪಚ್ಚಿ ಹೇಳತೊಡಗಿದಳು. ಅಷ್ಟರೊಳಗೆ, "ಆಕಾಶಕ್ಕಿಂತ ಆರಡಿ ಎತ್ತರ ಬೆಳೆದು ಇನ್ನೂ ಚಿಕ್ಕ ಹುಡುಗಿಯಂತೆ, ಚಿಕ್ಕ ಹುಡುಗಿ! ಚೆನ್ನಾಗಿದೆ. ನಾನೇನು ಹುಡುಗಿಯನ್ನು ನೋಡೇ ಇಲ್ಲವೇನು? ಇಂಥಾ ಅನಿಷ್ಟ ಅವತಾರಾನ ನಾನೆಲ್ಲೂ ನೋಡಿಲ್ಲ" ಎಂದು ಪಾರಿವಾಳ ಹೇಳಿತು. "ಅದಿರಲಿ! ನನ್ನ ಗೂಡಿನ ಹತ್ತಿರ ಏಕೆ ಬಂದೆ? ದೂರ ಹೋ[illegible] ತೊಲಗು" ಎಂದು ಬೇಡಿಕೊಂಡಿತು.

ಪಾಪಚ್ಚಿ ಕೊಂಚ ದೂರ ಸರಿದಳು. ತನ್ನ ಕೈಯಲ್ಲಿದ್ದ ಚೂರುಗಳನ್ನು ಬಹಳ ಶ್ರಮಪಟ್ಟು ಬಾಯ ಹತ್ತಿರಕ್ಕೆ ತಂದಳು. ಅನಂತರ, ಜಾಗರೂಕತೆಯಿಂದ ಒಂದೊಂದು ಚೂರಿನಿಂದಲೂ ಕೊಂಚ ಕೊಂಚ ತಿನ್ನುತ್ತಾ ಒಮ್ಮೆ ಹಿರಿದಾಗಿ, ಒಮ್ಮೆ ಕಿರಿದಾಗಿ, ತನ್ನ ಸಹಜವಾದ ಎತ್ತರಕ್ಕೆ ಪುನಃ ಬಂದು ಸೇರಿದಳು. ಪಾಪಚ್ಚಿಯಷ್ಟೇ ಎತ್ತರದವಳಾದಳು.


"ಅಬ್ಬ! ಒಂದು ಕೆಲಸ ಪೂರೈಸಿದ ಹಾಗಾಯಿತು. ಇನ್ನು ಮೇಲೆ ನನ್ನ ಹತ್ತಿರವೇ ಚೂರುಗಳಿರುವುದರಿಂದ ಯಾವಾಗ ಬೇಕೆಂದರೆ ಆಗ ನಾನೇ ನನ್ನ ಎತ್ತರ ಬದಲಾಯಿಸಿಕೊಳ್ಳುತ್ತೇನೆ. ಶಾಮು ಇಲ್ಲಿ ಇದ್ದಿದ್ದರೆ ಅವನಿಗೆ ಒಂದು ಚೂರು ತಿನ್ನಿಸಿ ಗಾಬರಿಪಡಿಸಬಹುದಾಗಿತ್ತು. ಪಿಲ್ಲಿ ಇದನ್ನು ತಿಂದರೆ ದೊಡ್ಡ ಹುಲಿಯಾಗಿಬಿಡುತ್ತಾಳೋ ಏನೋ!........ ಇರಲಿ! ಇನ್ನು ಉಳಿದಿರುವುದು ಆ ಹೂದೋಟವನ್ನು ನೋಡುವುದು ಒಂದೇ" ಎಂದುಕೊಳ್ಳುತ್ತಾ ಪಾಪಚ್ಚಿ ಮುಂದಕ್ಕೆ ನಡೆದಳು.

---

## ಬಾಬಾಬುಡನ್ ಬೆಕ್ಕು

ಹೋಗುತ್ತಾ ಹೋಗುತ್ತಾ ಒಂದು ಕಾಲುದಾರಿ ಸಿಕ್ಕಿತು. ಅದನ್ನೇ ಹಿಡಿದು ಕೊಂಚ ದೂರ ಹೋದಾಗ ಒಂದು ಪುಟ್ಟ ಬಂಗಲಿ. ಮೊಲದ ಮನೆಗಿಂತ ಸ್ವಲ್ಪ ದೊಡ್ಡದೆನ್ನಬಹುದು. "ಹೀಗೆಯೇ ನಾನು ಈ ಮನೆಯೊಳಕ್ಕೆ ನುಗ್ಗಿದರೆ ನನ್ನ ಆಕಾರವನ್ನು ಕಂಡು ಇಲ್ಲಿ ಇರುವವರು ಹೆದರಿಕೊಂಡಾರು" ಎಂದು ಯೋಚಿಸಿ, ತನ್ನ ಕೈಯಲ್ಲಿದ್ದ ಅಣಬೆಯ ಚೂರಿನಿಂದ ಕೊಂಚ ತಿಂದು ಒಂದು ಗೇಣೆತ್ತರದ ಹುಡುಗಿಯಾಗಿ ಮನೆಯ ಬಾಗಿಲ ಕಡೆ ಹೋದಳು. ಮನೆಯೊಳಗೆ ಬಹಳ ಗದ್ದಲವಾಗುತ್ತಿತ್ತು. ಅದೇನೆಂದು ತಿಳಿಯಲು ಪಾಪಚ್ಚಿ ಕೊಂಚ ದೂರದಲ್ಲಿಯೇ ನಿಂತು ಕಿವಿಗೊಟ್ಟು ಕೇಳಿದಳು.

ಅಲ್ಲಿ ಕೊಂಚ ಹೊತ್ತು ಅನುಮಾನಿಸುತ್ತಾ ನಿಂತಳು. ಯಾವನೋ ಬೆಳ್ಳಿ ಕಟ್ಟಿಗೆಯ ಜವಾನ ಎಲ್ಲಿಂದಲೋ ಓಡಿಬಂದು ಬಾಗಿಲನ್ನು ತಟ್ಟಿ



ಮೀನುಮುಖದವನು ಒಂದು ದೊಡ್ಡ ಕಾಗದವನ್ನು ತೆಗೆದುಕೊಟ್ಟು,
“ ಅಮ್ಮಾವರಿಗೆ.......ಸನ್ನಿಧಾನದಿಂದ.......” ಎಂದು ಹೇಳಿದನು.

ದನು. (ಅವನ ಮುಖವು ಮೀನಿನ ಹಾಗೆ ಕಾಣಿಸಿತು.) ಒಳಗಿಂದ ಅದೇ ಉಡುಪಿನ ಇನ್ನೊಬ್ಬ ಜವಾನ ಬಂದು ಬಾಗಿಲನ್ನು ತೆರೆದನು. (ಇವನ ಮುಖ ಒಂದು ಕಪ್ಪೆಯ ಹಾಗೆ.)

ಮೀನು ಮುಖದವನು ಜೇಬಿಂದ ಒಂದು ದೊಡ್ಡ ಲಕ್ಕೋಟೆಯನ್ನು ತೆಗೆದು ಕಪ್ಪೆಯ ಕೈಯಲ್ಲಿ ಕೊಟ್ಟು, "ಅಮ್ಮಾವರಿಗೆ.....ಸನ್ನಿಧಾನ ದಿಂದ....ಚೆಂಡಾಟಕ್ಕೆ ಬರಬೇಕೆಂದು ಅಪ್ಪಣೆಯಾಗಿದೆ" ಎಂದು ಹೇಳಿದನು. ಕಪ್ಪೆ ಜವಾನನು, ಅದೇ ಸ್ವರದಲ್ಲಿಯೇ, "ಚೆಂಡಾಟಕ್ಕೆ ಬರಬೇಕೆಂದು ಅಪ್ಪಣೆಯಾಗಿದೆ......ಸನ್ನಿಧಾನದಿಂದ......ಅಮ್ಮಾವರಿಗೆ" ಎಂದು ಹೇಳಿ, ಅನಂತರ, ಆದರದಿಂದ ಆ ಕಾಗದವನ್ನು ಸ್ವೀಕರಿಸಿದನು. ಇಬ್ಬರೂ ಮಂಡಿಯೂರಿ, ತಲೆಬಾಗಿ, ಒಬ್ಬರಿಗೊಬ್ಬರು ವಂದಿಸಿದರು. ಆಗ, ಅವರಿಬ್ಬರ ಕೆಂಪು ರುಮಾಲುಗಳೂ ಜಾರಿಬಿದ್ದು ಬಿಚ್ಚಿಹೋದುವು.

ಪಾಪಚ್ಚಿಗೆ ತಡೆಯಲಾರದ ನಗು. ಮರ್ಯಾದೆ ಮೀರಬಾರದೆಂದು, ಕೊಂಚ ದೂರ ಹೋಗಿ, ಮರೆಯಲ್ಲಿ ನಕ್ಕು, ಮತ್ತೆ ಮೊದಲಿನ ಜಾಗಕ್ಕೆ ಬಂದಳು. ಅಷ್ಟರಲ್ಲಿ ಮೀನು ಜವಾನ ಹೊರಟುಹೋಗಿದ್ದನು. ಕಪ್ಪೆ ಮೂತಿಯವನು ಮಾತ್ರ ಹೊಸಲಲ್ಲಿ ಕುಳಿತು ಗೊರಕೆಹೊಡೆಯುತ್ತಿದ್ದನು. "ಈ ಜವಾನರಿಗೆ ಇಷ್ಟು ಬೇಗ ನಿದ್ದೆ ಎಲ್ಲಿಂದ ಬರುತ್ತೆ," ಎಂದು ಪಾಪಚ್ಚಿ ಆಶ್ಚರ್ಯಪಟ್ಟಳು.

ಪಾಪಚ್ಚಿ ಬಾಗಿಲ ಬಳಿ ಹೋಗಿ ನಿಂತು, ಗಟ್ಟಿಯಾಗಿ "ಬಾಗಿಲು" ಎಂದಳು ಜವಾನ ಕಣ್ತೆರೆದನು. ಜವಾನರು ಇಷ್ಟು ಬೇಗ ನಿದ್ದೆಯಿಂದ ಎಚ್ಚೆತ್ತುಕೊಳ್ಳುವುದು ಹೇಗೆ, ಎಂದು ಪಾಪಚ್ಚಿ ಈಗ ಆಶ್ಚರ್ಯಪಟ್ಟಳು. "ಯಾಕಮ್ಮಾ, ಸುಮ್ಮನೆ ಒದರುತ್ತೀರಿ? ಗಂಟಲು ಒಡೆದುಹೋಗುತ್ತೆ, ಅಷ್ಟೆ! ಜವಾನ ಎನ್ನುವ ಪಿಂಡ ಬಾಗಿಲ ಹೊರಗೆ ದೆವ್ವದ ಹಾಗೆ ಇಲ್ಲಿ ಕುಳಿತಿರುವಾಗ, ಒಳಗಿಂದ ಬಾಗಿಲು ತೆಗೆಯುವವರು ಯಾರು? ಒಳಗಿನ ಗಲಾಟೆಯಲ್ಲಿ ಅಲ್ಲಿರುವವರಿಗೆ ಕಿವಿ ಕೇಳಿಸುವುದು ತಾನೆ ಹೇಗೆ? ನೀವೇ ಯೋಚನೆಮಾಡಿ! ಮನೆ ಮೇಲೆ ಸಿಡಿಲು ಬಡಿದರೂ ಒಳಗಿರುವವರಿಗೆ ಗೊತ್ತಾಗುವಂತಿಲ್ಲ" ಎಂದು ಕಪ್ಪೆ ಹೇಳಿದನು.

ಹೌದು! ಆ ಬಂಗಲಿಯ ಒಳಗಿಂದ ಧಡ ಧಡಾರನೆ ವಿವಿಧ ಶಬ್ದಗಳು ಕಲೆತು ಕರ್ಣ ಕಠೋರವಾಗಿ ಹೊರಬೀಳುತ್ತಿದ್ದವು—ಕೂಗು, ರೇಗು, ಅಳು, ಬೈಗಳು, ಆರ್ಭಟ, ಕೆಮ್ಮಲು, ಶೀನು, ಅಟ್ಟಹಾಸ....ಎಲ್ಲವೂ ಒಟ್ಟಿಗೆ, ಒಂದೇ ಕಡೆಯಿಂದ! ಕಪ್ಪೆ "ನಾನು ಒಳಗಿದ್ದಿದ್ದರೆ ಬಾಗಿಲು ತೆಗೆದು ನಿಮ್ಮನ್ನು ಮನೆಯೊಳಕ್ಕೆ ಬಿಡುತ್ತಿದ್ದೆ. ಅಥವಾ, ನಾನಿಲ್ಲಿದ್ದು ನೀವು ಒಳಗಿದ್ದು ಬಾಗಿಲು ತಟ್ಟಿದರೆ, ನಾನು ತೆರೆದು ಹೊರಗೆ ಬಿಡುತ್ತಿದ್ದೆ. ಈಗ ಎರಡೂ ಸಾಧ್ಯವಿಲ್ಲ" ಎಂದು ಹೇಳಿ ಸ್ವಸ್ಥಾನದಲ್ಲಿ ಕುಳಿತು ನಿರಾತಂಕವಾಗಿ ಮತ್ತೆ ಆಕಾಶ ನೋಡಿಕೊಂಡು ಆಕಳಿಸಿದ. ತಲೆಯ ತುದಿಯಲ್ಲಿ ಕಣ್ಣಿರುವಾಗ, ಪಾಪ, ಆಕಾಶ ನೋಡದೆ ಏನು ಮಾಡಿಯಾನು ಎಂದು ಪಾಪಚ್ಚಿ ಅಂದುಕೊಂಡಳು.

"ಮನೆಯ ಜವಾನನ ಸ್ವಭಾವದಿಂದ ಮನೆಯವರ ಸ್ವಭಾವವನ್ನು ನಾವು ನಿರ್ಧರಿಸಿಬಿಡುತ್ತೇವೆ. ಅಮ್ಮಾವರು ನಿಜವಾಗಿ ದೊಡ್ಡಮನುಷ್ಯರಾಗಿರಬೇಕು. ಆದರೂ, ಈ ಹುಂಬ ಯಾರಾದರೂ ಬಂದರೆ, ಏನು, ಎತ್ತ ಎಂದು ವಿಚಾರಿಸಿ ಒಳಗೆ ತಿಳಿಸಿ ಮರ್ಯಾದೆಯಿಂದ ನಡೆದುಕೊಳ್ಳಬೇಡವೆ?" ಎಂದು ಪಾಪಚ್ಚಿ ತನಗೆ ತಾನೇ ಹೇಳಿಕೊಂಡಳು. ನಿದ್ದೆಮಾಡುತ್ತಿದ್ದ ಆ ಜವಾನನನ್ನು ಒದ್ದುಬಿಡೋಣವೆನ್ನಿಸಿತು. ಆದರೂ ಸೌಮ್ಯವಾಗಿ "ಅಯ್ಯಾ! ನಾನು ಒಳಗೆ ಹೋಗುವುದು ಹೇಗೆ?" ಎಂದು ಅವನನ್ನು ಮತ್ತೆ ಕೇಳಿದಳು. ಕಪ್ಪೆ ಕಣ್ತೆರೆದು, "ನಾನು ನಾಳೆ ಬೆಳಗ್ಗೆತನಕ ಇಲ್ಲಿಯೇ....." ಎಂದು ಹೇಳುತ್ತಿರುವಾಗಲೇ ಮನೆಯೊಳಗಿಂದ ಯಾರೋ ಬಲವಾಗಿ ಎಸೆದ ಒಂದು ಬೋಗುಣಿ ಬಾಗಿಲನ್ನು ತಳ್ಳಿಕೊಂಡು ಕಪ್ಪೆಯ ತಲೆಯ ಮೇಲಿಂದ ಹಾರಿ ಮೂಗನ್ನು ತರಿದು ಕೊಂಚ ದೂರವಾಗಿ ಬಿತ್ತು! "ಥೂ! ಇವನೊಂದಿಗೆ ಏನು ಚರ್ಚೆ?" ಎಂದು ಹೇಳುತ್ತಾ ಪಾಪಚ್ಚಿ ಬಾಗಿಲು ನೂಕಿಕೊಂಡು ಒಳಗೆ ಪ್ರವೇಶಿಸಿದಳು.

ಆ ಬಂಗಲಿಯಲ್ಲಿ ಮೊದಲನೆಯ ಕೊಠಡಿಯೇ ಅಡಿಗೆಯ ಮನೆ. ತುಂಬಾ ಸೆಕೆ....ಹೊಗೆ....ಮೆಣಸಿನ ಪುಡಿಯ ಘಾಟು. ನಟ್ಟನಡುವೆ ಹಾಕಿದ್ದ ಒಂದು ಬೆಂಚಿನ ಮೇಲೆ ಅಮ್ಮಾವರು ಗಂಭೀರವಾಗಿ ಕುಳಿತು

ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಆಟವಾಡಿಸುತ್ತಿದ್ದರು. ಅಡಿಗೆಯವಳು ಒಲೆಯಲ್ಲಿ ಕುದಿಯುತ್ತಿದ್ದ ಸೀರುಳ್ಳಿ ಹುಳಿಯನ್ನು ಸೌಟನಿಂದ ತೆಗೆದು ಬಾಯಿಗೆ ಸುರಿದುಕೊಂಡು ರುಚಿನೋಡುತ್ತಿದ್ದಳು. ಎಲ್ಲರೂ ಎಡೆಬಿಡದೆ ಶೀನುತ್ತಿದ್ದರು. ತಾಯಿ, ಕೂಸು, ಪಾಪಚ್ಚಿ ಎಲ್ಲರೂ ಅನೇಕಸಲ ಒಟ್ಟಿಗೆ ಶೀತರು. ಆದರೆ, ಇಬ್ಬರಿಗೆ ಮಾತ್ರ ಆ ಮೆಣಸಿನಪುಡಿ ಯಿಂದ ಯಾವ ತೊಂದರೆಯೂ ಆದಹಾಗೆ ಕಾಣಿಸಲಿಲ್ಲ—ಅಡಿಗೆಯ ವಳಿಗೆ, ಮತ್ತು ಅಲ್ಲೇ ಒಲೆಯ ಮೇಲೆ ಕುಳಿತು ಕಿವಿಯಿಂದ ಕಿವಿವರೆಗೂ ಹಲ್ಲುಕಿರಿಯುತ್ತಿದ್ದ ಬೆಕ್ಕಿಗೆ!

ಪಾಪಚ್ಚಿ ಒಳಗೆ ಹೋಗಿ ಬಹಳ ಹೊತ್ತು ನಿಂತುಕೊಂಡಿದ್ದರೂ ಯಾರೂ ಅವಳೊಂದಿಗೆ ಮಾತಾಡಲೇ ಇಲ್ಲ. ಅವಳು ಬಂದ ಸುದ್ದಿ ಕೂಡ ಯಾರಿಗೂ ಮುಟ್ಟಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಕೆಲಸ ಕಾರ್ಯ ಗಳಲ್ಲಿ ನಿರತರಾಗಿದ್ದರು. ಆದ್ದರಿಂದ, ಪಾಪಚ್ಚಿಯೇ ಮೊದಲು ನಾಚಿಕೆ ಗೆಟ್ಟು ಮಾತನಾಡಬೇಕಾಗಿಬಂತು. ಅವಳು, "ರೀ! ಆ ಬೆಕ್ಕು ಯಾಕ್ರಿ ಹಾಗೆ ಹಲ್ಲುಕಿರಿಯುತ್ತಾ ಇದೆ?" ಎಂದು ಕೇಳಿದಳು. "ಅದು ಬಾಬಾ ಬುಡನ್ ಬೆಕ್ಕು. ಆದ್ದರಿಂದಲೇ ಹಾಗೆ ಹಲ್ಲುಕಿರಿಯುವುದು....ಹಂದೀ!" ಎಂದು ಅಮ್ಮಾವರು ಉತ್ತರವಿತ್ತರು.

"ಹಂದೀ" ಎಂದು ಅಮ್ಮಾವರು ಬೈದದ್ದನ್ನು ಕೇಳಿ ಪಾಪಚ್ಚಿ ಬೆಚ್ಚಿದಳು. ಆದರೆ, ಅದು ತನ್ನನ್ನು ಕುರಿತು ಹೇಳಿದ್ದಲ್ಲ; ಅವಳ ಕೂಸು ರಂಪಮಾಡಿದ್ದಕ್ಕಾಗಿ ಬೈದ ಕೋಪದ ಮಾತು ಎಂದು ಅನಂತರ ಹೊಳೆಯಿತು. ಪಾಪಚ್ಚಿ, ಮತ್ತೆ, "ಬಾಬಾಬುಡನ್ ಬೆಕ್ಕು ಹಲ್ಲು ಕಿರಿಯುತ್ತದೆಯೇ? ಬೆಕ್ಕುಗಳಿಗೆ ಈ ವಿದ್ಯೆ ಬರುತ್ತೆ ಎಂದು ನನಗೆ ಇದು ವರೆಗೂ ಗೊತ್ತೇ ಇರಲಿಲ್ರಿ" ಎಂದಳು ........ "ಓಹೋ! ಕಿರಿಯದೆ ಏನು? ಎಲ್ಲಕ್ಕೂ ಬರುತ್ತೆ. ಆದರೆ, ಕೆಲವು ಅಭ್ಯಾಸಮಾಡದೆ ಹಾಗೆಯೇ ಬಿಟ್ಟುಬಿಟ್ಟಿವೆ, ಕೆಲವು ಅಭ್ಯಾಸಮಾಡಿವೆ, ಅಷ್ಟೆ. ನಮ್ಮ ಮನೆ ಬಾಬಾಬುಡನಿಗೆ ಚೆನ್ನಾಗಿ ಅಭ್ಯಾಸವಾಗಿದೆ" ಎಂದು ಅಮ್ಮಾವರು ಹೇಳಿದರು. "ನನಗೆ ಗೊತ್ತೇ ಇರಲಿಲ್ಲ" ಎಂದು ಪಾಪಚ್ಚಿ ಹೇಳಿದಾಗ,

ಅಮ್ಮಾವರು ಕೋಪಿಸಿ, "ನಿನಗೇನು ಗೊತ್ತಿದೆ! ಎಳೇ ನಿಂಬೆಕಾಯಿ!" ಎಂದು ಹಾಸ್ಯಮಾಡಿದರು. ಪಾಪಚ್ಚಿ ಏನು ಮಾಡಿಯಾಳು? ಹೇಗೆ ತಡೆದಾಳು?

ಅವಳಿಗೆ ಅಳು ಬಂತು. ಹೀಗೇನಾದರೂ ಶಾಮು ಅವಳನ್ನು ಬೈದಿದ್ದರೆ, ಅವಳು ಅಳುತ್ತಾ ಓಡಿಹೋಗಿ ಅಮ್ಮನಿಗೆ ಹೇಳುತ್ತಿದ್ದಳು. "ಹೋಗೆ! ನನ್ನ ಕೈಯಲ್ಲಾಗುವುದಿಲ್ಲ. ನಿಮ್ಮ ಜಗಳ ತೀರಿಸುವುದಕ್ಕೆ, ಮೂರು ಹೊತ್ತೂ ಇದೇ ಕೆಲಸ ನಿಮಗೆ!" ಎಂದು ಅಮ್ಮ ಹೇಳಿಬಿಟ್ಟರೆ, ಹೆಬ್ಬಾಗಿಲ ಬಳಿಯೇ ನಿಂತು, ಅಣ್ಣ ಬರುವತನಕ ಕಾದಿದ್ದು, ಕೋಪ ಆರಿ ಹೋಗದಹಾಗೆ ಮಧ್ಯೆಮಧ್ಯೆ ಬಿಕ್ಕುತ್ತಾ ಇದ್ದು, ಅಣ್ಣನಿಗೆ ಹೇಳಿ ಶಾಮುವಿಗೆ ತಕ್ಕ ಶಿಕ್ಷೆ ಮಾಡಿಸುತ್ತಿದ್ದಳು. ಈಗ ಇಲ್ಲಿ ಯಾರಿಗೆ ಹೇಳುವುದು? ಯಾರಿಂದ ಹೊಡೆಯಿಸುವುದು? ಆದ್ದರಿಂದ, ಸುಮ್ಮ ನಾದಳು.

ಅಷ್ಟರಲ್ಲಿ ಅಡಿಗೆಯವಳಿಗೆ ಇದ್ದಕ್ಕಿದ್ದ ಹಾಗೆ ಹುಚ್ಚುಹಿಡಿಯಿತು! ಒಲೆಯಮೇಲಿರಿಸಿದ್ದ ಸಕಲ ಪದಾರ್ಥಗಳನ್ನೂ ಪಾತ್ರೆ ಸಹಿತ ಎತ್ತಿ ನಾಲ್ಕು ಕಡೆಗೂ ಎಸೆಯುತ್ತಾ ಬಂದಳು. ಪಾಪಚ್ಚಿಗೆ ಭಯವಾಯಿತು. ಅಮ್ಮಾವರು ಮಾತ್ರ ಕೊಂಚವೂ ಹೆದರದೆ ಅಲ್ಲಿಯೇ ಹಾಡುತ್ತಾ ಕುಳಿತಿದ್ದರು. ಒಂದುಸಾರಿ ಅವರ ಮೈಮೇಲೂ ಅನ್ನದ ತಪ್ಪಲೆ ಬಿತ್ತು. ಆದರೂ ಹಾಡುತ್ತಿದ್ದರು. ಕೂಸಿನ ಕಿರಿಚಾಟ ಮಾತ್ರ ನಿಲ್ಲಲಿಲ್ಲ. ಹಾಡು ಕೇಳುತ್ತ ಕೇಳುತ್ತ ಅದು ಜಾಸ್ತಿಯಾಗಿ ಕಿವಿ ಒಡೆದು ಹೋಗುವ ಹಾಗಿತ್ತು. ಅದರ ರೋದನ ಪಾಪಚ್ಚಿಗೆ ಸರಿಯಾದ ಹಂದಿಯ ಧ್ವನಿಯಂತೆಯೇ ಕೇಳಿಸಿತು.

ಆಗ, ಅಡಿಗೆಯವಳು ಎಸೆದ ಒಂದು ಸಟ್ಟುಗ ಕೂಸಿನ ಮೂಗಿನ ತುದಿಗೆ ಸರಿಯಾಗಿ ತಗುಲಿತು. "ಅಯ್ಯೋ! ಕೂಸು! ಹೋಯಿತು ಮೂಗು!" ಎಂದು ಪಾಪಚ್ಚಿ ಕೂಗಿದಳು. ಅಮ್ಮಾವರು, "ಯಾಕಮ್ಮ ಬಡುಕೊಳ್ಳುತ್ತೀಯೆ! ಅವರವರ ಪಾಡು ಅವರವರು ನೋಡಿಕೊಂಡರೆ, ಲೋಕ ಇನ್ನೂ ಎಷ್ಟೋ ವೇಗವಾಗಿ ಓಡುತ್ತಿತ್ತು," ಎಂದು ಗುಟುರು

ಹಾಕಿದರು. ಅದಕ್ಕೆ ಪಾಪಚ್ಚಿ, "ಅಯ್ಯೊ! ಅದು ಸರಿಹೋಗುವುದಿಲ್ಲ," ಎಂದು ಜಂಬವಾಗಿ ಮಾತು ತೆಗೆದಳು. "ಹಾಗೆ ಓಡಿದರೆ, ರಾತ್ರಿ ಹಗಲು ಗಂಟೆಗಂಟೆಗೂ ಗಿರ್ರನೆ ಬಂದುಬಿಡುತ್ತದೆ. ನೋಡಿ, ಭೂಮಿ ತನ್ನ ಅಕ್ಷದ ಮೇಲೆ, ಇಪ್ಪತ್ತುನಾಲ್ಕು ಗಂಟೆಗೊಂದಾವರ್ತಿ, ಯಾರು ಅಪ್ಪಣೆ ಕೊಡಲಿ, ಬಿಡಲಿ........" "ಕೊಡಲಿ ಅಂದಾಗ ಜ್ಞಾಪಕ ಬಂತು," ಎಂದರು ಅಮ್ಮಾವರು; "ಇವಳ ತಲೆ ಕಡಿದುಹಾಕು." ಪಾಪಚ್ಚಿ ಅಡಿಗೆ ಯವಳನ್ನು ನೋಡಿದಳು, ಅಮ್ಮಾವರ ಅಜ್ಞೆ ಅವಳ ಕಿವಿಗೆ ಬಿತ್ತೋ ಏನೋ, ಎಂದು. ಆದರೆ, ಅವಳು ಹುಳಿ ರುಚಿ ನೋಡುತ್ತಲೇ ಇದ್ದಳು. "ಇಪ್ಪತ್ತುನಾಲ್ಕು ಗಂಟೆಗೊಂದಾವರ್ತಿ ಅಂತ ನನಗೆ ಜ್ಞಾಪಕ........ ಅಥವಾ, ಹನ್ನೆರಡಕ್ಕೋ ಏನೋ, ಅಂತು........" "ಅಯ್ಯೊ! ಗಂಟೆ ಲೆಕ್ಕ ಹಾಳಾಗಲಿ; ನನಗೆ ಲೆಕ್ಕ ಅಂದರೆ ಎಕ್ಕದಕಾಯಿ!" ಎನ್ನುತ್ತ, ಅಮ್ಮಾವರು ಮತ್ತೆ, ಮಗುವಿನ ಅಳುವನ್ನು ನಿಲ್ಲಿಸಲು,

ನಿಂತರೆ ಹೊಡೆಯಿರಿ ಕೂತರೆ ಬಡಿಯಿರಿ
ಶೀತರೆ ಶೀನಲಿ, ಶಿಶುಪಾಲ!
ಬಿದ್ದರೆ ಬೀಳಲಿ ಮುದ್ದಿಸ ಬೇಡಿರಿ
ಶೀತವೆ ಇಲ್ಲದೆ ಶೀನುವುದೆ?
ಸದ್ದೇ ಇಲ್ಲದೆ ನಿದ್ದೆಯ ಮಾಡದ
ಥೂ! ಛೀ! ಮಕ್ಕಳಿಗೇಟೆ ಸರಿ!
ಭಂ ಭಂ ಭಂ, ಭಂ ಭಂ ಭಂ, ಭಂ ಭಂ ಭಂ,
ಭಂ ಭಂ ಭಂ ಭಂ ಭಂ ಭಂ, ಭಂ

ಎಂದು ಹಾಡನ್ನು ಹೇಳುತ್ತಾ ತಾಳಕ್ಕೆ ಸರಿಯಾಗಿ ಕೂಸಿನ ಬೆನ್ನಿನಮೇಲೆ ಬಲವಾಗಿ ಹೊಡೆಯುತ್ತಿದ್ದರು.

"ಭಂ ಭಂ ಭಂ—ಭಂ ಭಂ ಭಂ!
ಭಂ, ಭಂ, ಭಂ—ಭಂ, ಭಂ, ಭಂ,
ಭಂ ಭಂ ಭಂ, ಭಂ ಭಂ ಭಂ, ಭಂ!!"

ಎಂಬುದನ್ನು ಮಾತ್ರ ಪ್ರತಿಸಲವೂ ಅಮ್ಮಾವರೂ ಅಡಿಗೆಯವಳೂ—

ಕೂಸೂ--ಒಟ್ಟಿಗೆ ಹೇಳುತ್ತಿದ್ದರು. ಒಂದೊಂದು ಚರಣವೂ ಮುಗಿದ ಮೇಲೆ ಕೂಸನ್ನು ಮೇಲಕ್ಕೆಸೆದು, ಕೆಳಕ್ಕೆ ಬೀಳುವಾಗ ಅದನ್ನು ಹಿಡಿದುಕೊಳ್ಳುತ್ತಿದ್ದರು. ಅಂತು ಇಂತು, ಅದಕ್ಕೆ ಬಲು ಚಿತ್ರಹಿಂಸೆಯಾಗುತ್ತಿತ್ತು.

ಕೊನೆಗೆ ಅಮ್ಮಾವರು ಥಟಕ್ಕನೆದ್ದು, "ಕೋ, ನೀನೂ ಕೊಂಚ ಆಡಿಸು!" ಎಂದು ಹೇಳಿ ಕೂಸನ್ನು ಪಾಪಚ್ಚಿ ನಿಂತಿದ್ದ ಕಡೆ ಎಸೆದರು. ದೇವರ ದಯೆಯಿಂದ ಕೂಸು ನೆಲಕ್ಕೆ ಬೀಳುವುದರೊಳಗೇ ಪಾಪಚ್ಚಿ ಅದನ್ನು ಹಿಡಿದುಕೊಂಡಳು. "ನಾನು ಈಗ ಅರಮನೆಗೆ ಚಿತ್ತೈಸಬೇಕು ಚೆಂಡಾಟಕ್ಕೆ" ಎಂದು ಹೇಳಿ ಅಮ್ಮಾವರು ಠೀವಿಯಿಂದ ಒಳಗಿನ ಕೊಠಡಿಗೆ ಹೊರಟುಹೋದರು. ಅಡಿಗೆಯವಳು ಅವರ ಬೆನ್ನ ಹಿಂದೆ ಒಂದು ಚೊಂಬನ್ನೆಸೆದಳು

"ಇಂಥಾ ರಾಕ್ಷಸಿ ತಾಯಿ ಎಲ್ಲಾದರೂ ಉಂಟೆ? ಪಿಶಾಚಿಯ ಹಾಗೆ ಪೀಡಿಸುತ್ತಾಳೆ. ಅಯ್ಯೊ, ಪಾಪ! ಈಗಲೇ ಈ ಹಿಂಸೆಯಾದರೆ ಮುಂದೆ ಇದು ಬಾಳಿ ಬದುಕುವುದು ಹೇಗೆ?" ಎಂದು ಪಾಪಚ್ಚಿ ಕನಿಕರ ಪಟ್ಟಳು. "ಈ ಹಾಳು ಮನೆಯಲ್ಲಿ ನೀನಿರಬೇಡಪ್ಪ" ಎಂದು ಹೇಳಿ ಅದನ್ನು ಮನೆಯ ಹೊರಗೆ ತಂದಳು. ಆದರೆ, ಅದನ್ನು ಸರಿಯಾಗಿ ಎತ್ತಿಕೊಳ್ಳುವುದೇ ಕಷ್ಟವಾಗಿತ್ತು. ಕ್ಷಣಕ್ಷಣಕ್ಕೂ ಕೆಮ್ಮುವುದು, ಕಿರಿಚುವುದು, ಶೀನುವುದು, ಕೈಕಾಲು ಮಡಿಸುವುದು, ನೀಡುವುದು, ಹೀಗೆ ಬಹಳ ತೊಂದರೆಕೊಟ್ಟಿತು. ಮೊದಲು ಅಂದವಾಗಿ ಕಂಡ ಅದರ ಆಕಾರ ಬೆಳಕಿನಲ್ಲಿ ಅವಳಿಗೆ ಅಸಹ್ಯವಾಗಿ ಕಾಣಿಸಿತು. ಉದ್ದವಾದ ಮೂತಿ .... ಅಗಲವಾದ ಮೂಗು .... ದಪ್ಪ ಹೊಟ್ಟೆ....ಸಣ್ಣ ಕೈ .... ಸಣ್ಣ ಕಾಲು........ಪುಟ್ಟದೊಂದು ಬಾಲ ಬೇರೆ. ನೋಡುತ್ತಿದ್ದಾಗಲೇ ಅದು ನಿಜವಾದ ಒಂದು ಹಂದಿ ಮರಿಯಾಗಿಬಿಟ್ಟಿತು. ಪಾಪ! ಅವಳಿಗೆ ಬಹಳ ವ್ಯಸನವಾಯಿತು "ಎಂಥಾ ಮುದ್ದಾದ ಕೂಸು! ಇದಕ್ಕೆ ಈ ಗತಿಯಾಯಿತಲ್ಲಾ!" ಎಂದು ಮರುಗಿದಳು. "ಲಕ್ಷಣವಾದ ಮಗು, ಮನೆಗೆ ತೆಗೆದುಕೊಂಡು ಹೋಗಿ ಸಾಕಬಹುದು, ಆಡಿಸಬಹುದು"

ಎಂದು ಅದರ ಮೇಲೆ ಪ್ರೀತಿಯಿಟ್ಟರೆ, ನನ್ನ ಗ್ರಹಚಾರ, ಅದು ಹೀಗಾಗ ಬೇಕೆ?, ಎಂದು ಹೇಳುತ್ತ ಹಂದಿ ಮರಿಯನ್ನು ನಿಧಾನವಾಗಿ ನೆಲ ಕ್ಕಿಳಿಸಿದಳು. ಅದು ಸಂತೋಷದಿಂದ ಓಡಿಹೋಯಿತು. "ಮಗು ವಾಗಿದ್ದಿದ್ದರೆ ಅವಲಕ್ಷಣದ ಹುಡುಗನಾಗುತ್ತಿದ್ದ; ಆದರೆ, ಹಂದಿ ಅಂದ ಮೇಲೆ ಚಂದವೆ!" ಎಂದು ಪಾಪಚ್ಚಿ ಅದನ್ನೇ ನೋಡುತ್ತ ನಿಂತಳು.

ಪಾಪಚ್ಚಿಗೆ ಆದ ಆಶಾಭಂಗವನ್ನು ನೋಡಿ ನಗುತ್ತಾ, ಹಲ್ಲುಕಿರಿ ಯುತ್ತಾ, ಬಾಬಾಬುಡನ್ ಬೆಕ್ಕು ಅಲ್ಲೇ ಹತ್ತಿರದ ಒಂದು ಮರದ ಮೇಲೆ ಕುಳಿತಿತ್ತು. ಅದಕ್ಕೆ ನೀಳವಾದ ಉಗುರುಗಳು; ತುಟಿ ಮೀರಿದ ಹಲ್ಲಿನ ಸಾಲುಗಳು. ಆದರೂ, ಆ ಬೆಕ್ಕು ಸೌಮ್ಯಮೂರ್ತಿ; ಹಾಸ್ಯಪ್ರಿಯ. "ಬಾಬಾಬುಡನ್!" ಎಂದು ಪಾಪಚ್ಚಿ, ಮೆಲ್ಲಗೆ ಮಾತಾಡಿಸಿದಳು, ಬಾಬಾಬುಡನ್ ಎಂಬುದು ಅದರ ಹೆಸರೋ, ಅಡ್ಡಹೆಸರೋ, ಅಥವಾ, ಪಾಠಶಾಲೆಯಲ್ಲಿ ತುಂಟ ಬೆಕ್ಕುಗಳು ಕೊಟ್ಟ ಹಾಸ್ಯದ ಹೆಸರೋ, ಅವಳಿಗೆ ಏನೂ ತಿಳಿಯದು. ಆದರೆ, ಬೆಕ್ಕು ರೇಗಲಿಲ್ಲ. ಮತ್ತಷ್ಟು ವಿಶಾಲವಾಗಿ ಕಿರಿಯಿತು!, ಅಷ್ಟೆ. ಹತ್ತಿಪ್ಪತ್ತು ಹಲ್ಲುಗಳು ಹೊರಗೆ ಕಾಣಿಸಿತು. ಪಾಪಚ್ಚಿಗೆ ಕೊಂಚ ಸಮಾಧಾನವಾಯಿತು. "ಹುಲಿಯ ಜಾತಿಗೆ ಸೇರಿದವನೆಂಬ ಜಂಬವಿಲ್ಲ, ಇದಕ್ಕೆ" ಎಂದುಕೊಂಡಳು.

"ರೀ! ನಾನು ಯಾವ ದಾರಿಯಿಂದ ಮುಂದಕ್ಕೆ ಹೋಗಬೇಕು?" ಎಂದು ಕೇಳಿದಳು.

"ಅದಕ್ಕೆ ಉತ್ತರ ನೀವು ಎಲ್ಲಿಗೆ ಹೋಗಬೇಕು ಎಂಬುದನ್ನಾ ಶ್ರಯಿಸಿ ಹೇಳಬೇಕಾಗುತ್ತದೆ."

"ಇಂಥಾ ಕಡೆ ಹೋಗಬೇಕು, ಎಂದಿಲ್ಲ. ಎಲ್ಲಿಗಾದರೂ ಸರಿಯೆ! ಹೋದರೆ ಸಾಕು!"

"ಹಾಗಾದರೇನಂತೆ? ಸುಲಭ. ಎಲ್ಲ ದಾರಿಯೂ ಒಂದೆ. ಉದ್ದಕ್ಕೂ ನಡೆದರಾಯ್ತು. ಸೇರಿಯೇ ಸೇರುತ್ತೆ."

"ಅದು ಸರಿ! ನನ್ನ ಅವಸ್ಥೆ ನೋಡಿ ಹಾಗೆ ನಗಬೇಡಿ. ನನಗೆ ಬೇಗ ಅಳು ಬಂದುಬಿಡುತ್ತೆ. ಇಲ್ಲಿ ಹತ್ತಿರ ಯಾರ ಯಾರ ಮನೆಗಳಿವೆ, ಹೇಳಿ."

ಬೆಕ್ಕು ಒಂದು ಕೈಯನ್ನು ಎತ್ತಿ ತೋರಿಸುತ್ತಾ, "ಅಲ್ಲಿ ಒಂದು ಟೋಪಿಯವನ ಮನೆ ಇದೆ" ಎಂದು ಹೇಳಿ, ಇನ್ನೊಂದು ಕೈಯನ್ನು ಎತ್ತಿ, "ಈ ಕಡೆ ಒಂದು ಹಳಿಲು ಮರಿಯ ಮನೆಯಿದೆ. ಇವರಿಬ್ಬರ ಮನೆಗಳಲ್ಲಿ ಯಾವುದಕ್ಕಾದರೂ ನೀವು ಹೋಗಬಹುದು. ಇಬ್ಬರಿಗೂ ಬುದ್ಧಿ ನೆಟ್ಟಗಿಲ್ಲ" ಎಂದು ಹೇಳಿತು.

"ಛೆ! ಛೆ! ನಾನೆಲ್ಲಿಯೂ ಹೋಗುವುದೇ ಇಲ್ಲ. ನನಗೆ ಹುಚ್ಚರ ಸಹವಾಸವೇ ಬೇಕಿಲ್ಲ. ಬೇಕಿಲ್ಲ ಅಂದರೆ ಇಲ್ಲಿ ಬಿಡುವವರು ಯಾರು?"

"ಇಲ್ಲಿ ಎಲ್ಲರಿಗೂ ಹುಚ್ಚು ಹಿಡಿದಿದೆ. ನನಗೂ ಹುಚ್ಚು, ನಿಮಗೂ ಹುಚ್ಚು."

"ನನ್ನನ್ನು ಹುಚ್ಚಿ ಅಂತ ಕರೆದರೆ ನಾನು ಸುಮ್ಮನಿರುವುದಿಲ್ಲ."

"ಚೆನ್ನಾಯಿತು! ಹುಚ್ಚುಹಿಡಿಯದಿದ್ದರೆ, ಇಲ್ಲಿ ಯಾಕೆ ಬಂದಿರಿ?"

ಪಾಪಚ್ಚಿಗೆ ಈ ನ್ಯಾಯ ಸರಿಯೆಂದು ತೋರಲಿಲ್ಲ. ಆದರೂ, "ನನ್ನ ಮಾತು ಹಾಗಿರಲಿ! ಹುಚ್ಚು ಹಿಡಿದವರಿಗೆ ತಾವು ಹುಚ್ಚರೆಂದು ಗೊತ್ತೇ ಆಗುವುದಿಲ್ಲವಂತೆ. ನಿಮ್ಮ ಬುದ್ಧಿ ಸೊಟ್ಟಗಾಗಿದೆ ಅಂತ ನೀವು ನೀವೇ ಹೇಗೆ ತಿಳಿದುಕೊಂಡಿರಿ? ಎಂದಳು."

"ಹೇಳುತ್ತೇನೆ, ಕೇಳಿ! ಹುಚ್ಚುಹಿಡಿಯದ ನಾಯಿ ಸಂತೋಷ ತೋರಿಸುವುದಕ್ಕೆ, ಏನು ಮಾಡುತ್ತದೆ?"

"ಬಾಲ ಅಲ್ಲಾಡಿಸುತ್ತದೆ."


"ಕೋಪ ಬಂದಾಗ?"

"ಗುರ್ರೆನ್ನುತ್ತದೆ."

“ಆದರೆ, ನಾನು ಹಾಗಲ್ಲ. ಕೋಪ ಬಂದಾಗ ಬಾಲ ಅಲ್ಲಾಡಿಸುತ್ತೇನೆ. ತೃಪ್ತಿಯಾದಾಗ, ಗುರ್ರೆನ್ನುತ್ತೇನೆ. ಆದ್ದರಿಂದ, ನನಗೆ ಹುಚ್ಚು ಹಿಡಿದಿದೆ. ನಾನು ಹುಚ್ಚ, ತಿಳಿಯಿತೆ?”

ಪಾಪಚ್ಚಿಗೆ ಇದು ಹೇಗೆಂದು ಅರ್ಥವಾಗಲಿಲ್ಲ. “ನಮ್ಮ ಮನೆಯ ಪಿಲ್ಲಿ ಗುರ್ರೆನ್ನುವುದೇ ಇಲ್ಲ. ಅವಳು ಅನ್ನುವುದು ಇನ್ನೂ ಇಂಪಾಗಿ ಇರುತ್ತದೆ” ಎಂದಳು. ಆದರೆ, ಪಿಲ್ಲಿ ಯಾರೆಂದು ಬಾಬಾಬುಡನ್ ವಿಚಾರಿಸಲೇ ಇಲ್ಲ. ಅಷ್ಟು ಹೊಟ್ಟೆಕಿಚ್ಚು ಅದಕ್ಕೆ. ಕೊಂಚಹೊತ್ತು ಹಲ್ಲು ತೋರಿಸಿ, “ನೀವು ಅರಮನೆಗೆ ಚೆಂಡಾಟಕ್ಕೆ ಹೋಗುವುದಿಲ್ಲವೋ?” ಎಂದು ಬಾಬಾಬುಡನ್ ವಿಚಾರಿಸಿತು. ನನಗೆ ಅರಮನೆಯಿಂದ ಪತ್ರ ಬಂದಿಲ್ಲ; ನೋಡಬೇಕೆಂಬ ಆಸೆಯಿದೆ. ನೀವು ಕರೆದುಕೊಂಡು ಹೋಗುತ್ತೀರಾ?” ಎಂದು ಕೇಳಿದಳು. ಉತ್ತರವೇ ಇಲ್ಲ. “ಅಲ್ಲಿ ಕಾಣಿಸಿಕೊಳ್ಳುತ್ತೇನೆ” ಎಂದು ಹೇಳಿ, ಬೆಕ್ಕು ಇದ್ದಕ್ಕಿದ್ದ ಹಾಗೆ ಮಾಯವಾಯಿತು!

ಅದು ಮಾಯವಾದ ರೀತಿಯನ್ನೇ ನೋಡುತ್ತಾ ಪಾಪಚ್ಚಿ ಆ ಮರದ ಕೆಳಗೆ ತಲೆ ಎತ್ತಿಕೊಂಡು ನಿಂತಿದ್ದಳು. ಹಾಗೆ ನೋಡುತ್ತಿರುವಾಗಲೇ,



ಬೆಕ್ಕು ಮತ್ತೆ ಕಾಣಿಸಿಕೊಂಡಿತು. “ಅಂದ ಹಾಗೆ, ಕೂಸಿನ ಗತಿ ಏನಾಯಿತು? ಕೇಳುವುದಕ್ಕೆ ಮರೆತೇ ಬಿಟ್ಟೆ” ಎಂದು ವಿಚಾರಿಸಿತು.

“ಅಯ್ಯೋ! ಪಾಪ! ಅದು ಹಂದಿಮರಿಯಾಗಿ ಹಾಳಾಗಿ ಹೋಯಿತು. ಅನ್ಯಾಯ” ಎಂದು ಪಾಪಚ್ಚಿ ಉತ್ತರಕೊಟ್ಟಳು. “ನನಗೆ ಆಗಲೇ ಗೊತ್ತಿತ್ತು” ಎಂದು ಹೇಳಿ ಬೆಕ್ಕು ಪುನಃ ಕಣ್ಮರೆಯಾಯಿತು.

ಇನ್ನೊಂದುಸಾರಿ ಬೆಕ್ಕು ದರ್ಶನ ಕೊಡಬಹುದೆಂದು ಶಂಕಿಸಿ ಪಾಪಚ್ಚಿ ತುಂಬ ಹೊತ್ತು ಕಾದಳು. ಆಮೇಲೆ ಅಳಿಲುಮರಿಯ ಮನೆಯ ಕಡೆ ಹೊರಟಳು. ಆಗ ಅವಳೆದುರಿಗೆ ಇನ್ನೊಂದು ಮರದ ಕೊಂಬೆಯಲ್ಲಿ ಬೆಕ್ಕು ಮತ್ತೆ ಕಾಣಿಸಿಕೊಂಡು, “ಏನು ಹೇಳಿದಿರಿ? ಎಂಥದ್ದಾಯಿತು ಮಗು? ಹಂದಿಯೋ, ನಂದಿಯೋ?” ಎಂದು ಕೇಳಿತು. “ಹಂದಿ!.... ನೋಡಿ! ದಯವಿಟ್ಟು ಇದ್ದರೆ ಇರಿ, ಹೋದರೆ ಹೋಗಿ! ಹೋಗಿ–ಬಂದು ತೊಂದರೆಕೊಡಬೇಡಿ” ಎಂದು ಕೇಳಿಕೊಂಡಳು. “ಹಾಗೆಯೇ ಆಗಲಿ!” ಎಂದು ಹೇಳುತ್ತಾ ಬೆಕ್ಕು ಮಾಯವಾಯಿತು.

ಆದರೆ, ಈಸಲ ಕೊಂಚ ಕೊಂಚವಾಗಿ ಅಂಚೆಲ್ಲ ಮಾಸಿಹೋಗಿ ಮಾಯವಾಗುತ್ತಾ ಬಂತು. ಬಾಲದ ತುದಿ ಮೊದಲು ಹೋಯಿತು. ಅಲ್ಲಿಂದ ಕ್ರಮ ಕ್ರಮವಾಗಿ ದೇಹವು ಅಳಿಸಿಹೋಗುತ್ತಾ ಬಂತು........ ಹಿಂಗಾಲು, ಹೊಟ್ಟೆ, ಮುಂಗಾಲು, ಕಿವಿ, ಕಣ್ಣು, ಬಾಯಿ, ಹಲ್ಲು, ಕೊನೆಗೆ....ಕಿರಿತ! ಬೆಕ್ಕೆಲ್ಲವೂ ಹೋದ ಮೇಲೂ ಅದು ಹಲ್ಲುಕಿರಿಯುತ್ತಿತ್ತಲ್ಲ, ಆ ಕಿರಿತ ಮಾತ್ರ ನಾಲ್ಕೈದು ನಿಮಿಷಗಳತನಕ ಹಾಗೆಯೇ ಬೆಳಗೆ ಉದ್ದಕೆ ಉಳಿದಿತ್ತು. ಕೊನೆಗೆ, ಅದೂ ಕಾಣಿಸಲಿಲ್ಲ. “ಕಿರಿತವಿಲ್ಲದ ಬೆಕ್ಕು ನೋಡಿದೇನೆ; ಬೆಕ್ಕಿಲ್ಲದ ಕಿರಿತ........ ಇದೇ ಮೊದಲು” ಎಂದು ಪಾಪಚ್ಚಿ ಚಕಿತಳಾದಳು.



---

## ಅಳಿಲ ಸೇವೆ

ಅಳಿಲಿನ ಮನೆಯ ಬಾಗಿಲಿನಲ್ಲಿ ಆಳುಕಾಳು ಯಾರೂ ಇರಲಿಲ್ಲ. ಪಾಪಚ್ಚಿ ನೆಟ್ಟನೆ ಮನೆಯನ್ನು ಪ್ರವೇಶಿಸಿದಳು. ಅಲ್ಲಿ ಅಳಿಲೂ ಟೋಪಿಯವನೂ ತಿಂಡಿ ತಿನ್ನುತ್ತಾ ಕುಳಿತಿದ್ದರು. ಇಬ್ಬರನ್ನೂ ಒಟ್ಟಿಗೇ ಕಂಡದ್ದ

ರಿಂದ ಪಾಪಚ್ಚಿಯ ಸಂತೋಷ ಇಮ್ಮಡಿಯಾಯಿತು. ಆದರೆ, ಇಬ್ಬರು ಹುಚ್ಚರೂ ಒಟ್ಟಿಗೆ ಸೇರಿದ್ದಾರೆ. ಏನೇನು ಅನಾಹುತವಾಗುತ್ತೋ ಎಂದು ಅವಳಿಗೆ ಕೊಂಚ ದಿಗಿಲು!

ವಿಶಾಲವಾದ ಒಂದು ಕೋಣೆ. ಅದರ ಮಧ್ಯೆ ಒಂದು ದೊಡ್ಡ ಗುಂಡು ಮೇಜು. ಅದರ ಮೇಲೆ ರೊಟ್ಟಿ, ಬೆಣ್ಣೆ, ಉಪ್ಪಿನಕಾಯಿ, ಕಾಫಿ ಇತ್ಯಾದಿ. ಅಲ್ಲಿದ್ದದ್ದು ಒಂದೇ ಕುರ್ಚಿ. ಅದರಲ್ಲಿ ಟೋಪಿಯವನು ಆಗಲೇ ಕುಳಿತುಬಿಟ್ಟಿದ್ದನು. ತಕ್ಕಮಟ್ಟಿಗೆ ಎತ್ತರವಾದ ಆಳು. "ಕಡಿ ಪಯಿಲ್ವಾನ್" ಎಂದು ಬೇಕಾದರೆ ಕರೆಯಬಹುದು. ಒಣಗಿದ ದೇಹ; ಚರ್ಮ, ಮೂಳೆ ಎರಡು ಮಾತ್ರ ಕಾಣುತ್ತಿತ್ತು. ಸದಾ ರೋಗದಲ್ಲಿ ನರಳುತ್ತಿದ್ದನೋ, ಏನೋ? ತಲೆಯ ಮೇಲೆ ಹಳದಿಯ ರುಮಾಲು. ಅದರ ಮೇಲೆ, ಒಂದರ ಮೇಲೊಂದಾಗಿ ಜೋಡಿಸಿದ್ದ ಬಗೆ ಬಗೆಯ ಟೋಪಿಗಳು....ಖದ್ದರ್, ಮಖಮಲ್, ನೋಜೆಲ್, ಅಮಾನುಳ್ಳಾ, ಪೂನಾ, ಫೆಜ್, ಜಿನ್ನಾ, ಇತ್ಯಾದಿ. ತನ್ನ ಅಂಗಡಿಯನ್ನೇ ಅವನು ತಲೆಯ ಮೇಲೆ ಹೊತ್ತುಕೊಂಡು ತಿರುಗುತ್ತಿದ್ದನು. ಮಲಗಿಕೊಳ್ಳುವಾಗ ಈ ಗೋಪುರವನ್ನು ಹೇಗೆ ಕೆಳಕ್ಕಿಳಿಸುತ್ತಿದ್ದನೊ ದೇವರೇ ಬಲ್ಲ. ಆಳಿಲಿಗೆ ಕೂರಲು ಕುರ್ಚಿಯಿರಲಿಲ್ಲ. ಆದ್ದರಿಂದ, ಅದು ಒಂದು ಎಮ್ಮೆ ಕರುವಿನ ಮೇಲೆ ಕುಳಿತುಕೊಂಡಿತ್ತು. ಎಮ್ಮೆ ಕರು ತೂಕಡಿಸುತ್ತಾ ಮೆಲುಕು ಹಾಕುತ್ತಿತ್ತು. ಕುಳಿತುಕೊಳ್ಳುವುದಕ್ಕೆ ಇನ್ನೊಂದು ಕುರ್ಚಿಯಿಲ್ಲದಿದ್ದರೂ, ಪಾಪಚ್ಚಿಯನ್ನು ಕಂಡಕೂಡಲೆ ಇಬ್ಬರೂ, "ಬನ್ನಿ, ದಯಮಾಡಿಸಿ, ಕೂಡಿ" ಎಂದು ಕೇಳಿಕೊಂಡರು. ಉಪಚಾರದ ಮಾತುಗಳು ಒಂದರ ಮೇಲೊಂದು ಬಂದುವು. ಬರಿಯ ಒಣ ಉಪಚಾರ! ಟೋಪಿಯವನು, "ತೆಗೆದುಕೊಳ್ಳಿ" ಎಂದು ಹೇಳಿ ಬಹಳ ವಿನಯದಿಂದ ಒಂದು ತಿಂಡಿ ತಟ್ಟೆಯನ್ನು ಅವಳು ನಿಂತಿದ್ದ ಕಡೆಗೆ ತಳ್ಳುವ ಹಾಗೆ ನಟಿಸಿದನು. ತಟ್ಟೆಯಿಲ್ಲ, ತಿಂಡಿಯಿಲ್ಲ, ತೀರ್ಥವಿಲ್ಲ! ಬರಿಯ ನಟನೆ! ಆಳಿಲು ಒಂದು ಬಟ್ಟಲು ಕಾಫಿಯನ್ನು ಅವಳ ಮುಂದಿಡುವ ಹಾಗೆ ಮಾಡಿತು. ಪಾಪಚ್ಚಿಯೂ ಅದನ್ನು ಎತ್ತಿ ಕುಡಿಯುವ ಹಾಗೆ ನಟಿಸಿದಳು. ಇನ್ನೇನು ಮಾಡುವುದು? ವಿಧಿಯಿಲ್ಲ. ಹುಚ್ಚರ ಸಹವಾಸ. "ಸಕ್ಕರೆ ಸಾಕೆ?"

ಎಂಬ ಟೋಪಿಯುವನ ಉಪಚಾರ ಬೇರೆ. "ಏನು! ತುಂಬ ಬಿಸಿಯೇನು? ಕಚ್ಚಿಕೊಂಡು ಕುಡಿಯಬಹುದು. ಅದು ಬೆಳ್ಳಿ ಬಟ್ಟಲು" ಎಂಬ ಅಳಿಲಿನ ಉಪಚಾರ. ಪಾಪಚ್ಚಿಗೆ ನಗು ಬಂತು. ಅದರೂ ತಡೆದುಕೊಂಡಳು. "ಏನೋ ಅಳಿಲ ಸೇವೆ" ಎಂದು ಅಳಿಲು ಹೇಳಿತು. "ಏನೋ ಶಕ್ತ್ಯಾನುಸಾರ ನಾನೂ ಟೋಪಿ ಹಾಕಿದೇನೆ" ಎಂದು ಟೋಪಿಯುವನೂ ಹೇಳಿದನು.

ಕೊಂಚ ಹೊತ್ತು ಎಲ್ಲರೂ ಸುಮ್ಮನಿದ್ದರು. ಪಾಪಚ್ಚಿ ಮೇಜಿನ ಹತ್ತಿರ ನಿಂತೇ ಇದ್ದಳು. ಆಗ ಟೋಪಿಯುವನು, "'ಕಾಗೆಮರಿಗೆ ಕಾಡಿಗೆ ಹಚ್ಚಿದರೆ ಕಾಡಿಗೆಲ್ಲಾ ಕಾಣುತ್ತೆ' ಅಂದರೆ ಏನು ಅಂತ ಹೇಳಿ" ಎಂದನು. ಒಗಟಿಗಳೆಂದರೆ ಪಾಪಚ್ಚಿಗೆ ಬಹಳ ಉತ್ಸಾಹ. "ಬೇಕಾದರೆ ನಾನು ಹೇಳುತ್ತೇನೆ" ಎಂದು ಅವಳು ಕುಣಿಕುಣಿಯುತ್ತಾ ಹೇಳಿದಳು. ಇದನ್ನು ಕಂಡು ಟೋಪಿಯುವನಿಗೆ ಕೋಪ ಬಂತು. "ಬೇ-ಕಾ-ದ-ರೆ ಹೇ-ಳು-ತ್ತೇ-ನೆ! ಯಾರಿಗೆ ಬೇಕಾದರೆ? ನಿಮಗೋ, ನಮಗೋ?" ಎಂದು ಕೇಳಿದನು. "ಸರಿ! ಪ್ರಾರಂಭವಾಯಿತು" ಎಂದು ಪಾಪಚ್ಚಿ ಅಂದುಕೊಂಡಳು. "ನಿಮಗಾದರೂ ಸರಿಯೆ, ನನಗಾದರೂ ಸರಿಯೆ, ಒಗಟಿಗೆ ಉತ್ತರ ಮುಖ್ಯ! ಅಷ್ಟೇ ತಾನೆ!" ಎಂದು ಹೇಳಿದಳು. "ಹಾಗಲ್ಲ! 'ನಿಮಗೆ ಬೇಕಾದರೆ' ಎಂದರೆ ಒಂದರ್ಥ; 'ನಮಗೆ ಬೇಕಾದರೆ' ಎಂದರೆ ಇನ್ನೊಂದರ್ಥ" ಎಂದು ಟೋಪಿಯುವನು ವಾದಿಸಿದನು. 'ನಿದ್ದೆ ಮಾಡುವಾಗ ಉಸಿರಾಡುತ್ತೇನೆ ಎನ್ನುವುದಕ್ಕೂ ಉಸಿರಾಡುವಾಗ ನಿದ್ದೆ ಮಾಡುತ್ತೇನೆ ಎನ್ನುವುದಕ್ಕೂ ವ್ಯತ್ಯಾಸವೇ ಇಲ್ಲವೆ?' ಎಂದು ಅಳಿಲು ಕೇಳಿತು! ಆಗ ಎಮ್ಮೆ ಕರು, "ಹೌದು. ಎಂ. ಎ. ಕರು ಎಂದರೆ ಒಂದರ್ಥ; ಕರು ಎಂ. ಎ. ಎಂದರೆ ಇನ್ನೊಂದರ್ಥ" ಎಂದು ಮಧ್ಯೆ ಬಾಯಿಹಾಕಿತು. ತನ್ನ ಒಂದು ಕುರ್ಚಿಯಾಗಿದ್ದ ಪ್ರಾಣಿಗೆ ಅತಿಥಿ ಯಜಮಾನರ ಮಾತಿನ ನಡುವೆ ಬಾಯಿಹಾಕುವಷ್ಟು ದುರಹಂಕಾರ ಬಂದದ್ದನ್ನು ನೋಡಿ ಅಳಿಲಿಗೆ ತುಂಬಾ ರೇಗಿತು. ಅದರ ಮೂಗಿನ ತುದಿಯನ್ನು ಕಚ್ಚಿ ಅದಕ್ಕೆ ಬುದ್ಧಿ ಕಲಿಸಿತು. "ಪಾಪ! ಮೂಕಪ್ರಾಣಿ! ಎಷ್ಟು ನೋವಾಯಿತೋ?" ಎಂದು ಹೇಳಿ ಟೋಪಿಯುವನು ಗಳಗಳನೆ ಕಂಬನಿ ಸುರಿಸಿ ಬೇಗ ಬೇಗ ಕಣ್ಣೊರಸಿಕೊಂಡನು.

ಇವೆಲ್ಲಕ್ಕೂ ಹೆಚ್ಚು ಗಮನಕೊಡದೆ ಪಾಪಚ್ಚಿ ಆ ಒಗಟಿಗೆ ಉತ್ತರವೇನೆಂದು ಹುಡುಕಾಡುತ್ತಿದ್ದಳು. "ಕಾಗೆಯ ಕಣ್ಣಿಗೆ ಕಾಡಿಗೆ! ಕಾಡಿಗೆಲ್ಲಾ ಕಾಣುತ್ತೆ! ಏನಿರಬಹುದು? ಹುಣ್ಣಿಮೆ ಚಂದ್ರನೇ? ಕೋಳಿಯ ಕೂಗೇ? ಕೋಗಿಲೆಯೇ? ಕುದುರೆ ಗಾಡಿಯೇ? ಸೀಮೆಸುಣ್ಣವೇ? ಬೆಣ್ಣೆಯೇ? ಕನ್ನಡಕವೇ?........." ಅಷ್ಟರಲ್ಲೇ ಟೋಪಿಯವನು, "ಇವತ್ತು ಯಾವ ವಾರ", ಎಂದು ಕೇಳಿದನು. ಯಾರೂ ಉತ್ತರ ಹೇಳಲಿಲ್ಲ. ಕಡೆಗೆ ಅವನೇ ಜೇಬಿಂದ ಒಂದು ದಪ್ಪ ಗಡಿಯಾರವನ್ನು ತೆಗೆದು ಕಿವಿಗೆ ಹಿಡಿದು ನೋಡಿ ಅದು ನಡೆಯುತ್ತಿಲ್ಲವೆಂದು ಗೊತ್ತಾದಾಗ, ಅದನ್ನು ಒಂದು ಬಟ್ಟಲು ನೀರೊಳಗೆ ಅದ್ದಿ ಸರಿಪಡಿಸಿದನು! ಆ ಗಡಿಯಾರ ವಾರವನ್ನು ಮಾತ್ರ ತೋರಿಸುತ್ತಿತ್ತು. ಗಂಟೆ, ನಿಮಿಷ ಇವುಗಳೊಂದನ್ನೂ ತೋರಿಸುವಂತೆ ತಯಾರಾಗಿರಲಿಲ್ಲ. "ಇಂಥ ಗಡಿಯಾರ ಸಾಕೆ? ನಿಮಗೆಲ್ಲರಿಗೂ ಹೊತ್ತು ಗೊತ್ತಾಗಬೇಡವೆ?" ಎಂದು ಪಾಪಚ್ಚಿ ಕೇಳಿದಳು. "ನಮ್ಮ ಗಡಿಯಾರದಲ್ಲಿ ತಪ್ಪು ಹುಡುಕುತ್ತೀರಲ್ಲಾ! ನಿಮ್ಮದಕ್ಕಿಂತ ಎಷ್ಟೋವಾಸಿ ಇದು .... ನಿಮಗೆ ವಾರ ವರ್ಷ ಯಾವುದೂ ಗೊತ್ತಾಗಬೇಡವೇನು? ನಮಗೆ ಯಾವಾಗಲೂ ಮಧ್ಯಾಹ್ನ ಮೂರು ಗಂಟೆ ಸಮಯವೇ! ನಮಗೆ ಯಾವಾಗಲೂ ತಿಂಡಿತಿನ್ನುವ ಹೊತ್ತು. ಆದ್ದರಿಂದ, ವಾರ ಒಂದು ಗೊತ್ತಾದರೆ ಸಾಕಾಗಿದೆ." ಎಂದು ಅಳಿಲು ಹೇಳಿತು. "ಯಾವಾಗಲೂ ತಿಂಡಿ ತಿನ್ನುತ್ತಿರುವುದಕ್ಕೆ ಹಸಿವಾಗಬೇಡವೇ?" ಎಂದು ಪಾಪಚ್ಚಿ ವಿಚಾರಿಸಿದಳು. "ಏನು, ತಿಂಡಿ ತಿನ್ನುವುದಕ್ಕೆ ಹೊಟ್ಟೆಯಿದ್ದರೆ ಸಾಲದೆ? ಹಸಿವೂ ಬೇಕೆ? ಇದೀಗ ಹೊಸವಿಷಯ", ಎಂದು ಟೋಪಿಯವನು ಆಶ್ಚರ್ಯದಿಂದ ಹೇಳಿದನು. "ಅದಿರಲಿ! ಒಗಟಿಗೆ ಉತ್ತರ ಕಂಡುಹಿಡಿದಿರಾ?" ಎಂದು ಅಳಿಲು ಪಾಪಚ್ಚಿಯನ್ನು ಕೇಳಿತು. "ನಾನು ಸೋತೆ. ನನಗೆ ಯಾವುದೂ ತೋರಲಿಲ್ಲ. ಇನ್ನೊಂದಕ್ಕೆ ನಾನು ಹೇಳುತ್ತೇನೆ. ಇದರ ಉತ್ತರ ನೀವೇ ಹೇಳಿ" ಎಂದು ಪಾಪಚ್ಚಿ ತಾಳ್ಮೆಯಿಂದ ಕೇಳಿಕೊಂಡಳು. ಆದರೆ, "ನನಗೂ ಗೊತ್ತಿಲ್ಲ" ಎಂದು ಅಳಿಲೂ "ನನಗೆ ಮೊದಲೇ ತಿಳಿಯದು" ಎಂದು ಟೋಪಿಯವನೂ ಹೇಳಿಬಿಟ್ಟರು. ಸುಮ್ಮನೆ ಅರ್ಥವಿಲ್ಲದ ಒಗಟೆ ಹೇಳಿ ತನ್ನನ್ನು

ಹೀಗೆ ಹಾಸ್ಯಮಾಡಿದ್ದಕ್ಕಾಗಿ ಪಾಪಚ್ಚಿಗೆ ತುಂಬ ಕೋಪಬಂತು. ಅವರಿಬ್ಬರನ್ನೂ ಚೆನ್ನಾಗಿ ಬೈದುಬಿಡೋಣವೆನ್ನಿಸಿತು.

ಆದರೆ, ಅಷ್ಟು ಹೊತ್ತಿಗೆ ಸರಿಯಾಗಿ ಆ ಬಡಕಲು ಎಮ್ಮೆ ಕರುವಿಗೆ ಹೊರೆ ಹೊತ್ತು ನಿಂತು ನಿಂತು ಕಾಲು ಸೋತುಹೋಗಿ ಅದು ಥಟಕ್ಕನೆ ಮಲಗಿಬಿಟ್ಟಿತು. ಆಕಸ್ಮಾತ್ ಆದ ಈ ಅನಾಹುತದಿಂದ ಅಳಿಲಿಗೆ ಬಹಳ ಗಾಬರಿಯಾಯಿತು. ಅದು ಛಂಗನೆ ನೆಗೆದು ಟೋಪಿ ಗೋಪುರದ ಮೇಲೆ ಹಾರಿತು! ಪಾಪಚ್ಚಿಗೆ ನಗುಬಂತು. ಟೋಪಿಯುವನೂ ತನ್ನ ಎರಡು ಪಕ್ಕೆಗಳನ್ನೂ ಹಿಡಿದುಕೊಂಡು ನಗುವುದಕ್ಕೆ ಮೊದಲು ಮಾಡಿದನು. ಬರಬರುತ್ತಾ ಅವನ ನಗುಹೆಚ್ಚಿತು. ತಲೆಯ ಮೇಲಿದ್ದ ಅವನ ಟೋಪಿ ಅಂಗಡಿ ತಾರಾಡುತ್ತಾ, ತಾರಾಡುತ್ತಾ ಈಗಲೋ, ಆಗಲೋ, ಯಾರ ಮೇಲೋ ಬೀಳುವಹಾಗಿತ್ತು. ಸುಮಾರು ಅರ್ಧ ಗಂಟೆಯಾದಮೇಲೆ ಅವನ ನಗು ಹತೋಟಿಗೆ ಬಂತು. ಗೋಪುರ ಹಿಂದಿನಂತೆ ನೆಟ್ಟಗೆ ನಿಂತುಕೊಂಡಿತು.

ಹುಚ್ಚರಿಬ್ಬರೂ ಪಾಪಚ್ಚಿಯ ಕಡೆ ತಿರುಗಿ, "ಅಮ್ಮಾ! ಒಂದು ಕಥೆ ಹೇಳಿ" ಎಂದು ಬೇಡಿದರು. ಒಗಟಿಯಿಂದಾದ ಅವಮಾನಕ್ಕೆ ಅವಳು ಇನ್ನೂ ಮುನಿಸಿಕೊಂಡಿದ್ದಳು, ಕೋಪ ಇಳಿದಿರಲಿಲ್ಲ. ಆದ್ದರಿಂದ, ಪಾಪಚ್ಚಿ 'ಒಲ್ಲೆ' ಎಂದಳು. "ಹಾಗಾದರೆ, ಲೋ, ಕುಂಭಕರ್ಣ, ನೀನು ಹೇಳೋ! ನಿನ್ನ ತಾತ ಹೇಳುತ್ತಿದ್ದ ಕಥೆಗಳಲ್ಲೊಂದೂ ಜ್ಞಾಪಕವಿಲ್ಲವೇನೋ?" ಎಂದು ಕೇಳಿ ಟೋಪಿಯುವನು ಎಮ್ಮೆ ಕರುವನ್ನು ಎಬ್ಬಿಸಿ ಹಿಡಿದು ನಿಲ್ಲಿಸಿದನು. "ಮತ್ತೊಮ್ಮೆ ಝೋಂಪು ಹತ್ತುವುದರೊಳಗೆ ಗಟ್ಟಿಯಾಗಿ ಹೇಳು" ಎಂದನು.

ಕರು—"ಒಂದಾನೊಂದು ಊರಿನಲ್ಲಿ ಮೂರು ಜನ ಅಕ್ಕ ತಂಗಿಯರಿದ್ದರು: ಅವರ ಹೆಸರು ಶಿಂಗಿ, ರಂಗಿ, ಲಿಂಗಿ. ಅವರು ಒಂದು ಬಾವಿಯ ತಳದಲ್ಲಿ ಮನೆಮಾಡಿಕೊಂಡು ಸುಖವಾಗಿದ್ದರು."

ಪಾಪಚ್ಚಿ—"ಅಲ್ಲಿ ಅವರಿಗೆ ಆಹಾರ?"

ಕರು—"ಅಲ್ಲಿ ಅವರು ಮೂರು ಹೊತ್ತೂ ತುಪ್ಪ ಕುಡಿದು ಜೀವಿಸುತ್ತಿದ್ದರು"

ಪಾಪಚ್ಚಿ—"ಅದು ಹೇಗೆ? ಬರೀ ತುಪ್ಪ ಕುಡಿದು ಹೊಟ್ಟೆ ತುಂಬಿಸಿಕೊಂಡರೆ ಖಾಯಿಲೆ ಬರುತ್ತದೆ, ಅಷ್ಟೆ."

ಕರು—"ಹೌದು! ಅವರೆಲ್ಲರಿಗೂ ಯಾವಾಗಲೂ ತಡೆಯಲಾರದ ಹೊಟ್ಟೆನೋವು!"

ಪಾಪಚ್ಚಿ—"ಅದು ಸರಿ ತುಪ್ಪ ಕುಡಿಯಬೇಕಾಗಿದ್ದರೆ, ಅವರು ಬಾವಿಯೊಳಗೆ ಏನು ಮಾಡುತ್ತಿದ್ದರು?"

ಆಗ, ಟೋಪಿಯವನು ಪಾಪಚ್ಚಿಯ ಮೂತಿ ಹತ್ತಿರ ಒಂದು ಬಟ್ಟಲನ್ನು ಹಿಡಿದು, 'ಕೊಂಚ ಹಲುವಾ ತಿನ್ನಿರಿ' ಅಂದ. "ನಾನು ತಿಂದಿರುವುದೇ ಸೊನ್ನೆ! ಇನ್ನು ಹೆಚ್ಚು ತಿನ್ನಲಾರೆ!" ಎಂದಳು. ಪಾಪಚ್ಚಿ ಚುಚ್ಚುಮಾತಿನಲ್ಲಿ. "ಸೊನ್ನೆಗಿಂತ ಕಡಮೆ ತಿನ್ನಲಾಗುವುದಿಲ್ಲ, ಅಷ್ಟೆ! ಸೊನ್ನೆಗಿಂತ ಹೆಚ್ಚು ತಿನ್ನಬಹುದು' ಎಂದ, ಟೋಪಿಯವನು. ಪಾಪಚ್ಚಿ ಬಟ್ಟಲಿಗೆ ಕೈ ಹಾಕಬೇಕಾಯಿತು!

ಆಗ, ಕರು—"ಓ! ನಾನು ಹೇಳುವುದಕ್ಕೆ ಮರೆತಿದ್ದೆ. ಶಿಂಗಿ, ಡಿಂಗಿ, ಲಿಂಗಿ ಇದ್ದದ್ದು ತುಪ್ಪದ ಬಾವಿ!"

ಪಾಪಚ್ಚಿ—"ಎಲ್ಲ ಸುಳ್ಳು! ಅಂಥಾದ್ದೊಂದು ಬಾವಿಯೇ ಇಲ್ಲ ಭೂವಿವರಣೆಯಲ್ಲಿ."

ಪಾಪಚ್ಚಿಗೆ ಇದೊಂದು ಕೆಟ್ಟ ಸ್ವಭಾವ ನೋಡಿ: ಅಡ್ಡ ಪ್ರಶ್ನೆ ಹಾಕುವುದು! ಯಾರಾದರೂ ಕಥೆ ಹೇಳುತ್ತಿದ್ದರೆ ನಿಧಾನವಾಗಿ ಕೇಳ ಬೇಕು, ಸಲ ಸಲಕ್ಕೂ ಕೊಕ್ಕೆಹಾಕಬಾರದು, ಅಡ್ಡಮಾತನ್ನಾಡಬಾರದು. 'ಹುಂ' ಗುಟ್ಟುತ್ತಾ ಮುಂದು ಮುಂದಕ್ಕೆ ಹೋಗಬೇಕು. ಆಗ ಕಥೆಯ ಸ್ವಾರಸ್ಯ ಕೆಡುವುದಿಲ್ಲ. ಕೇಳುವವರಿಗೂ ಹೇಳುವವರಿಗೂ ಉತ್ಸಾಹ ವಿರುತ್ತದೆ. ಇತರರಿಗೆ ನಮ್ಮ ಪ್ರಶ್ನೆಗಳು ಅನೇಕ ವೇಳೆ ರುಚಿಸುವುದಿಲ್ಲ. ಪ್ರಶ್ನೆ ಕೇಳಿದರೆ ಅವರು ಮೇಲೆ ಬೀಳುತ್ತಾರೆ

ಅಳಿಲ ಮನೆಯಲ್ಲಿಯೂ ಆ ದಿನ ಹಾಗೆಯೇ ಆಯಿತು. ಟೋಪಿ ಯುವನಿಗೆ ತುಂಬಾ ರೇಗಿತು. ಪಾಪಚ್ಚಿಯನ್ನು ಬಹಳವಾಗಿ ಬೈದನು. "ಇಲ್ಲ, ಇಲ್ಲ, ಅಂಥ ಬಾವಿ ಏಕೆ ಸಮುದ್ರವೇ ಇರಬಹುದು, ಕ್ಷಮಿಸಿ, ಇನ್ನು ಮುಂದೆ ನಾನು ತೆಪ್ಪಗಿರುತ್ತೇನೆ" ಎಂದು ಪಾಪಚ್ಚಿ ಅನೇಕಸಲ ಹೇಳಿ ಕೈಮುಗಿದಳು.

ಕರು—"ಒಂದೇ? ಸಾವಿರ ಬಾವಿ ಇವೆ! ಸಪ್ತಸಮುದ್ರಗಳಿವೆ; ಹಾಲಿನದು ಮೊಸರಿನದು ಇವೆ, ತುಪ್ಪದ್ದೂ ಇವೆ, ತಿಳಿಯಿತೋ?"

ಪಾಪಚ್ಚಿ—"ಇವೆ ಮಹರಾಯರುಗಳಿರಾ! ಒಪ್ಪಿದೆ. ಕಥೆಯನ್ನು ಮುಂದುವರಿಸಿ."

ಕರು—"ರಂಗಿ, ಶಿಂಗಿ, ಲಿಂಗಿ ಎಂಬ ಮೂರು ಜನ ಹೆಂಗಸರೂ ಅಲ್ಲಿ ಯಾವಾಗಲೂ ಸೇದುತ್ತಾಯಿದ್ದರು."

ಪಾಪಚ್ಚಿ (ತನ್ನ ಪ್ರತಿಜ್ಞೆಯನ್ನು ಮರೆತು)—"ಏನನ್ನು ಸೇದುತ್ತಿದ್ದರು?"

ಕರು—"ತುಪ್ಪವನ್ನ."

ಪಾಪಚ್ಚಿ (ಅನುಮಾನಿಸುತ್ತ)—"ಅದು ಹೇಗೆ?"

ಕರು—"ಅಷ್ಟು ಗೊತ್ತಿಲ್ಲವೆ? ನೀರಿನ ಬಾವಿಯಿಂದ ನಾವು ಏನನ್ನು ಸೇದುತ್ತೇವೆ?"

ಪಾಪಚ್ಚಿ...."ನೀರನ್ನ."

ಕರು—"ಸರಿ! ಆ ಬಾವಿಯೊಳಗೆ ಇದ್ದದ್ದು ತುಪ್ಪ. ಆದ್ದರಿಂದ ಅದನ್ನು ಸೇದುತ್ತಿದ್ದರು."

ಪಾಪಚ್ಚಿ—"ಆದರೆ, ಅವರು ಬಾವಿಯ ಒಳಗೆ ಇದ್ದರಲ್ಲಾ?"

ಕರು—"ಹೌದು! ಒಳಗಿನಿಂದ ತಾನೇ ಸೇದಬೇಕು!"

ಪಾಪಚ್ಚಿ (ಅಸಮಾಧಾನದಿಂದ)--"ನನಗೆ ಅದು ಅರ್ಥವಾಗಲಿಲ್ಲ."

ಪಾಪಚ್ಚಿಯ ನಯವಿಲ್ಲದ ನಡತೆಯಿಂದ ಮತ್ತೆ ಅಳಿಲಿಗೂ ಟೋಪಿ ಯುವನಿಗೂ ಕೋಪಬಂತು. "ಅರ್ಥವಾಗದಿದ್ದರೆ ಬಿಡಿ! ಆದರಿಂದ,

ಅನರ್ಥವೇನೂ ಇಲ್ಲ" ಎಂದು ಹೇಳಿ ಟೋಪಿಯುವನು ನಕ್ಕನು "ಆದರೆ ......." ಎಂದಳು, ಪಾಪಚ್ಚಿ. "ಆದರೆ, ಗೀದರೆ, ಅಳಿಲುಮರಿ ಲಂಕೆಗೆ ಸೇತುವೆ ಕಟ್ಟಿದರೆ......." ಎಂದ ಟೋಪಿಯುವನು.

ಪಾಪಚ್ಚಿಗೆ ಬಹಳ ಅವಮಾನವಾಯಿತು. ಮುನಿಸಿಕೊಂಡು ಹೊರಟೇಹೋದಳು. ಅವಳ ಕೋಪಕ್ಕೆ ಯಾರೂ ಲಕ್ಷ್ಯಕೊಡಲಿಲ್ಲ. ಯಾರೂ ಹಿಂದಕ್ಕೆ ಕರೆಯಲೇ ಇಲ್ಲ. "ಥೂ, ಈ ಹುಚ್ಚರ ಮನೆಗೆ ಬರಲೇ ಬಾರದಾಗಿತ್ತು" ಎಂದು ಹೇಳಿಕೊಂಡಳು.

ಆಗ, ಅವಳೆದುರಿಗಿದ್ದ ಒಂದು ಮರದ ಬುಡದಲ್ಲಿ ಚಚ್ಚೌಕವಾದ ಬಾಗಿಲಿದ್ದಂತೆ ಕಂಡಿತು. "ಇದೇನಿದು ಸೋಜಿಗ?" ಎನ್ನುತ್ತ, ಅಲ್ಲಿಗೆ ಹೋಗಿ ಅದನ್ನು ತಳ್ಳಿದಳು. ಅದು ತೆರೆಯಿತು. ಧೈರ್ಯವಾಗಿ ಅದರೊಳಕ್ಕೆ ನುಗ್ಗಿದಳು. ಹತ್ತು ಮಾರು ಹೋದಮೇಲೆ ರಸ್ತೆ ಬಲಕ್ಕೆ ತಿರುಗಿತು.

ಅಲ್ಲಿ, ಹಿಂದಿನ ಗಾಜಿನ ಗುಂಡುಮೇಜು. ಚಿನ್ನದ ಬೀಗದಕೈ. ತೋಟದ ಬಾಗಿಲು!

"ಆಗಿನ ಹಾಗೆ ಈಗ ಅಳಬೇಕಾಗಿಲ್ಲ" ಎಂದು ಹೇಳುತ್ತಾ ಅಣಬೆಯ ಚೂರುಗಳನ್ನು ಮೆಲ್ಲುತ್ತ ತನ್ನ ಎತ್ತರವನ್ನು ಕಡಮೆ ಮಾಡಿಕೊಂಡು, ಬಾಗಿಲ ಸಂದಿನಿಂದಲೇ ತೂರಿಕೊಂಡು, ಮತ್ತೆ ಮೊಳದಷ್ಟು ಎತ್ತರಕ್ಕೆ ತನ್ನ ದೇಹವನ್ನು ತಂದುಕೊಂಡಳು.

ಅಂತು, ಇಂತು, ಕೊನೆಗೆ, ಆ ಉದ್ಯಾನವನ್ನು ಪ್ರವೇಶಿಸಿದಳು. ಅಲ್ಲಿ ತಂಪಾದ ಗಾಳಿ. ಇಂಪಾಗಿ ಹಾಡುವ ಬಣ್ಣದ ಹಕ್ಕಿಗಳು!

---

## ಇಸ್ಪೀಟು ರಾಣಿ

ಬಣ್ಣಿಸಲಾರದ ಬಣ್ಣಗಳು; ಹುಚ್ಚು ಹುಚ್ಚಾಗಿ ಬೆಳೆದ ಹುಲ್ಲು; ಹಣ್ಣಿನ ಭಾರವನ್ನು ಹೊರಲಾರದೆ "ತೆಗೆದುಕೊಳ್ಳಿ, ನನ್ನ ತಲೆ ಹೊರೆ

ಕೊಂಚ ಇಳಿಸಿಕೊಡಿ'' ಎಂದು ಅಂಗಲಾಚಿ ಬೇಡುವ ಮರಗಳು. ಆದುವರೆಗೂ ಅನುಭವಿಸಿದ ಕಷ್ಟಗಳೆಲ್ಲವನ್ನೂ ಪಾಪಚ್ಚಿ ಬೇಗನೆ ಮರೆತು ಬಿಟ್ಟಳು.

ಅವಳು ಆ ತೋಟದಲ್ಲಿ ಕುಣಿಯುತ್ತಾ ಹಾಡುತ್ತಾ ಅತ್ತಿತ್ತ ಓಡಾಡುತ್ತಿದ್ದಳು........ಅಲ್ಲಿ, ಎತ್ತರವಾಗಿ ಬೆಳೆದಿದ್ದ ಒಂದು ಬಿಳಿಯ ಗುಲಾಬಿ ಗಿಡ. ಅದರ ತುಂಬ ಅಗಲವಾದ ಹೂವುಗಳ ಗೊಂಚಲುಗಳು. ಆ ಗಿಡದ ಶುಶ್ರೂಷೆಯನ್ನು ಮೂರು ಆಳುಗಳು ಅತಿ ಜಾಗರೂಕತೆಯಿಂದ ಮಾಡುತ್ತಿದ್ದರು. ಪ್ರತಿಯೊಂದು ಹೂವಿನ ಎಸಳಿಗೂ ಅವರು ಕೆಂಪು ಬಣ್ಣವನ್ನು ಬಳಿಯುತ್ತಿದ್ದರು! ಪಾಪಚ್ಚಿ ಆ ಗಿಡದ ಹತ್ತಿರ ಹೋಗಿ ಜವಾನರ ವಿಚಿತ್ರ ಕೆಲಸವನ್ನು ನೋಡುತ್ತಾ ನಿಂತಿದ್ದಳು. ಆಗ ಒಬ್ಬ ಆಳು—''ಲೋ, ಐದು! ಎಲೆಯ ಮೇಲೆ ಬೀಳಿಸಬೇಡ ಕೆಂಪು ಬಣ್ಣವನ್ನ........ಜೋಕೆ.''

ಐದು—'' ನಾನೇನು ಮಾಡಲಣ್ಣಾ! ಹಾಳಾದವನು ಏಳು, ನನ್ನ ಕೈ ತಟ್ಟಿದ. ಒಂದಿಷ್ಟು ಚೆಲ್ಲಿಬಿಟ್ಟಿತು!''

ಏಳು (ಕೋಪದಿಂದ)—'' ಲೋ! ನಿನ್ನ ಹಣೇಬರಹವೇ ಅಷ್ಟು! ಇನ್ನೊಬ್ಬನ ಮೇಲೆ ಚಾಡಿ ಹೇಳಿಕೊಂಡು ನಿನ್ನ ಹೊಟ್ಟೆ ತುಂಬಿಸಿ ಕೊಳ್ಳೋದು!''

ಐದು—'' ಮುಚ್ಚೋ! ಕಂಡಿದೇನೆ. ಬಗುಳಬೇಡ. ಆಯಿತು. ನಿನ್ನ ಗತಿ ಪೂರೈಸಿತು ಇವತ್ತು. ಯಮರಾಯನ ಪಟ್ಟಣಕ್ಕೆ ಚೀಟಿ ಕೊಟ್ಟು ಕಳುಹಿಸುತ್ತಾರೆ ............ ಕೇಳಿಲ್ಲವೋ, ನೀನಿನ್ನೂ? ನಿನ್ನೆ ಸಾಯಂಕಾಲ ........ ಸನ್ನಿಧಾನದಿಂದ ಅಪ್ಪಣೆಯಾಗಿದೆ........ಅಮಾಸೆ ದಿನ ನಿನ್ನ ತಲೆ ಕತ್ತರಿಸಬೇಕು ಅಂತ........''

ಮೊದಲು ಮಾತನಾಡಿದವನು—'' ಅದು ಯಾಕಣ್ಣಾ?''

ಏಳು—'' ಲೋ, ಎರಡು! ನಿನಗ್ಯಾಕೆ ಅದೆಲ್ಲಾ? ನಿನ್ನ ತಲೆ ಹೋಗುವ ಸಂದರ್ಭ ಏನೂ ಇಲ್ಲವಲ್ಲಾ. ನಾನು ಸತ್ತರೆ ನಿನಗೆ ವಡೆ ಪಾಯಸ ಕೂಡ ಸಿಕ್ಕುವುದಿಲ್ಲ. ಸುಮ್ಮನೆ ನಿನ್ನ ಪಾಡಿಗೆ ಬಣ್ಣ ಬಳಿ.''

ಐದು—"ನಾನು ಹೇಳುತ್ತೇನಣ್ಣಾ, ಯಾಕೆ ಅಂತ. ಎಲ್ಲರಿಗೂ ಗೊತ್ತಾಗಿದೆ, ಆಗಲೇ. ನಿನ್ನ ಕಿವಿಗೆ ಇನ್ನೂ ಮುಟ್ಟಿಲ್ಲ, ಅಷ್ಟೆ. ನಿನ್ನೆ ಅರಮನೆ ಅಡಿಗೆಯವನು ಏಳನ್ನು ಕರೆದು ಕೊಂಚ ಕರಿಬೇವಿನಸೊಪ್ಪು ತೆಗೆದುಕೊಂಡು ಬಾ ಎಂದು ಹೇಳಿದ. ಅದಕ್ಕಿವನು, ಎಲ್ಲೋ! ಜ್ಞಾನದಲ್ಲಿ ನೆಟ್ಟಗೆ ಹೋಗಿ ಬೇವಿನಸೊಪ್ಪು ಕಿತ್ತುಕೊಂಡು ಬಂದು ಕೊಟ್ಟ. ಆ ದಡ್ಡ ಅದನ್ನ ಸಾರಿಗೆ ಹಾಕಿಯೇ ಬಿಟ್ಟ.

ಏಳು (ತನ್ನ ಪೆಚ್ಚುತನ ಬಯಲಾದದ್ದರಲ್ಲಿ ಕೋಪಗೊಂಡು)—"ಯಾಕೋ ಹೇಳಿದೆ? ಚಾಡಿಕೋರ! ನಿನ್ನ ಹಲ್ಲುದುರಿಸಿ........ನಿನ್ನ ಚರ್ಮ ಸುಲಿದು........ನಿನ್ನ ಮೂಗು ಕೊಯ್ದು...."

ಅಷ್ಟರಲ್ಲಿ ಅವರು ಪಾಪಚ್ಚಿಯನ್ನು ಕಂಡರು. ತಮ್ಮ ಜಗಳವನ್ನು ಥಟಕ್ಕನೆ ನಿಲ್ಲಿಸಿ ಸುಮ್ಮನಾದರು. ಎಲ್ಲರೂ ಅವಳಿಗೆ ಕೈಮುಗಿದರು. ಅಡ್ಡಬಿದ್ದರು. "ತಪ್ಪಾಯಿತು, ಬುದ್ಧಿ! ನಿಮ್ಮ ಪಾದ! ತಪ್ಪಾಯಿತು ಬುದ್ಧಿ" ಎಂದು ಹೇಳಿ ತಲೆ ತಗ್ಗಿಸಿ ಸೊಂಟ ಬಗ್ಗಿಸಿದರು.

"ಹೂವುಗಳಿಗೆ ಯಾಕೆ ಬಣ್ಣ ಹಾಕುತ್ತಿದ್ದೀರಿ?" ಎಂದು ಪಾಪಚ್ಚಿ ಕೇಳಿದಳು. ಐದು, ಏಳು—ಇವರಿಬ್ಬರೂ ಹೊಡೆದಾಟಕ್ಕೆ ಅಣಿಯಾಗಿದ್ದದ್ದರಿಂದ, ಅವರ ಆವೇಶವು ಇನ್ನೂ ತಗ್ಗಿರಲಿಲ್ಲ. ಆದುದರಿಂದ ಎರಡು, "ನೋಡಿ, ಬುದ್ಧಿ! ಈ ಜಾಗದಲ್ಲಿ ಒಂದು ಕೆಂಪು ಗುಲಾಬಿಯನ್ನು ನೆಡ ಬೇಕಾಯಿತು, ಬುದ್ಧಿ! ಅದು ತಪ್ಪಿ ಬಿಳಿಯದನ್ನು ಹಾಕಿಬಿಟ್ಟೆವು, ಬುದ್ಧಿ! ರಾಣಿಯವರ ಸನ್ನಿಧಾನಕ್ಕೆ ಇದು ತಿಳಿದರೆ ನಮ್ಮನ್ನು ಪ್ರಾಣ ಸಹಿತ ಉಳಿಸುವುದಿಲ್ಲ, ಬುದ್ಧಿ. ಇನ್ನೇನು, ಇನ್ನೊಂದರಗಳಿಗೆಯಲ್ಲಿ ಇಲ್ಲಿಗೇ ಚಿತ್ತೈಸುತ್ತಾರೆ, ಬುದ್ಧಿ. ಆದಕ್ಕೇ, ಆದಷ್ಟು ಬೇಗ ಕೆಂಪು ಬಣ್ಣ ಹಾಕುತ್ತಿದೇವೆ, ಬುದ್ಧಿ!" ಎಂದು ಹೇಳಿದನು. ಆಗ, ಐದು "ಸವಾರಿ! ಸವಾರಿ!" ಎಂದು ಕಿರಿಚಿದನು. ಮೂವರೂ ನೆಲದ ಮೇಲೆ ಬಿದ್ದು ದಂಡ ಪ್ರಣಾಮ ಮಾಡಿದರು. ಹಾಗೆಯೇ ಬಿದ್ದಿದ್ದರು.

ಕೊಂಬು ಕಹಳೆಗಳ ಸದ್ದಾಯಿತು. ಜನರ ಕೋಲಾಹಲ ಕೇಳಿಸಿತು. ಪಾಪಚ್ಚಿ ಆ ಕಡೆ ತಿರುಗಿನೋಡಿದಳು. ಹತ್ತುಜನ ಗಿರಲು

ವಿಾಸೆಯ ಸಿಪಾಯಿಗಳು ಸಾಲಿಗೆ ಇಬ್ಬಿಬ್ಬರಂತೆ ಮೊದಲು ಬಂದರು. ಅವರೆಲ್ಲರೂ ಕಳಾವರಿನ ಆಕಾರದಲ್ಲಿ ಕತ್ತರಿಸಿದ ಕಪ್ಪು ರಟ್ಟಿನ ತುಂಡು ಗಳನ್ನು ಕೋಲುಗಳಿಗೆ ಸಿಕ್ಕಿಸಿ ಎತ್ತಿಹಿಡಿದು ಭರ್ಜಿಗಳಂತೆ ತರುತ್ತಿದ್ದರು. ಸಿಪಾಯಿಗಳಿಗೂ ಕೂಡ ಅಗಲವೇ ಹೆಚ್ಚು ; ದಪ್ಪ ಕಡಮೆ ; ಮೇಲಿನ ಮೂಲೆಗಳಲ್ಲಿ ಕೈಗಳು ; ಕೆಳಗೆ ಕಾಲುಗಳು ! ಅನಂತರ, ಇಪ್ಪತ್ತು ಜನ ಹೊಗಳುಭಟ್ಟರು, ನಾಲ್ವರು ನಾಲ್ವರಾಗಿ ಐದು ಸಾಲು. ಅವರ ಹಿಂದೆಯೇ, ಆಸ್ಥಾನದ ಅಧಿಕಾರಿಗಳು, ಉದ್ದವಾದ ಬಿಳಿಯ ಅಂಗಿ, ನೀಲಿ ರುಮಾಲು, ಸೊಂಟಕ್ಕೆ ಕೆಂಪು ಪಟ್ಟಿ. ರುಮಾಲಿನ ಮೇಲೂ ಅಂಗಿಯ ಮೇಲೂ ಡೈಮಂಡಿನ ಆಕಾರದಲ್ಲಿ ಕೆಂಪು ಮುದ್ರೆಗಳು. ಆಮೇಲೆ ಬಂದವರು ಹತ್ತು ಜನ ಅಂಗರಕ್ಷಕರು. ಇವರೂ ಸಿಪಾಯಿ ಗಳಂತೆಯೇ ರಟ್ಟಿನ ತುಂಡುಗಳನ್ನು ಝಳಪಿಸುತ್ತಾ ಬಂದರು ; ಆದರೆ, ಕೆಂಪು ಬಣ್ಣದ ರಟ್ಟು, ಆರ್ಟೀನ್ ಆಕಾರ! ಅವರ ಹಿಂದೆ ವಾದ್ಯ ದವರು. ಒಬ್ಬ ವಿದೂಷಕ! ಅನಂತರ, ಅರಸುಮಕ್ಕಳು. ಒಂದು ಸಾಲಿಗೆ ಇಬ್ಬಿಬ್ಬರಂತೆ, ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಕುಣಿ ಕುಣಿಯುತ್ತಾ ನಗು ನಗುತ್ತಾ ಬರುತ್ತಿದ್ದರು. ಅವರಿಗೆ, ಹೊಳೆಯುವ ಕಣ್ಣುಗಳು. ಕನ್ನಡಿಯಂತೆ ಕೆನ್ನೆಗಳು ; ಕೆಂದುಟಿಗಳು. ಮುದ್ದಾದ ಮುದ್ದುಮಕ್ಕಳು. ಮೈಮೇಲೆ ಥಳ ಥಳಿಸುವ ಒಡವೆ ವಸ್ತ್ರಗಳು. ಅವರ ಅಂಗಿಗಳ ಮೇಲೂ ರುಮಾಲುಗಳ ಮೇಲೂ ಅಲ್ಲಲ್ಲಿ ಇಸ್ಪೀಟಿನ ಆಕಾರ ದಲ್ಲಿ ಕಪ್ಪುಬಣ್ಣದ ಮುದ್ರೆಗಳು. ಅವರ ಹಿಂದೆಯೇ, ಅರಮನೆಗೆ ಅತಿಥಿ ಗಳಾಗಿ ದಯಮಾಡಿಸಿದ್ದ ನೆರೆಹೊರೆ ಸಂಸ್ಥಾನಗಳ ರಾಜಾ ರಾಣಿಯರು, ಮಂತ್ರಿ ಪ್ರಧಾನರು, ದಂಡ ನಾಯಕರು ; ಕೆಲವು ಸಾಮಂತರಾಜರು, ಅವರ ಪತ್ನಿಯರು, ಪಾಳಯಗಾರರು .... ಅವರ ನಡುವೆ ಎಲ್ಲರೊಂದಿಗೂ ಬಹಳ ವಿನಯದಿಂದ ಮಾತನಾಡುತ್ತಾ ಬಿಳಿಯ ಮೊಲವೂ ಬರುತ್ತಿತ್ತು. ಅನಂತರ ಕೊಂಚ ಹಿಂದೆ, ಒಬ್ಬನೇ.... ...ಇಸ್ಪೀಟು ಗುಲಾಮನ ಉಡಿಗೆ ತೊಡಿಗೆಗಳನ್ನು ಧರಿಸಿದ್ದ ಪ್ರಧಾನಮಂತ್ರಿ ! ಆಮೇಲೆ, ತಮ್ಮ ಕರುಣಾ ಕಟಾಕ್ಷವನ್ನು ಅತ್ತಿತ್ತ ಬೀರುತ್ತಾ, ಪ್ರಜೆಗಳ ಪುರೋಭಿವೃದ್ಧಿಗಾಗಿ ಮಾಡ ಬೇಕಾದ ಕೆಲಸಗಳನ್ನು ಕುರಿತು ತಮ್ಮೊಳಗೆ ತಾವೇ ಮಾತನಾಡಿ ಕೊಳ್ಳುತ್ತಾ ಬರುತ್ತಿದ್ದ ಇಸ್ಪೀಟು ರಾಜಾ, ಪಕ್ಕದಲ್ಲೇ, ಇಸ್ಪೀಟು ರಾಣಿ !!

ಇತರರ ಹಾಗೆ ತಾನೂ ಕೆಳಮುಖವಾಗಿ ನೆಲದಮೇಲೆ ಮಲಗಿಕೊಳ್ಳ ಬೇಕೇನೋ ಎಂದು ಪಾಪಚ್ಚಿಗೆ ಶಂಕೆಯಾಯಿತು. ಆದರೆ, ರಾಜನೂ ರಾಣಿಯೂ ಇಷ್ಟು ವೈಭವದಿಂದ ವಿಜಯಮಾಡುತ್ತಿರುವಾಗ ಎಲ್ಲರೂ ತಲೆಯೆತ್ತದೆ ದಾರಿಯುದ್ದಕ್ಕೂ ನೆಲಕಚ್ಚಿ ಮಲಗಿಬಿಟ್ಟರೆ ಮೆರವಣಿಗೆ ಯಿಂದ ತಾನೆ ಏನು ಪ್ರಯೋಜನ ಎಂದು ಯೋಚಿಸಿ, ಅಂತಹ ನಡವಳಿಕೆ ಎಲ್ಲರಿಗೂ ಅನ್ವಯಿಸತಕ್ಕದ್ದಲ್ಲವೆಂದು ತೀರ್ಮಾನಿಸಿ ಅಲ್ಲಿಯೇ ನಿಂತು ಕೊಂಡಿದ್ದಳು.

ಸವಾರಿ ಹತ್ತಿರಕ್ಕೆ ಬಂದಾಗ ರಾಣಿಯವರ ದೃಷ್ಟಿ ಪಾಪಚ್ಚಿಯ ಮೇಲೆ ಬಿತ್ತು. ಅವಳೆದುರಿಗೆ ರಾಜನೂ ರಾಣಿಯೂ ನಿಂತುಕೊಂಡರು. ರಾಣಿಯವರು ಕೊಂಚ ಹೊತ್ತು ಅವಳನ್ನು ದುರು ದುರನೆ ನೋಡು ತ್ತಿದ್ದರು. ಕೊನೆಗೆ ಇಸ್ಪೀಟು ಮಂತ್ರಿಯನ್ನು ಕರೆತರಿಸಿ, "ಇದು ಯಾರು?" ಎಂದು ಕೇಳಿದರು. ಅವನು—ಪಾಪ, ಏನೂ ತಿಳಿಯದು—ಕಣ್ ಕಣ್ ಬಿಟ್ಟ; ಕೊಂಚ ಕೆಮ್ಮಿ, ತಲೆ ಕೆರೆದು, ಕೊನೆಗೆ, ಸುಮ್ಮನಾದನು. "ಕತ್ತೆ" ಎಂದು ರಾಣಿಯವರು ಅವನನ್ನು ಆಶೀರ್ವಾದ ಮಾಡಿದರು. ಅನಂತರ ಪಾಪಚ್ಚಿಯನ್ನು ಕುರಿತು, "ನಿನ್ನ ಹೆಸರೇನು, ಮಗೂ" ಎಂದು ಕೇಳಿದಳು. ಪಾಪಚ್ಚಿಗೆ ಮೊದಮೊದಲು ರಾಜನನ್ನೂ, ರಾಣಿಯನ್ನೂ, ಪರಿವಾರವನ್ನೂ ಕಂಡಾಗ ಕೊಂಚ ದಿಗಿಲಾಗಿತ್ತು. ಆದರೆ, ಅವಳು ಹಾಗೆಲ್ಲಾ ಹೆದರುವ ಹುಡುಗಿಯಲ್ಲ. "ಅಣ್ಣನ ಬೀರುವಿನಲ್ಲಿದ್ದ ಇಸ್ಪೀಟು ಕಟ್ಟಿನ ಗೊಂಬೆಗಳಹಾಗಿವೆ. ಇವಕ್ಕೆ ನಾನು ಏಕೆ ಹೆದರಬೇಕು?" ಎಂದು ಹೇಳಿ ಮನಸ್ಸಿಗೆ ಧೈರ್ಯ ತಂದುಕೊಂಡು, "ಪಟ್ಟದರಸಿ! ನನ್ನ ಹುಟ್ಟು ಹೆಸರು ಪಾರ್ವತಮ್ಮ; ಇಟ್ಟ ಹೆಸರು, ಪಾಪಚ್ಚಿ" ಎಂದಳು. "ಸಂತೋಷ! ಇವರು ಯಾರು ಇಲ್ಲಿ ಮಲಗಿರುವವರು?" ಎಂದು ರಾಣಿಯವರು ಅಲ್ಲಿ ಬಿದ್ದಿದ್ದ ಜವಾನರನ್ನು ತೋರಿಸುತ್ತ ಕೇಳಿದರು. "ನಾನು ಏಕೆ ಹೇಳಲಿ" ಎಂದು ಪಾಪಚ್ಚಿ ಸುಮ್ಮನಿದ್ದಳು. ಆದರೆ, ಒಂದು ವಿಚಿತ್ರ. ಅಲ್ಲಿ ಮಲಗಿದ್ದ ಜವಾನರ ಬೆನ್ನಿಗೂ, ಅಲ್ಲಿದ್ದ ಇತರ ರೆಲ್ಲರ ಬೆನ್ನಿಗೂ, ಅಂಗಿಯ ಬಣ್ಣದಲ್ಲಾಗಲಿ, ಅಂಚು ಗೆರೆ, ಮುದ್ರೆ ಇವು ಗಳಲ್ಲಾಗಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಎಲ್ಲರ ಬೆನ್ನಿಗೂ ಒಂದೇ

ಬಗೆಯ ಬಟ್ಟೆಯು ಒಂದೇ ತೆರನ ಹೊಲಿಗೆಯ ಅಂಗಿ! ಇಸ್ಪೀಟು ಕಟ್ಟಿನಲ್ಲಿರುವ ಹಾಗೆಯೇ! ಹಾಗೆಯೇ ಬಿದ್ದುಕೊಂಡಿದ್ದರೆ ಅವರು ಜವಾನರೋ, ಅರಸಿಯರೋ, ಅತಿಥಿಗಳೋ, ಸಿಪಾಯಿಗಳೋ, ಪುರೋಹಿತರೋ, ಅಧಿಕಾರಿಗಳೋ,—ಯಾವುದೂ ಹೇಳಲಾಗುತ್ತಿರಲಿಲ್ಲ. "ಇವರು ಯಾರು?" ಎಂದು ರಾಣಿ ಪಾಪಚ್ಚಿಯನ್ನೇ ಇನ್ನೊಂದುಸಾರಿ ಗದರಿಸಿದರು. "ನನಗೇನು ಗೊತ್ತು?" ಎಂದು ಅವಳು ಉತ್ತರ ಹೇಳಿಬಿಟ್ಟಳು. ರಾಣಿ ಹೆಬ್ಬುಲಿಯ ಹಾಗೆ ರೇಗಿದಳು. "ಕತ್ತರಿಸು ಇವಳ ತಲೆಯನ್ನ!" ಎಂದು ಒಬ್ಬ ಭಟನಿಗೆ ಆಜ್ಞಾಪಿಸಿದಳು. ಆದರೇನು, ಪಾಪಚ್ಚಿ ಕೊಂಚವೂ ಹೆದರಲಿಲ್ಲ. "ಹುಚ್ಚರು! ನಿಮಗೆ ಹುಚ್ಚು!" ಎಂದು ಧೈರ್ಯವಾಗಿ ರಾಣಿಯ ಮುಖಮುರಿಯುವ ಹಾಗೆ ಮಾತನಾಡಿದಳು. ರಾಣಿಗೆ ಬಹಳ ಅವಮಾನವಾಯಿತು. ಆದರೆ, ರಾಜನು, ಅವಳ ಕೈಯನ್ನು ಹಿಡಿದೆಳೆದು, "ಪ್ರಿಯೆ! ಬೇಡ. ಬಿಡು. ಪಾಪ! ಏನೂ ತಿಳಿಯದ ಕೂಸು" ಎಂದನು. ಭಟನು ಪಾಪಚ್ಚಿಯನ್ನು ಪ್ರಾಣಸಹಿತ ಬಿಟ್ಟನು. ರಾಣಿಯ ಮುಖ ಕೆಂಚಗಾಯಿತು.

ಅನಂತರ ರಾಣಿ ಮಂತ್ರಿಯನ್ನು ಬಳಿಗೆ ಕರೆದು "ಕತ್ತೆ! ಇವರನ್ನು ಮಗುಚು!" ಎಂದು ಅಪ್ಪಣೆಮಾಡಿದಳು. ಬಿದ್ದಿದ್ದವರ ಪಕ್ಕಕ್ಕೆ ಮೆಲ್ಲ ಮೆಲ್ಲನೆ ಹೋಗಿ, ಅವನು ಕಾಲಿಂದ ಒಬ್ಬೊಬ್ಬರನ್ನಾಗಿ ಮಗುಚಿ ಬೆನ್ನ ಮೇಲೆ ಮಲಗಿಸಿದನು. ಅವರು ಕೇವಲ ಜವಾನರೆಂದು ತಿಳಿದ ಕೂಡಲೇ, "ಎದ್ದು ನಿಂತುಕೊಳ್ಳಿರೋ, ಹೇಸರು ಕತ್ತೆಗಳಾ!" ಎಂದು ಮಂತ್ರಿ ಆರ್ಭಟಿಸಿದನು. ಮೂವರೂ ಎದ್ದು ನಿಂತು, ನಡು ಕಟ್ಟಿ, ಸುತ್ತ ಕೈಮುಗಿದರು. ಸ್ವಲ್ಪ ಹೊತ್ತಿನ ತನಕ ಕೈಮುಗಿಯುತ್ತಲೇ ಇದ್ದರು. ರಾಣಿಯವರು, "ಇಲ್ಲಿ ಏನು ಮಾಡುತ್ತಿದ್ದಿರಿ?" ಎಂದು ಅವರನ್ನು ಕೇಳಿದರು. ಆಗ, ಎರಡು ಬಗ್ಗಿ ನಿಂತು, ಬಹಳ ನಮ್ರತೆಯಿಂದ, "ಮಹಾಸ್ವಾಮಿ!........ನಾವು........ಇಲ್ಲಿ........ಕೊಂಚ........" ಎಂದು ಪ್ರಾರಂಭಿಸಿದನು. "ಓಹೋ! ತಿಳಿಯಿತು. ತಿಳಿಯಿತು. ಇವರ ತಲೆ ಕತ್ತರಿಸಿರೋ" ಎಂದು ಆಜ್ಞೆಮಾಡಿ, ರಾಣಿಯವರೂ ರಾಜನೂ ಮುಂದಕ್ಕೆ ಹೊರಟರು.

ಪಾಪ! ಆ ಜವಾನರನ್ನು ಹಿಡಿದು ಹಿಂಡಲು ಮೂವರು ಸಿಪಾಯಿಗಳು ಹಿಂದೆ ನಿಂತರು. ಪ್ರಾಣಭಯದಿಂದ ಅವರು ಹೇಗೋ ತಪ್ಪಿಸಿಕೊಂಡು ಪಾಪಚ್ಚಿ ನಿಂತಲ್ಲಿಗೆ ಓಡಿಬಂದು, "ನಮ್ಮ ಜೀವ ಉಳಿಸಿಕೊಡಿ. ತಾಯಿ! ನಿಮ್ಮ ಹೆಸರು ಹೇಳಿಕೊಂಡು ಎಲ್ಲಾದರೂ ಅಂಬಲಿ ಕುಡಿದು ಕಾಲ ತಳ್ಳುತ್ತೇವೆ" ಎಂದು ಕಾಲಿಗೆರಗಿದರು. ಪಾಪಚ್ಚಿ ಅವರನ್ನು ಹತ್ತಿರದಲ್ಲಿದ್ದ ಒಂದು ಹಳ್ಳದೊಳಗೆ ಇರಿಸಿ ಮರೆಸಿದಳು ಸಿಪಾಯಿಗಳು ಕೊಂಚ ಹೊತ್ತು ಹುಡುಕಿ, ಅವರನ್ನು ಕಾಣದೆ, ನಿರಾಶರಾಗಿ, ಹಣೆ ಹೊಡೆದುಕೊಳ್ಳುತ್ತ ಹೊರಟುಹೋದರು. ರಾಣಿಯವರು, "ಆಯಿತೆ?" ಎಂದುಕೇಳಲು, "ಬಿಟ್ಟೇವೆ!" ಎಂದುತ್ತರ ಕೊಟ್ಟರು. ರಾಣಿಗೆ ತುಂಬ ಆನಂದವಾಯಿತು. "ತುಂಡು ತುಂಡುಮಾಡಿ ಹೂತುಬಿಟ್ಟದೇವೆ!" ಎಂದು ಭಟರು ಹೇಳಿದರು.

ಪಾಪಚ್ಚಿಯೂ ಮೆರವಣಿಗೆಯಲ್ಲಿ ಸೇರಿಕೊಂಡಳು. ಎಂಟು ಹತ್ತು ಮಾರು ಮುಂದಕ್ಕೆ ಹೋದಾಗ ಅವಳನ್ನು ರಾಣಿಯವರು ಸ್ವತಃ ಕರೆಸಿ "ನಿನಗೆ ಚೆಂಡಾಡುವುದಕ್ಕೆ ಬರುತ್ತದೆಯೇ?" ಎಂದು ವಿಚಾರಿಸಿದರು. ಇತರರು ಆಡುವುದನ್ನು ನೋಡಿ ಅಲ್ಲೇ ಕಲಿತರಾಯ್ತು, ಬರುವುದಿಲ್ಲವೆಂದು ಈಗಲೇ ಹೇಳಿದರೆ ಸೇರಿಸುವುದೇ ಇಲ್ಲ, ಎಂದು ಯೋಚನೆಮಾಡಿ "ಸ್ವಲ್ಪ ಸ್ವಲ್ಪ ಬರುತ್ತೆ" ಎಂದು ಪಾಪಚ್ಚಿ ಹೇಳಿದಳು. "ಹಾಗಾದರೆ, ನೀನೂ ಬಾ" ಎಂದು ರಾಣಿಯವರು ಗರ್ಜಿಸಿದರು.

ಬಂದದ್ದೆಲ್ಲ ಬರಲಿ, ತಲೆ ಒಂದು ಉಳಿದರೆ ಸಾಕು ಎನ್ನುತ್ತ ಪಾಪಚ್ಚಿ ಬಿರುಬಿರನೆ ನಡೆದಳು. ಅತಿಥಿಗಳ ನಡುವೆ ಇದ್ದ ಮೊಲದ ಸಮೀಪಕ್ಕೆ ಬಂದಳು. "ಚೆನ್ನಾಗಿದ್ದೀರಾ, ತಿಮ್ಮಮ್ಮನವರೇ?" ಎಂದು ಮೊಲವು ಕುಶಲ ಪ್ರಶ್ನೆಮಾಡಿತು. "ಇನ್ನೂ ನನ್ನನ್ನು ತಿಮ್ಮ ಎಂದು ತಿಳಿದುಕೊಂಡಿದೆ, ಮಂಕು" ಎಂದು ಒಳಗೊಳಗೆ ಗೊಣಗುಟ್ಟುತ್ತಾ, "ನೀವು ಹೇಗಿದ್ದೀರಿ! ಅಮ್ಮಾವರು ಎಲ್ಲಿ?" ಎಂದು ಪಾಪಚ್ಚಿ ಕೇಳಿದಳು ಮೊಲ "ಮೆಲ್ಲಗೆ,—ಮೆಲ್ಲಗೆ ಮಾತನಾಡು. ಇಲ್ಲಿ ಎಲ್ಲರಿಗೂ ಮೈಯೆಲ್ಲಾ ಕಿವಿ!" ಎಂದು ಹೇಳುತ್ತಾ, ರಾಣಿಯವರು ಎಷ್ಟು ಹಿಂದೆ ಇರುವರೆಂದು ಹಿಂದಿರುಗಿ ನೋಡಿತು. ಅವರು ಇನ್ನೂ ದೂರದಲ್ಲೇ ಬರುತ್ತಿರುವರೆಂದು ತಿಳಿದು,

"ಅಮ್ಮಾವರಿಗೆ ಪಾಪ, ಆಗಲೇ ಮರಣದಂಡನೆಯಾಗಿದೆ. ಈಗ ಬಂದೀಖಾನೆಯಲ್ಲಿ ನರಳುತ್ತಿದ್ದಾರೆ" ಎಂದು ಹೇಳಿತು "ಏಕೆ?" ಎಂದು ಪಾಪಚ್ಚಿ ಕೇಳಿದಳು. "ಹತ್ತಿರ ಬಾ, ಹೇಳುತ್ತೇನೆ. ಯಾರಿಗಾದರೂ ಕೇಳಿಸಿದರೆ ನನ್ನ ತಲೆಯೂ ಹಾರುತ್ತೆ. ಬೆಳಿಗ್ಗೆ ಅಮ್ಮಾವರು ರಾಣಿಯವರ ಕಿವಿಯನ್ನು ಹಿಡಿದು ಬಲವಾಗಿ ಹಿಂಡಿಬಿಟ್ಟರಂತೆ. ಏಕೆಂದರೆ, ಅಮ್ಮಾವರು ಮನೆಯಿಂದ ಬರುವುದು ಕೊಂಚ ತಡವಾಯಿತು. ಅದಕ್ಕೆ ರಾಣಿಯವರು ಕೋಪಿಸಿಕೊಂಡಾಗ, ತೊಪ್ಪೆ...."

"ಸದ್ದು! ........... ಸರ್ವರೂ ಕುಳಿತುಕೊಳ್ಳಬೇಕು!" ಎಂದು ರಾಣಿಯೂ ಎಲ್ಲ ಭಟರೂ ಒಟ್ಟಿಗೆ ಕೂಗಿದ್ದರಿಂದ, ಮೊಲದ ಮಾತು ಅಲ್ಲಿಗೇ ಮುಚ್ಚಿಹೋಯಿತು. ಎಲ್ಲರೂ ನಿಂತಲ್ಲಿಯೇ ನೆಲ ನೋಡದೆ ಕುಕ್ಕರಿಸಿಬಿಟ್ಟರು. ....ಕೂಡಲೆ ಚೆಂಡಾಟವು ಪ್ರಾರಂಭವಾಯಿತು.

ಆಟದ ಮೈದಾನವು ಸಮವಾಗಿರಲಿಲ್ಲ. ಅದು ಹಿಗ್ಗುತಗ್ಗಾದ ಒಂದು ಪಾಳು ಬಯಲಾಗಿತ್ತು. ರಾಜನು ಮನಸ್ಸುಮಾಡಿದ್ದರೆ, ಅದಕ್ಕಿಂತ ಸೊಗಸಾದ, ಹಳ್ಳಗಿಳ್ಳಗಳಿಲ್ಲದ, ಮುಳ್ಳು ಪೊದರುಗಳಿಲ್ಲದ ಬಯಲನ್ನು ತಯಾರುಮಾಡಬಹುದಾಗಿತ್ತು. ಆದರೆ, ಅವನಿಗೇಕೆ ಅದರ ಗೊಡವೆ? ಚೆಂಡಾಟ ರಾಣಿಯ ವಿನೋದ. ಅವನು ಸುಮ್ಮನಿದ್ದ.

ಚೆಂಡಾಟದ ರೀತಿಯೂ ಕೂಡ ಕೊಂಚ, ಕೊಂಚವೇನು, ಬಹಳ ವಿಚಿತ್ರವಾಗಿತ್ತು. ಎಲ್ಲರಿಗೂ ಒಂದೊಂದು ಚೆಂಡು, ಒಂದೊಂದು ದಾಂಡು. ಅಲ್ಲಲ್ಲಿ ಇಬ್ಬಿಬ್ಬರು ಸಿಪಾಯಿಗಳು ಎದುರುಬದುರಾಗಿ ತಲೆ ಬಾಗಿಕೊಂಡು ಕಮಾನುಗಳ ಹಾಗೆ ನಿಂತಿದ್ದರು. ಅವರ ನಡುವೆ ಚೆಂಡು ತೂರುವಂತೆ ಹೊಡೆದರೆ, ಹೊಡೆದವ ಗೆದ್ದಹಾಗೆ! ಎಷ್ಟು ಸಲ ಹೊಡೆದನೋ, ಅಷ್ಟು ಅಷ್ಟು ಗಟ್ಟಿಗ ಅಂತ ಹೆಸರು; ಮೂತಿಯನ್ನು ಕಾಲು ಸಂದಿಯಲ್ಲಿಟ್ಟುಕೊಂಡು ಬಲವಾಗಿ ನಿದ್ದೆಹೋಗುತ್ತಿದ್ದ ಮುಳ್ಳು ಹಂದಿಗಳೇ ಚೆಂಡುಗಳು. ದಾಂಡುಗಳು ಯಾವುವು ಅಂತ ಕೇಳುತ್ತೀರೋ? ರೆಕ್ಕೆ ಮಡಿಸಿದ ಉದ್ದಕತ್ತಿನ ಕೊಕ್ಕರೆಗಳು. ಅಂದರೆ,—ಕೊಕ್ಕರೆಯ ಕಾಲುಗಳನ್ನು ಮಡಿಸಿರಿಸಿ ಅದರ ಹೊಟ್ಟೆಯ ಭಾಗವನ್ನು

ಕಂಕುಳಲ್ಲಿ ಬಲವಾಗಿ ಅದುಮಿ ಹಿಡಿದುಕೊಂಡು, ಕೊಕ್ಕಿಂದ ಮುಳ್ಳು ಹಂದಿ ಚೆಂಡನ್ನು ಹೊಡೆದು ಕಮಾನು ಸಿಪಾಯಿಗಳ ಮಧ್ಯೆ ತೂರಿಸ ಬೇಕು—ಇದೇ ಆಟ.

ಪಾಪಚ್ಚಿಗೆ ಪಾಠಶಾಲೆಯ ರಬ್ಬರ್ ಚೆಂಡಾಟವೇ ಎಷ್ಟೋ ಮೇಲೆಂದೆನಿಸಿತು. ಏಕೆಂದರೆ, (೧) ಇಲ್ಲಿ, ಕೊಕ್ಕರೆಯನ್ನು ಮಡಿಸಿ ಹಿಡಿದು ಕೊಳ್ಳುವುದೇ ಕಷ್ಟ. ಹೊಡೆಯುವ ತನಕ ಸುಮ್ಮನಿದ್ದು, ಸಮಯಕ್ಕೆ ಸರಿಯಾಗಿ ಕತ್ತನ್ನು ಮೇಲಕ್ಕೆ ಎತ್ತಿ ಹಿಡಿದುಬಿಡುತ್ತದೆ. ಏನುಮಾಡಿದರೂ ತಲೆಯನ್ನು ಇಳಿಯಬಿಡುವುದಿಲ್ಲ. (೨) ಒಂದು ವೇಳೆ ಕೊಕ್ಕರೆ ಸುಮ್ಮ ನಿದ್ದರೂ, ಅದುವರೆಗೂ ಗುಂಡಗಿದ್ದ ಮುಳ್ಳುಹಂದಿ ನಿದ್ದೆಯಿಂದೆದ್ದು ಮಣ್ಣನ್ನು ಬಗಿದುಕೊಂಡು ನೆಲದೊಳಕ್ಕೆ ಹೊರಟುಹೋಗುತ್ತದೆ. (೩) ಕೆಲವು ವೇಳೆ ಹಂದಿಯನ್ನು ಸರಿಯಾಗಿ ಹೊಡೆದರೂ, ಅದು ಒಂದೇ ಸಮ ಉರುಳದೆ, ಹಳ್ಳದಲ್ಲಿ ಬಿದ್ದುಬಿಡುತ್ತದೆ; ದಿಣ್ಣೆ ಹತ್ತುವುದಿಲ್ಲ. (೪) ಒಂದೆರಡು ಸಾರಿ ಹೊಡೆತದ ಜೋರಿನಿಂದ ಹಳ್ಳಗಳನ್ನು ಹಾರಿ ಹೋದರೂ ಕೂಡ, ಅದುವರೆಗೂ ಸರಿಯಾಗಿ ಬಗ್ಗಿನಿಂತಿದ್ದ ಕಮಾನು-ಜವಾನರಿಗೆ ಕತ್ತುನೋವೋ, ಬಾಯಾರಿಕೆಯೋ, ಬೀಡಿಯ ಜ್ಞಾಪಕವೋ ಬಂದು ಅವರು ಎಲ್ಲಿಗೋ ಹೊರಟುಹೋಗಿಬಿಡುವರು. ಹೀಗೆ ಕಡಲೆ ಯಿದ್ದಾಗ ಹಲ್ಲಿಲ್ಲ, ಹಲ್ಲಿದ್ದಾಗ ಕಡಲೆಯಿಲ್ಲ—ಎಂಬಹಾಗೆ, ಎಲ್ಲವೂ ಒಂದೇ ಕಾಲದಲ್ಲಿ ಕೂಡಿಬರುತ್ತಿರಲಿಲ್ಲ.

ಇಷ್ಟು ಸಾಲದೆ ಹೋದರೆ, ಆಟಗಾರರಲ್ಲೇ ಸದಾ ಜಗಳ, ಮನಸ್ತಾಪ ಅಂತಃಕಲಹ, ವಾಗ್ಯುದ್ಧ, ಹೊಡೆದಾಟ! ಯಾಕೆಂದರೆ, ಆಟಗಾರರನ್ನು ಹತೋಟಿಯಲ್ಲಿಟ್ಟಿರಲು ಒಂದು ಕಾನೂನಿಲ್ಲ, ಕರಾರಿಲ್ಲ, ನೀತಿ ಇಲ್ಲ, ನಿಯತಿ ಇಲ್ಲ, ಹೇಳುವವರಿಲ್ಲ, ಕೇಳುವವರು ಮೊದಲೇ ಇಲ್ಲ. ಯಾರು ಮುಂದೆ, ಯಾರು ಹಿಂದೆ? ಗೆದ್ದವರು ಯಾರು, ಸೋತವರು ಯಾರು? ಆಟದ ನಿಯಮಗಳೇನು?—ಯಾವುದೂ ಯಾರಿಗೂ ಗೊತ್ತಿರಲಿಲ್ಲ. "ನನ್ನ ಹಂದಿಯನ್ನು ನೀನು ಏಕೆ ಹೊಡೆದೆ?" "ನನ್ನ ಕೊಕ್ಕರೆಯ ಮೂಗು ನಿನ್ನಿಂದ ಡೊಂಕಾಯಿತು," ಈ ಮೊದಲಾದ ಕೂಗು

ಎಲ್ಲೆಲ್ಲಿಯೂ ಕೇಳಿಸುತ್ತಿತ್ತು. ಎಲ್ಲ ಕೂಗನ್ನೂ ಮೀರಿಸಿ, ಮಾರಿಯ ಹಾಗೆ ರಾಣಿಯು ರೇಗಾಟ!—“ಅವನ ತಲೆ ಕತ್ತರಿಸು! ಇವಳನ್ನು ಗಲ್ಲಿಗೆ ಹಾಕು! ಅವನನ್ನು ಶೂಲಕ್ಕೆ ಏರಿಸು!” ಕ್ಷಣಕ್ಷಣಕ್ಕೂ ಇದೇ ಆರ್ಭಟ.

ಪಾಪಚ್ಚಿಗೆ, ಯಾವಾಗ ತನ್ನ ತಲೆಗೆ ಬರುವುದೋ, ಎಂಬ ಭಯ. ಹಿಂದೊಂದು ಸಲ ತಾನು ತಿರುಗಿಬಿದ್ದಾಗ ರಾಜನು ಕಾಪಾಡಿದನು. ಆದರೆ, ಮತ್ತೊಮ್ಮೆ ತಲೆತಪ್ಪಿಸಿಕೊಳ್ಳಲು ಸಾಧ್ಯವೇ? ಅಂತು, ತಾನು ಬಹಳ ಎಚ್ಚರಿಕೆಯಿಂದಿರಬೇಕೆಂದು ಪಾಪಚ್ಚಿಗೆ ತಿಳಿಯಿತು. “ಇಲ್ಲಿ ಏನು! ಪ್ರಾಣ ತೆಗೆಯುವುದು ಅಂದರೆ ಪಾಯಸ ಕುಡಿದ ಹಾಗೆ. ತರಗೆಲೆ ಹಾಗೆ ಉದುರುತ್ತಿವೆ ತಲೆಗಳು ಆದರೂ ಇಷ್ಟೊಂದು ಜನ ಮಿಕ್ಕಿದಾರಲ್ಲಾ! ಅದೇ ಆಶ್ಚರ್ಯ” ಎಂದು ಯೋಚಿಸಿದಳು. ಬುದ್ಧಿವಂತೆ, ಹುಡುಗಿ!

---

## ಅಮ್ಮಾವರ ಬೆಕ್ಕು

ಆಗ, ಅವಳ ನೆತ್ತಿಗೆ ನೇರವಾಗಿ ಆಕಾಶದಲ್ಲಿ ಮಸಕು ಮಸಕಾಗಿ ಒಂದು ಪ್ರಕಾಶವಾದ ಹಾಗಾಯಿತು. ಕ್ರಮಕ್ರಮವಾಗಿ ಅದು ಹೆಚ್ಚಾಯಿತು; ಸ್ಪಷ್ಟವಾಯಿತು; ಕಣ್ಣಿಗೆ ಗೋಚರವಾಯಿತು ಪಾಪಚ್ಚಿಗೆ ಅದು ಏನೆಂದು ಕೊನೆಗೆ ಗೊತ್ತಾಯಿತು. “ಓ! ಬಾಬಾ ಬುಡನ್ ಬೆಕ್ಕಿನ ಹಲ್ಲುಕಿರಿತ!........ಅಬ್ಬ! ಕಡೆಗೂ, ಇಲ್ಲಿ ನನಗೊಂದು ಸ್ನೇಹಿತ ಸಿಕ್ಕಿದ ಹಾಗಾಯಿತು. ಇಲ್ಲಿಂದ ಹೇಗಾದರೂ ತಪ್ಪಿಸಿಕೊಂಡು ಹೋಗಲು ಇದಕ್ಕೆ ಉಪಾಯ ಗೊತ್ತಿದ್ದರೂ ಇರಬಹುದು” ಎಂದು ಯೋಚಿಸಿ, ಅವಳು ಪುತ್ತೆ ನಗುಮೊಗದವಳಾದಳು. ಆ ಕಿರಿತದ ಹಿಂದೆ, ಮಾತು ಹೊರಡುವುದಕ್ಕೆ ಸಾಕಾಗುವಷ್ಟು ಬಾಯಿ ಕಾಣಿಸಿಕೊಂಡ ತಕ್ಷಣವೇ “ಏನು ಮಾಡುತ್ತಿದೀರಿ?” ಎಂದು ಬೆಕ್ಕು ಕೇಳಿತು. “ಈಗಲೇ ನಾನು ಉತ್ತರ ಹೇಳಿ ಏನು ಪ್ರಯೋಜನ? ಒಂದು ಕಿವಿಯಾದರೂ ಪ್ರತ್ಯಕ್ಷವಾಗಲಿ, ಇಲ್ಲದಿದ್ದರೆ, ಈ ಬೆಕ್ಕಿಗೆ ಕೇಳಿಸುವುದು ಹೇಗೆ?”

ಎಂದು ಪಾಪಚ್ಚಿ ಕೊಂಚ ಹೊತ್ತು ಕಾದಿದ್ದಳು. ಎರಡು ಮೂರು ನಿಮಿಷಗಳಲ್ಲಿಯೇ ಬೆಕ್ಕಿನ ತಲೆಬುರುಡೆ ಕಿವಿಸಹಿತ ಸಿದ್ಧವಾಯಿತು. ಪಾಪಚ್ಚಿ ತನ್ನ ಕೊಕ್ಕರೆಯನ್ನು ಕೆಳಗಿಳಿಸಿ ಚೆಂಡಾಟದ ತೊಂದರೆಗಳನ್ನೂ ಆಟಗಾರರ ಅನ್ಯಾಯಗಳನ್ನೂ ಬೆಕ್ಕಿಗೆ ವಿವರಿಸಿದಳು. ಬೆಕ್ಕಿನ ಉಳಿದ ಭಾಗಗಳು ಬರಲೇ ಇಲ್ಲ. ಅವು ಅದಕ್ಕೆ ಆಗ ಇರಬೇಕಾದ ಅಗತ್ಯವೂ ಇರಲಿಲ್ಲ, ಅನ್ನಿ. ಮಾತಾಡಬೇಕು. ಮಾತು ಕೇಳಿಸಬೇಕು. ಅಷ್ಟೇ ತಾನೆ? ಅದಕ್ಕೆ ಬಾಯಿ, ಕಿವಿ ಎರಡೂ ಸಾಲದೆ? "ನೋಡಿ! ಇಲ್ಲಿ ಯಾರೂ ಸರಿಯಾಗಿ, ಸತ್ಯವಾಗಿ ಆಟವಾಡುವುದೇ ಇಲ್ಲ. ಇವರ ಗಲಾಟೆಯಲ್ಲಿ ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುವುದಿಲ್ಲ. ನಾನು ಹೇಳುವುದೇನೆಂದು ನನಗೇ ಕೇಳಿಸುವುದಿಲ್ಲ....ಇತರರು ಯಾರನ್ನಾದರೂ ಕೇಳಿ ತಿಳಿದುಕೊಳ್ಳಬೇಕಾಗಿದೆ! ಆಟದ ಸಾಮಾನುಗಳಿಗೆಲ್ಲಾ ಜೀವ ಇರುವುದರಿಂದ ಒಂದೂ ಕೈಗೆ ಸಿಕ್ಕುವುದಿಲ್ಲ. ನೋಡಿ! ಈಗತಾನೆ ನಾನು ರಾಣಿಯವರ ಚೆಂಡನ್ನು ಹೊಡೆಯುವುದರಲ್ಲಿದ್ದೆ. ಅದು ನನ್ನ ಹತ್ತಿರಕ್ಕೆ ಓಡಿಬಂದು ಬಿಟ್ಟಿದೆ. ನನ್ನ ಕಮಾನಿನ ಸಿಪಾಯಿಗಳಿಬ್ಬರೂ, ಅಗೋ ಅಲ್ಲಿ ಚೂರು ಬೀಡಿಗಾಗಿ ಹೊಡೆದಾಡುತ್ತಿದಾರೆ" ಎಂದು ತನ್ನ ಗೋಳನ್ನು ಹೇಳಿಕೊಂಡಳು.

"ರಾಣಿ ಹೇಗಿದಾಳೆ?" ಎಂದು ಬೆಕ್ಕಿನ ಬಾಯಿ ಕೇಳಿತು. "ಅವಳು ರಾಕ್ಷಸಿ........ (ಇಷ್ಟರಲ್ಲಿ ರಾಣಿಯವರೇ ತನ್ನ ಮುಳ್ಳುಹಂದಿಯನ್ನು ಹುಡುಕುತ್ತಾ ಅಲ್ಲಿಗೆ ಬಂದುಬಿಟ್ಟಿದ್ದರು. ಆದ್ದರಿಂದ) ........ ಗಳ ಮಧ್ಯೆ ಇದ್ದ ಸೀತಾದೇವಿಯು ಹಾಗಿದಾರೆ" ಎಂದು ಪಾಪಚ್ಚಿ ಗಟ್ಟಿಯಾಗಿ ಹೇಳಿದಳು. ರಾಣಿಯ ಮುಖ ಅರಳಿತು. ಪಾಪಚ್ಚಿ ಮೇಲಿನ ಅವಳ ಪ್ರೀತಿ ಇಮ್ಮಡಿಯಾಯಿತು.

ಆದರೆ, ಆ ಬಾಬಾಬುಡಸ್ ಬೆಕ್ಕಿನ ಬುಡವಿಲ್ಲದ ಹಲ್ಲುಕಿರಿತ ರಾಣಿಗೆ ಸ್ವಲ್ಪವೂ ಸರಿಬೀಳಲಿಲ್ಲ. ಅವಳನ್ನು ಹಿಂಬಾಲಿಸಿ ಅಲ್ಲಿಗೆ ಬಂದ ರಾಜನಿಗೂ ಅದು ತೀರ ಅಸಹ್ಯವಾಗಿ ಕಾಣಿಸಿತು. "ಪ್ರಿಯೆ! ಈ ಅನಿಷ್ಟವನ್ನು, ಈ ಅಪಶಕುನವನ್ನು, ಬೇಗನೆ ಇಲ್ಲಿಂದ ತೊಲಗಿಸು" ಎಂದು ರಾಜನು ಬೇಡಿದನು. ''ಯಾಕೆ? ಬೆಕ್ಕಿಗೂ ಬಾದಷಹನನ್ನು

ನೋಡುವ ಅಧಿಕಾರ ಉಂಟಲ್ಲವೆ?'' ಎಂದಳು, ಪಾಪಚ್ಚಿ. " ಇಲ್ಲಿ ನನ್ನ ಪುಸ್ತಕವೇ ವೇದ" ಎಂದಳು ರಾಣಿ. ಅವಳಿಗೆ ತಿಳಿದಿದ್ದುದು ಒಂದೇ ಮಂತ್ರ—"ಅದರ ತಲೆ ಕತ್ತರಿಸು !" ಸರಿ ! ಅಪ್ಪಣೆಯಾಯಿತು· ಸುಗ್ರೀವಾಜ್ಞೆ! "ಆಗಲಿ! ನಾನೇ ಹೋಗಿ ಕಟುಕನನ್ನು ಕಳುಹಿಸು ತ್ತೇನೆ" ಎಂದು ಹೇಳಿ ರಾಜನು ಹೊರಟನು. ಒಂದೆರಡು ನಿಮಿಷ ಗಳಲ್ಲಿಯೇ, ಹರಿತವಾದ ಒಂದು ಗಂಡು ಕೊಡಲಿ ಸಹಿತವಾಗಿ ಆಸ್ಥಾನದ ಕಟುಕನು ಬಂದನು. ಎಲ್ಲರೂ ಬೆಕ್ಕಿನ ಸುತ್ತ ಸಭೆ ಸೇರಿದರು. ರಾಣಿ ಯವರು "ಕತ್ತರಿಸು ಇದರ ತಲೆಯನ್ನ!" ಎಂದು ಗರ್ಜಿಸಿದರು. ಆದರೆ, ಕಟುಕನು ಅದಕ್ಕೆ ಒಪ್ಪಲಿಲ್ಲ. "ಮಹಾಸ್ವಾಮಿ, ಬಡವನ ಮೇಲೆ ಕೋಪಿಸಬಾರದು. ಕತ್ತೇ ಇಲ್ಲದ ಪ್ರಾಣಿಯ ತಲೆಯನ್ನು ನಾನು ಹೇಗೆ ಕತ್ತರಿಸಲಿ, ಯಾವ ದೇಹದಿಂದ ನಾನು ಈ ತಲೆಯನ್ನು ಬೇರ್ಪಡಿಸಲಿ? ಮಹಾಸ್ವಾಮಿ! ನನಗೆ ತಿಳಿಯದು" ಎಂದು ಹೇಳಿ ಕೊಡಲಿಯನ್ನು ನೆಲದಮೇಲಿರಿಸಿ ಅಡ್ಡಬಿದ್ದನು. ತಲೆ ತೆಗೆಯುವುದಕ್ಕೆ ತಲೆ ಎಂಬ ಪದಾರ್ಥ ಒಂದೇ ಇದ್ದರೆ ಸಾಕು ಎಂದು ಮುಂತಾಗಿ ರಾಜನು ಬಹಳವಾಗಿ ಕಟುಕನೊಂದಿಗೆ ವಾದಿಸಿದನು. ತನ್ನ ಕೋರಿಕೆಯನ್ನು ನೆರವೇರಿಸದಿದ್ದರೆ ಕಟುಕನ ತಲೆಯನ್ನೂ ಕಡಿದುಬಿಡುವೆನೆಂದು ರಾಣಿಯು ಅವನ ಕಿವಿ ಯಲ್ಲಿ ಕೂಗಿದಳು. ಆದರೇನು? ಅವನು ಏಳಲೇ ಇಲ್ಲ.

ಪಾಪಚ್ಚಿಗೆ ಇದೆಲ್ಲವನ್ನೂ ನೋಡಿ ನಗು ಬಂತು. ಅವಳು ರಾಣಿಯ ಬಳಿಗೆ ಸರಿದು, "ಆ ಬೆಕ್ಕು ಅಮ್ಮಾವರದು. ಅದರ ತಲೆ ಕಡಿಯಬೇಕಾದರೆ ಮೊದಲು ಅಮ್ಮಾವರ ಅನುಮತಿಯನ್ನು ಪಡೆಯಬೇಕಲ್ಲವೆ?" ಎಂದು ಸೂಚನೆಕೊಟ್ಟಳು. ''ಲೋ, ಕಟುಕಾ! ಬೆಟ್ಟದ ಮೇಲಿನ ಸೆರೆಮನೆಯಲ್ಲಿ ಅಮ್ಮಾವರಿದಾರೆ, ಇಲ್ಲಿಗೆ ಸರ ಸರನೆ ಎಳೆದುಕೊಂಡು ಬಾ!" ಎಂದು ಹೇಳಿ ಅವನ ಕೈಗೆ ರಾಣಿ ಒಂದು ದೊಡ್ಡ ಬೀಗದ ಕೈಯನ್ನು ಕೊಟ್ಟಳು. ಎದ್ದು, ಬಿಟ್ಟ ಬಾಣದ ಹಾಗೆ ಅವನು ಓಡಿದನು.

ಅಷ್ಟರಲ್ಲಿ, ಯಾರಿಗೂ ತಿಳಿಯದೆಯೇ, ಬಾಬಾಬುಡನ್ ಬೆಕ್ಕಿನ ತಲೆಬುರುಡೆ, ಅಳಿಸಿಹೋಗುತ್ತಾ ಬಂತು. ಅಮ್ಮಾವರು ಅಲ್ಲಿಗೆ ಬರುವು

ದರೊಳಗೆ ಅದು ಸಂಪೂರ್ಣ ಮಂಗಮಾಯವಾಗಿಬಿಟ್ಟಿತ್ತು. ಸಿಪಾಯಿಗಳೆಲ್ಲರೂ ಬೆಕ್ಕನ್ನು ಹಿಡಿಯಲು ಹುಡುಕಾಡಿದರು. ಆದರೆ, ಅದರ ಕಿರಿತದ ಬೆಳಕಿನ ರಶ್ಮಿಕೂಡ ಅವರಿಗೆ ಸಿಗಲಿಲ್ಲ. ಎಲ್ಲರೂ ನಾಗಾಲೋಟದಿಂದ ಬೆಕ್ಕನ್ನು ಹಿಡಿದು ಬಂಧಿಸಲು ನಾಲ್ಕು ಕಡೆಗಳಿಗೂ ಓಡಿದ್ದರಿಂದ ಆ ಮರ ದಡಿಯಲ್ಲಿ ಪಾಪಚ್ಚಿ, ಅಮ್ಮಾವರು, ಇಬ್ಬರು ಮಾತ್ರ ಉಳಿದರು.

ಅಮ್ಮಾವರು ಕಲ್ಲುಮನದವಳು, ಮಕ್ಕಳ ಮೇಲೆ ಕನಿಕರವಿಲ್ಲದವರು ಎಂದು ಪಾಪಚ್ಚಿ ಆಗಲೇ ಅರಿತಿದ್ದಳು. ಆದರೆ, ಇಂದು ಅವರು ಬಹಳ ವಿನಯದಿಂದ, ಪ್ರೀತಿ ತುಂಬಿದ ಮಾತುಗಳನ್ನಾಡಿದರು. "ಬಾ, ಮಗೂ! ನನ್ನ ಹತ್ತಿರಬಾ, ನಿನ್ನನ್ನು ನೋಡುತ್ತಾ ಇದ್ದರೆ ನನ್ನ ಕಣ್ಣು ತಣ್ಣಗಾಗುತ್ತೆ" ಎಂದು ಹೇಳಿದರು. ಬಹುಶಃ, ಅಂದಿನ ಮೂರ್ಖತನಕ್ಕೆ ಮೆಣಸಿನ ಪುಡಿಯೇ ಕಾರಣವಾಗಿದ್ದಿರಬೇಕೆಂದು ಪಾಪಚ್ಚಿ ಊಹಿಸಿದಳು; ಆದ್ದರಿಂದ ಸೆರೆಮನೆಯನ್ನು ಕುರಿತಾಗಲಿ, ರಾಣಿಯವರ ಕೋಪವನ್ನು ಕುರಿತಾಗಲಿ ಪಾಪಚ್ಚಿ ಒಂದು ಮಾತೂ ಆಡಲಿಲ್ಲ. "ನಾನು ಅಮ್ಮಾವರಾಗುವಾಗ, ಅಡಿಗೆ ಮನೆಗೆ ಮೆಣಸನ್ನೇ ಸೇರಿಸುವುದಿಲ್ಲ. ಮೆಣಸಿಂದ ಮುನಿಸು; ಹುಳಿಯಿಂದ ಹುಳಿಮುಖ; ಬೇವುಹಾಗಲಗಳಿಂದ ಕಹಿಮಾತು; ಸಕ್ಕರೆಯಿಂದ ಅಕ್ಕರೆ........ತುಂತುಂಬ ಸಕ್ಕರೆ ಕೊಟ್ಟರೆ, ಮಧುರವಾಗಿರುತ್ತೆ ಮನೆ...." ಎಂದುಕೊಂಡಳು.

ಆಮೇಲೆ, ಅಮ್ಮಾವರ ಕಡೆ ತಿರುಗಿ "ಚೆಂಡಾಟ ಬಹಳ ಚೆನ್ನಾಗಿತ್ತು" ಎಂದಳು.

ಅಮ್ಮಾವರು.—"ಹೌದಮ್ಮಾ. ನಿನಗೆ ಚೆನ್ನಾಗಿರುವುದಿಲ್ಲವೆ? ನಿಮಗೆಲ್ಲಾ ಈಗ ಚೆಂಡು ಆಡುವ ಪ್ರಾಯ; ಉತ್ಸಾಹ. ಅದಕ್ಕೇ ಶಿಶುಶಾಸ್ತ್ರದಲ್ಲಿ ಹೇಳಿರುವುದು, 'ಆಟ, ಊಟ, ಓಟ' ಎಂದು."

"ಓ! ಅದು ನನ್ನ ಪುಸ್ತಕದಲ್ಲೂ ಇದೆ."

"ಇರಬಹುದಮ್ಮಾ, ಇರಬಹುದು. ಇಲ್ಲವೆಂದವರಾರು? ಇದ್ದೇ ಇರಬೇಕು. ಅದಕ್ಕೇ, ದೊಡ್ಡವರು ಗಾದೆ ಹೇಳುವುದು, 'ಹೆಗಲು ಕಳ್ಳ ಅಂದರೆ ಕುಂಬಳಕಾಯಿ ಮುಟ್ಟಿ ನೋಡಿದ,' ಅಂತ."

"ಆ ಗಾದೆ ಹಾಗಲ್ಲ. ನಾನು ಕೇಳಿರುವುದು ಇನ್ನೊಂದು ತರಹ '.... ಕುಂಬಳಕಾಯಿ ....' "

"ಇನ್ನೊಂದು ತರಹ ಇರಬಹುದಮ್ಮಾ, ಇರಬಹುದು. ಇಲ್ಲವೆಂದವರು ಯಾರು? ಇದ್ದೇ ಇರಬೇಕು. ಕುಂಬಳಕಾಯಿಯಲ್ಲಿ ಅನೇಕ ತರಹ ಇವೆ. ಬೂದಿ, ಸಕ್ಕರೆ, .... ಅದಕ್ಕೇ ದೊಡ್ಡವರು ಹೇಳುವುದು 'ನಾರಿನಿಂದ ಹೂವೂ ಜಡೆಗೇರಿತು,' ಅಂತ."

"ಅದು ಹೇಗೆ? ನಾರಿಗಾಗಿ ಹೂವೋ, ಹೂವಿಗಾಗಿ ನಾರೋ?"

"ಚೆನ್ನಾಯಿತು. ಇದೇಕಮ್ಮಾ ಹೀಗೆ ಹೇಳುವೆ? ತಲೆ ಇದ್ದರೆ, ಜಡೆ! ತುರುಬಿದ್ದರೆ ಹೂವು ..... ಅಯ್ಯೋ! ನಾನು ಸತ್ತೆ !!"

ಹೀಗೆಂದು ಕಿರಿಚಿಕೊಂಡು ಅಮ್ಮಾವರು ನೆಲದ ಮೇಲೆ ಬಿದ್ದು ನಮಸ್ಕಾರಮಾಡಿದರು. ಏಕೆಂದರೆ, ಮಹಾರಾಣಿಯವರ ರುದ್ರಾವತಾರ ಆಗಲೇ ಅವರೆದುರು ಬಂದು ನಿಂತಿತ್ತು. ಅಮ್ಮಾವರ ಸಾಷ್ಟಾಂಗವನ್ನೂ ರಾಣಿಭಕ್ತಿಯಿಂದ ತುಂಬಿದ ಸ್ತೋತ್ರಗಳನ್ನೂ ಲೆಕ್ಕಿಸದೆ, ರಾಣಿ, "ತೊಲಗು, ತೊಲಗು ಇಲ್ಲಿಂದ, ಓಡು, ಇಲ್ಲದೆ ಇದ್ದರೆ ನಿನ್ನ ತಲೆಬುರುಡೆ ಉರುಳಿಸಿಬಿಡುತ್ತೇನೆ!" ಎಂದು ಬೈದಳು. "ತೊಲಗುತ್ತೀಯೋ ಇಲ್ಲವೋ? ಎಂದು ಅಟ್ಟಹಾಸ ಮಾಡಿದಳು. ಪಾಪ! ಅಮ್ಮಾವರು ಎದ್ದು ಓಡಿದರು .... ಪ್ರಾಣಕ್ಕೆ ಅಪಾಯಬರುವುದಾದರೆ ಹೆಂಗಸು ಎಷ್ಟು ವೇಗವಾಗಿ ಓಡಬಲ್ಲಳೆಂಬುದು ಆಗ ಪಾಪಚ್ಚಿಗೆ ಚೆನ್ನಾಗಿ ತಿಳಿಯಿತು.

---

## ಆಸ್ಥಾನದ ಆನೆ

"ಬಾರೆ ಹುಡುಗಿ, ಚೆಂಡಾಡೋಣ" ಎಂದು ಹೇಳಿ ಪಾಪಚ್ಚಿಯನ್ನು ಕರೆದುಕೊಂಡು ರಾಣಿ ಮತ್ತೆ ಆಟದ ಬಯಲಿನ ಕಡೆ ತಿರುಗಿದಳು. ಗುಜುಗುಜಿಸುತ್ತಿದ್ದ ಜನಗಳೆಲ್ಲರೂ ಸುಮ್ಮನಾದರು. ಎದ್ದು ನಿಂತರು. ಪುನಃ ಆಟ ಪ್ರಾರಂಭವಾಯಿತು. ಪುನಃ ಅರ್ಭಟ ಮೊದಲಾಯಿತು.

ರಾಣಿಯ ಕೋಪಕ್ಕೆ ಗುರಿಯಾದವರನ್ನು ಬಂಧಿಸುವುದಕ್ಕೂ ಆಟದ ಕಮಾನುಗಳಿಗೂ ಸಿಪಾಯಿಗಳ ಸಂಖ್ಯೆ ಸಾಲದೆ ಹೋಯಿತು. ಆದ್ದರಿಂದ, ಆಟವನ್ನು ಮುಗಿಸಲೇಬೇಕಾಯಿತು !

ಇಷ್ಟರೊಳಗೆ ರಾಣಿಗೆ ಪಾಪಚ್ಚಿಯ ಮೇಲೆ ತುಂಬಾ ಪ್ರೀತಿ ಬೆಳೆದು ಬಿಟ್ಟಿತ್ತು. ಅವಳನ್ನು ಕಂಡರೆ ಎಲ್ಲರಿಗೂ ಹಾಗೆಯೇ, ಅನ್ನಿ. ಮುದ್ದಾದ ಮಾತು. ಜಾಣೆ. ವೀಣೆಯಂತಹ ಗಂಟಲು ಧೈರ್ಯವಾಗಿ ಎಲ್ಲಿಗೆ ಬೇಕಾದರೂ ಹೋಗಿಬರುವಳು, ಯಾರೊಡನೆ ಬೇಕಾದರೂ ಮಾತ ನಾಡುವಳು. ರಾಣಿ ತನ್ನ ಅಮೃತ ಹಸ್ತವನ್ನು ಅವಳ ಭುಜದ ಮೇಲಿರಿಸಿ "ನೀನಿನ್ನೂ ನಮ್ಮ ಆಸ್ಥಾನದ ಆಮೆ ಸಂನ್ಯಾಸಿಯನ್ನು ನೋಡಿಲ್ಲವೊ ?" ಎಂದು ಕೇಳಿದಳು. "ಇಲ್ಲ. ಹಾಗೊಬ್ಬ ಪುಣ್ಯಾತ್ಮ ಇದಾನೆಂದೇ ನನಗೆ ಇದುವರೆಗೂ ತಿಳಿಯದು" ಎಂದು ಪಾಪಚ್ಚಿ ಉತ್ತರಕೊಟ್ಟಳು. "ಹಾಗಾ ದರೆ ಬಾರಮ್ಮಾ, ಅದರ ಸ್ವಾರಸ್ಯವಾದ ಕಥೆಯನ್ನು ಅದರ ಬಾಯಿಂದಲೇ ಕೇಳುವೆಯಂತೆ" ಎಂದು ಹೇಳಿ, ರಾಣಿ ಉದ್ಯಾನದಿಂದ ಹೊರಗೆ ಬಂದು, ಒಂದು ವಿಶಾಲವಾದ ಕೆರೆಯ ಕಡೆಗೆ ಪ್ರಯಾಣ ಬೆಳಸಿದಳು. ಅರಮನೆ ಅತಿಥಿಗಳನ್ನೂ ಗಂಡನನ್ನೂ ಬಿಟ್ಟು, ರಾಣಿ ತನಗೋಸ್ಕರ ಇಷ್ಟು ಶ್ರಮ ವಹಿಸಿದ್ದರಲ್ಲಿ ಪಾಪಚ್ಚಿಗೆ ತಲೆತುಂಬ ಹೆಮ್ಮೆ, ಹಿಡಿಸಲಾರದಷ್ಟು ಸಂತೋಷ !

ರಾಣಿ ಸ್ವಲ್ಪ ದೂರ ಹೋದಕೂಡಲೇ ರಾಜನು ಬಂದಿಗಳೆಲ್ಲರನ್ನೂ ಸಾಲಾಗಿ ನಿಲ್ಲಿಸಿ "ನಿಮಗೆ ಬಿಡುಗಡೆಯಾಗಿದೆ. ಹೋಗಿ. ಅವಳು ಬರುವುದರೊಳಗೆ ಎಲ್ಲಾದರೂ ಮರೆಯಾಗಿ !" ಎಂದು ಹೇಳಿ ಕಳುಹಿಸಿ ದನು. ಈ ಮಾತು ರಾಣಿಗೆ ಕೇಳಿಸಲಿಲ್ಲ; ಪಾಪಚ್ಚಿಗೆ ಕೇಳಿಸಿತು. ರಾಣಿಯ ಕ್ರೂರಸ್ವಭಾವಕ್ಕೆ ಎದುರಾಗಿ ಇಂಥಾ ದಯಾಶೀಲನಾದ ರಾಜ ನಿಲ್ಲದಿದ್ದರೆ ಮುಂದಿಯ ಪಾಡು ಏನಾಗಬೇಕು, ಎಂದು ಯೋಚಿಸುತ್ತಾ ಪಾಪಚ್ಚಿ ಮುಂದೆ ನಡೆದಳು.

ಹತ್ತಿಪ್ಪತ್ತು ಹೆಜ್ಜೆ ಹೋದನಂತರ ರಾಣಿಯ ಚಿತ್ತ ಬದಲಾಯಿಸಿತು. ಕೆರೆಯ ಅಂಚಿನಲ್ಲಿ ಬಾಯಿ ತೆರೆದು ಬಿಸಿಲು ಕಾಯುತ್ತಿದ್ದ ಒಂದು ಮೊಸಳೆ

ಯನ್ನು ಕರೆದು, "ಲೋ, ಸೋಮಾರಿ! ಏಳು! ಚಿಕ್ಕಮ್ಮಾವರನ್ನು ಕರೆದುಕೊಂಡು ಹೋಗಿ ಆಮೆ ಹತ್ತಿರ ಬಿಡು. ದಾರಿಯಲ್ಲಿ ಬಾಯಿ ತೆಗೆಯಬೇಡ. ಜೋಕೆ. ಹೋಗಿ, ಆಮೆಯ ಕಥೆಯನ್ನು ಇವರಿಗೆ ಹೇಳಿಸು" ಎಂದು ಆಜ್ಞೆಮಾಡಿದಳು. "ನೀನು ಹೊರಡಮ್ಮಾ! ನಾನು ಈಗಲೇ ಹೋಗಿ ಕೆಲವರ ತಲೆ ಕತ್ತರಿಸಬೇಕಾಗಿದೆ" ಎಂದು ಹೇಳಿ ರಾಣಿ ಅವಸರವವಸರವಾಗಿ ಹಿಂದಕ್ಕೆ ನಡೆದಳು.

ಮೊಸಳೆ, 'ಬನ್ನಿ' ಎಂದಿತು. ಪಾಪಚ್ಚಿಗೆ, ಪಾಪ, ಒಳ್ಳೆಯ ಸಹವಾಸ ದೊರಕಿದಹಾಗಾಯಿತು! ಆದರೂ ಅವಳು ಹೆದರಲಿಲ್ಲ. ಮೆಲ್ಲಗೆ ಮೊಸಳೆಯನ್ನು "ನಿಮಗೆ ಹಸಿವಾಗುತ್ತಿದೆಯೋ?" ಎಂದು ಕೇಳಿದಳು. "ಇಲ್ಲ, ಹೊಟ್ಟೆ ತುಂಬಿದೆ" ಎಂದು ಮೊಸಳೆ ಹೇಳಿತು. ಆಗ, ಅವಳಿಗೆ ಕೊಂಚ ಧೈರ್ಯವಾಯಿತು. ಹಸಿವಿಲ್ಲದಿದ್ದರೆ ಯಾವ ಪ್ರಾಣಿಯೂ (ಮನುಷ್ಯ ಹೊರತು) ಆಹಾರ ತೆಗೆದುಕೊಳ್ಳುವುದಿಲ್ಲ ಎಂದು ಅವಳಿಗೆ ಗೊತ್ತಿತ್ತು. ಆದ್ದರಿಂದ, ಮೊಸಳೆ ತನ್ನನ್ನು ತಿನ್ನುವು ದಿಲ್ಲವೆಂದು ಅವಳು ಊಹಿಸಿದಳು. ಆ ಮೊಸಳೆ ಕೂಡ ಇತರ ಮೊಸಳೆಗಳ ಹಾಗಿರಲಿಲ್ಲ. ಯಾವಾಗಲೂ ಹಲ್ಲು ಬಿಟ್ಟು ನಗುತ್ತಲೇ ಇತ್ತು. "ಇದೇನು ಹುಚ್ಚು ಈ ರಾಣಿಗೆ! ನೋಡಿಲ್ಲವೆ ನೀವು; ಒಬ್ಬರನ್ನೂ ಸಾಯಿಸುವುದಿಲ್ಲ. ಒಬ್ಬರನ್ನಾದರೂ ಹಿಂಸಿಸುವುದಿಲ್ಲ. ಎಲ್ಲರೂ ನೆಮ್ಮದಿಯಾಗಿದ್ದಾರೆ. ಈ ಹುಚ್ಚಿ ಮಾತ್ರ ದಿನ ಬೆಳಗಾದರೆ, 'ಕಡಿ, ಕತ್ತರಿಸು, ಸಾಯಿಸು, ಇರಿ, ಹೊಡಿ,' ಎಂದು ಕೂಗುತ್ತದೆ! ಅಷ್ಟರಲ್ಲೇ ತೃಪ್ತಿ! ಅಯ್ಯೋ, ಮಂಕೇ!" ಎಂದು ಹೇಳುತ್ತಾ ಮೊಸಳೆಯು ಬಹಳ ಹೊತ್ತು ನಕ್ಕಿತು. ಕಡೆಗೆ, ಪಾಪಚ್ಚಿಯನ್ನು ಕರೆದು, "ಬನ್ನಿ ಹೋಗೋಣ! ಆಮೆಗೆ ಈಗ ಕೊಂಚ ವಿರಾಮವಾಗಿದೆ. ಸ್ನಾನ, ಆಹ್ನಿಕ ಎಲ್ಲಾ ಮುಗಿಸಿ, ಅಡಿಗೆ ಸಿದ್ಧವಾಗುವತನಕ ಆಕಳಿಸುತ್ತ ಕಾದಿರುವ ಸಮಯ ಈಗ. ಬನ್ನಿ!" ಎಂದು ಹೇಳಿ ವೇಗವಾಗಿ ಮುಂದಕ್ಕೆ ಹೋಯಿತು.

ಆ ಕೆರೆಯ ಪಕ್ಕದಲ್ಲಿ ಬಿದ್ದಿದ್ದ ಒಂದು ಬೋಳುಬಂಡೆಯ ಮೇಲೆ ಆಸ್ಥಾನದ ಆಮೆ ಸಂನ್ಯಾಸಿ ಕುಳಿತಿತ್ತು. ಅದನ್ನು ನೋಡಿದರೆ ಬಂದವ

ರೊಂದಿಗೆ ಸರಸ ಸಂಭಾಷಣೆಗೆ ಸಿದ್ಧವಾಗಿದ್ದಂತೆ ತೋರಲಿಲ್ಲ. ಬಹಳ ಮನನೊಂದು ಕಣ್ಣೀರು ಸುರಿಸುತ್ತಾ ನಿಟ್ಟುಸಿರುಬಿಡುತ್ತಾ ಖಿನ್ನವಾಗಿ ನರಳುತ್ತಿತ್ತು. ಯಾವುದೋ ಭಾರಿ ನೋವನ್ನು ನುಂಗುತ್ತಿದ್ದ ಹಾಗೆ ತೋರಿತು. "ಪಾಪ! ಇದಕ್ಕೆ ಏನಾಗಿದೆ?" ಎಂದು ಪಾಪಚ್ಚಿ ಮೊಸಳೆಯನ್ನು ಕೇಳಿದನು. "ಏನೂ ಇಲ್ಲ. ಬರಿಯ ಬೂಟಾಟಿಕೆ, ನಟನೆ! ಅಷ್ಟೆ. ಹಿಟ್ಟು, ಬಟ್ಟೆ ಎರಡೂ ಸುಖವಾಗಿ ಅರಮನೆಯಿಂದ ಸಿಕ್ಕುತ್ತವೆ. ಮನೆ ಬೆನ್ನಿನ ಮೇಲೆಯೇ ಇದೆ. ಇನ್ನೇನು ಕೆಲಸ. ನರಳುವುದು, ಅಳುವುದು, ಕಣ್ಣೊರಸಿಕೊಳ್ಳುವುದು. ಶುದ್ಧ ಕಪಟ!" ಎಂದು ಮೊಸಳೆ ಹೇಳಿತು. "ಇಂಥವರೂ ಉಂಟೆ?" ಎಂದು ಪಾಪಚ್ಚಿ ಆಶ್ಚರ್ಯಪಟ್ಟಳು.

ಅನಂತರ, ಮೊಸಳೆ ಆಮೆಯ ಹತ್ತಿರಕ್ಕೆ ಕೊಂಚ ಸರಿದು, "ಯಜಮಾನರೇ! ತಮ್ಮ ಚರಿತ್ರೆಯನ್ನು ಅಪ್ಪಣೆಕೊಡಿಸಬೇಕೆಂದು ಸನ್ನಿಧಾನದಿಂದ........" ಎಂದು ಹೇಳಿತು. "ಆಗಬಹುದು. ದಯಮಾಡಿಸಿ. ಹತ್ತಿರ ಬನ್ನಿ. ಕುಳಿತುಕೊಳ್ಳಿ. ನನಗೆ ವಯಸ್ಸಾಯಿತು. ದೇಹದಲ್ಲಿ ಶಕ್ತಿ ಸಾಲದು. ಗಟ್ಟಿಯಾಗಿ ಮಾತಾಡಲಾರೆ. ತಣ್ಣೀರಲ್ಲಿ ಮಿಂದು ಮಿಂದು ಗೂರಲು ಬೇರೆ ಈಚೀಚೆಗೆ ಬಲವಾಗಿದೆ. ಇರಲಿ! ನನ್ನ ಚರಿತ್ರೆ ಹೇಳುವುದರಲ್ಲಿ ನನಗೇನು ಅಭ್ಯಂತರವಿಲ್ಲ. ಅದರಲ್ಲೂ ರಾಜಾಜ್ಞೆಯನ್ನು ಮೀರಿ ನಡೆದರೆ ಬದುಕುವುದುಂಟೆ? ಆದರೆ, ಒಂದು, — ನಾನು ಹೇಳಿ ಮುಗಿಸುವತನಕ ನೀವು ಯಾರೂ ಮಾತನಾಡಬಾರದು. ನಾನು ಮುದುಕ—ಕೋಪ ಹೆಚ್ಚು" ಎಂದು ಆಮೆ ಅಳುತ್ತಾ ಹೇಳಿತು.

ಹಾಗೆಯೇ ಆಗಲೆಂದು ಒಪ್ಪಿ, ಇಬ್ಬರೂ ಬಂಡೆಯ ಮೇಲೆ ಮಂಡಿಸಿದರು. ಅರೆಗಳಿಗೆಯ ಹೊತ್ತು ಯಾರೂ ಮಾತಾಡಲೇ ಇಲ್ಲ. "ಕಥೆ ಹೇಳುವುದಕ್ಕೆ ಈತ ಪ್ರಾರಂಭವೇ ಮಾಡದಿದ್ದರೆ, ಮುಗಿಯುವುದೆಂದಿಗೆ? ಹೀಗೆ ಬಾಯಿಗೆ ಬೀಗ ಹಾಕಿಕೊಂಡು ಇದರ ಸಂಕಟ ನೋಡುತ್ತ ಎಷ್ಟು ಹೊತ್ತು ಸುಮ್ಮನಿರುವುದಕ್ಕಾದೀತು?" ಎಂದು ಪಾಪಚ್ಚಿ ಚಿಂತಿಸಿದಳು........ಬೇರೆ ಯಾರೂ ಮಾತಿಗೆ ಸಿಕ್ಕದಿದ್ದರೆ ತನಗೆ ತಾನೇ ಹರಟೆಹೊಡೆದುಕೊಳ್ಳುವ ಹುಡುಗಿ ಹೇಗೆ ಅಷ್ಟು ಹೊತ್ತು ಸುಮ್ಮನಿದ್ದಾಳು?

ಕೊನೆಗೆ ಆಮೆ ನಿಟ್ಟುಸಿರುಬಿಡುತ್ತಾ ಪ್ರಾರಂಭಿಸಿತು. "ಒಂದಾನೊಂದು ಕಾಲದಲ್ಲಿ ನಾನೊಂದು ಪುಟ್ಟ ಆಮೆಯಾಗಿದ್ದೆ. ಪುಟಾಣಿ ಮಗುವಾಗಿದ್ದೆ." ಅಷ್ಟು ಹೇಳಿ ಮತ್ತೆ ಮೌನವನ್ನವಲಂಬಿಸಿತು. ಮುನಿ ಅಲ್ಲವೆ, ಅದು?

ಎಲ್ಲರೂ ಮಾತಾಡದೆ ತೆಪ್ಪಗಿದ್ದರು. ಮೊಸಳೆ ಮಾತ್ರ ಒಂದೆರಡು ಸಾರಿ 'ಕ್ಗ್ಘ್ರ್' ಎಂಬ ಸದ್ದು ಹೊರಡಿಸಿತು. ಪಾಪಚ್ಚಿಗೆ ಅದರ ಅರ್ಥ ತಿಳಿಯಲಿಲ್ಲ. ಬಹಳ ಬೇಸರಿಕೆಯಾಯಿತು. ತುಂಬಾ ರೇಗಿತು. "ನಾನು ಹೋಗಿ ಬರುತ್ತೇನೆ, ಸ್ವಾಮಿ! ತಮ್ಮ ಕಥೆ ಬಹಳ ಸ್ವಾರಸ್ಯವಾಗಿತ್ತೆಂದು ರಾಣಿಯವರಿಗೆ ತಿಳಿಸುತ್ತೇನೆ" ಎಂದು ಹೇಳಿ ಅಲ್ಲಿಂದ ಹೊರಡೋಣವೆನಿಸಿತು. ಆದರೆ, ಮುದುಕನಿಗೆ ಕೋಪ ಬಂದರೆ ಏನು ಗತಿ? ಮೊಸಳೆ ಏನು ಮಾಡುವುದೋ?" ಎಂಬ ಭಯ ಬೇರೆ........

ಮತ್ತೆ ಆಮೆ ಕಥೆಯನ್ನು ಪ್ರಾರಂಭಿಸಿತು. "ಕೊಂಚ ಬೆಳೆದ ಮೇಲೆ, ಕೈಕಾಲುಗಳು ಗಟ್ಟಿಯಾದ ಮೇಲೆ, ಬೆನ್ನು ಬಲವಾದ ಮೇಲೆ, ನಾವು ಕೆರೆಯ ಪಾಠಶಾಲೆಗೆ ಹೋಗುತ್ತಿದ್ದೆವು. ಅಲ್ಲಿ ನಮಗೆ ಹೊಡೆತವೇ ಹೊಡೆತ! ಆದಕ್ಕೇ ನನ್ನ ಚರ್ಮ ಇಷ್ಟು ದಪ್ಪವಾಗಿರುವುದು........ನಮಗೆ ಪಾಠಶಾಲೆಯಲ್ಲಿ ಓಡುವುದು, ಬಡಿಯುುವುದು, ಕುಣಿತ-ಇವು ಮೂರನ್ನೂ ಕಲಿಸುತ್ತಿದ್ದರು. (ಓದುವುದು, ಬರೆಯುುವುದು, ಗಣಿತ—ಇವು ಮೂರರ ಬದಲಾಗಿ ಆಮೆಗಳಿಗೆ ಇಂಥವುಗಳನ್ನು ಹೇಳಿಕೊಡುತ್ತಿರಬಹುದೆಂದು ಪಾಪಚ್ಚಿ ಊಹಿಸಿದಳು!) ಈಜುವುದನ್ನು ಕಲಿಯಬೇಕಾಗಿದ್ದರೆ ಅದಕ್ಕೆ ಪ್ರತ್ಯೇಕವಾಗಿ ಹಣ ಕೊಡಬೇಕಾಗಿತ್ತು. ಆದ್ದರಿಂದ ಈಜನ್ನು ನನಗೆ ನಮ್ಮ ತಾಯಿಯೇ ಕಲಿಸಿಬಿಟ್ಟಳು........ಕುಣಿತದಲ್ಲಿ, ಮೂಡುವುದು, ಮುಳುಗುವುದು, ನೊಣಾಹಾರ, ಹಾಹಾಕಾರ—ಇವು ನಾಲ್ಕೂ ಪರೀಕ್ಷೆಗಿತ್ತು." (ಕೂಡುವುದು, ಕಳೆಯುುವುದು, ಗುಣಾಕಾರ, ಭಾಗಾಕಾರ?) ''ಹಾಹಾಕಾರ ಎಂದರೆ ಏನು?'' ಎಂದು ಪಾಪಚ್ಚಿ ಕೇಳಿದಳು. ''ನಾಲಗೆಗೆ 'ಹಾ! ಹಾ!' ಎಂದು ಹೇಳುವುದಕ್ಕೆ ಬರುತ್ತದೆಯೇ?'' ಎಂದು ಮೊಸಳೆ ಕೇಳಿತು. ''ಹೂಂ. ಬರುತ್ತೆ" ಎಂದು ಪಾಪಚ್ಚಿ ಹೇಳುತ್ತಲೂ ''ಹಾಗಾದರೆ, ಅದಕ್ಕೆ ಕಾರ ಸೇರಿಸಿದರೆ, ಹಾಹಾಕಾರವಾಯಿತು!''

ಎಂದು ಆಮೆ ಹೇಳಿಬಿಟ್ಟಿತು. ಆಮೇಲೆ ನಮಗೆ ಮೆರವಣಿಗೆ, ವಿಕೃತಿ ವಿಮರ್ಶೆ, ಗೇಲಿ ಬರೆಯಿಸುವುದು ಮುಂತಾದ ಪಾಠಗಳೂ ಇದ್ದುವು. ಪಾಪಚ್ಚಿಗೆ ಇದು ಯಾವುದೂ ಅರ್ಥವಾಗಲಿಲ್ಲ. ಆದ್ದರಿಂದ, ಅವಳು "ನಿಮಗೆ ಶಾಲೆಯಲ್ಲಿ ದಿನವೂ ಎಷ್ಟು ಘಂಟೆ ಪಾಠ?" ಎಂದಳು.

"ಓ! ಕಾಟಕ್ಕೇನು ಕಡಮೆ. ಮೊದಲನೆಯ ದಿನ ಹತ್ತು ಘಂಟೆಗಳ ಕಾಟ; ಎರಡನೆಯ ದಿನ ಒಂಬತ್ತು ಘಂಟೆ ಕಾಟ; ಮೂರನೆಯ ದಿನ ಎಂಟು ಘಂಟೆ; ನಾಲ್ಕನೆಯ ದಿನ ಏಳು; ಐದನೆಯದಕ್ಕೆ ಆರು; ಆರಕ್ಕೈದು; ಹೀಗೆ."

"ಹಾಗಾದರೆ, ಹನ್ನೊಂದನೆಯ ದಿನ? ರಜಪೋ?"

"ಹೌದು. ಪೂರ್ತ ಮಜ."

"ಹನ್ನೆರಡನೆಯ ದಿನ ಏನುಮಾಡುವುದು?"

"ನಾನು ಹನ್ನೆರಡನೆಯ ದಿನದ ಹೊತ್ತಿಗೆ ಪಾಠಶಾಲೆಯನ್ನು ಬಿಟ್ಟು ಬಿಟ್ಟಿದ್ದೆ!"

ಆಮೆಗೆ ತನ್ನಮೇಲೆ ಕೋಪ ಬಂದದ್ದರಿಂದ ಹೀಗೆ ಹೇಳಿರಬೇಕೆಂದು ಪಾಪಚ್ಚಿಗೆ ತೋರಿತು. ಅವಳು, "ಕ್ಷಮಿಸಿ, ಸಾರ್, ಕೋಪಿಸಕೊಳ್ಳ ಬೇಡಿ, ಸಾರ್, ನಾಳೆಯಿಂದ ಹೀಗೆ ಕೇಳುವುದಿಲ್ಲ, ಸಾರ್!" ಎಂದು ಹೇಳಿದಳು. ಅಷ್ಟು ಹೊತ್ತಿಗೆ, ಮೊಸಳೆ, "ಕಾಟದ ವಿಷಯ ಇಷ್ಟು ಸಾಕು, ಸ್ವಾಮಿ! ಇನ್ನು ಆಟದ ವಿಚಾರ ಹೇಳಿ" ಎಂದು ಕೇಳಿಕೊಂಡಿತು.

---

## ಕರಿಯ ಮೀನು ಕುಣಿತ

ಆಟ ಎಂದಾಗ, ಆಮೆಗೆ ಬಹಳ ವ್ಯಸನವಾಯಿತು. ಕಣ್ಣುಗಳ ನ್ನೊರಸಿಕೊಳ್ಳುತ್ತಾ ಉಕ್ಕಿಬರುತ್ತಿದ್ದ ಸಂಕಟವನ್ನು ನುಂಗುತ್ತಾ "ನಿಮಗೆ ಕರಿಯ ಮೀನು ಕುಣಿತವೆಂದರೆ ಎಷ್ಟು ಆನಂದವಾಗಿರುತ್ತದೆ ಎಂದು

ತಿಳಿಯಲವಕಾಶವೇ ಇಲ್ಲ! ಪಾಪ. ಇರಲಿ! ನಾವು ಹೇಳುತ್ತೇವೆ" ಎಂದು ಹೇಳಿತು.

ಪಾಪಚ್ಚಿ—"ಹೌದು. ನನಗೆ ಕರಿಯ ಮೀನೆಂದರೆ ಹೇಗಿರುತ್ತೆ ಅನ್ನುವುದೇ ಗೊತ್ತಿಲ್ಲ."

ಮೊಸಳೆ—"ಚಿಂತೆಯಿಲ್ಲ ಸುಮ್ಮನಿರಿ! ನಾವು ಹೇಳುತ್ತೇವೆ.... ಕರಿಯ ಮೀನು ಕುಣಿತವೆಂದರೆ—ಮೊದಲು ಕೆರೆಯ ಅಂಚಿನ ಮರಳಿನ ಮೇಲೆ ನೆಟ್ಟಗೆ ಒಂದು ಗೆರೆ ಎಳೆಯಬೇಕು."

ಆಮೆ—"ಒಂದು ಸಾಲದು. ಎರಡು ಗೆರೆ ಬೇಕು. ಅದರಲ್ಲಿ, ಹಿಂದಿನ ಗೆರೆಯ ಮೇಲೆ...."

ಮೊಸಳೆ—"ನಾನು ಹೇಳುತ್ತೇನೆ. ಹಿಂದಿನ ಗೆರೆಯ ಮೇಲೆ ಕಪ್ಪೆಗಳು, ಮರಿ ಮೀನುಗಳು, ನೀರು ಹಾವುಗಳು ಇವುಗಳನ್ನು ಹಿಡಿದು ನೆಟ್ಟಗೆ ನಿಲ್ಲಿಸಬೇಕು. ಆಮೇಲೆ...."

ಆಮೆ—"ಇಲ್ಲ, ಆಗಲೇ ಅಲ್ಲ,—ಮಣ್ಣು ಹುಳುಗಳನ್ನೆಲ್ಲಾ ಒದ್ದೋಡಿಸಿದ ಮೇಲೆ...."

ಮೊಸಳೆ—"ಹೂಂ. ಅದನ್ನು ಆಗಲೇ ಹೇಳಬೇಕಾಗಿತ್ತು. ಮರೆತೆ. ಗೆರೆ ಎಳೆಯುವುದಕ್ಕೆ ಮುಂಚೆಯೇ ಮಾಡಬೇಕಾದ ಕೆಲಸ ಅದು. ಇರಲಿ. ಆಮೇಲೆ...."

ಆಮೆ—"ಅವುಗಳನ್ನು ಓಡಿಸುವುದು ಕೊಂಚ ಕಷ್ಟದ ಕೆಲಸ; ತುಂಬ ಹೊತ್ತು ಹಿಡಿಯುತ್ತದೆ."

ಮೊಸಳೆ—"ಅಂತು, ಓಡಿಸಲೇ ಬೇಕು. ಇರಗೊಡಿಸಬಾರದು.... ಅನಂತರ, ಹಿಂದಿನ ಗೆರೆಯ ಮೇಲೆ ನಾವು ನಿಂತುಕೊಂಡು ಮುಂದಿನ ಗೆರೆಗೆ ಕುಪ್ಪಳಿಸುತ್ತ ಬರಬೇಕು."

ಆಮೆ—"ಒಬ್ಬೊಬ್ಬರೂ ಒಂದೊಂದು ಕರಿಯ ಮೀನನ್ನು ಕೈಯಲ್ಲಿ ಹಿಡಿದುಕೊಂಡು ಮುಂದೆ ಬರಬೇಕು!...."

ಮೊಸಳೆ—"ತಾಳಕ್ಕೆ ಸರಿಯಾಗಿ ಹೆಜ್ಜೆಯಿಡಬೇಕು. ಅನಂತರ, ಮುಂದಿನ ಗೆರೆಯಿಂದ ಹಿಂದಿನ ಗೆರೆಗೆ ಒಬ್ಬೊಬ್ಬರೂ ಬೇರೆ ಮೀನುಗಳ ಕೈ ಹಿಡಿದುಕೊಂಡು ಬರಬೇಕು."

ಆಮೆ—"ಹಾಗೆಯೇ ಮೂರು ನಾಲ್ಕು ಸಲ ಹಿಂದಕ್ಕೂ, ಮುಂದಕ್ಕೂ ಬಂದ ಮೇಲೆ...."

ಮೊಸಳೆ—"ಒಬ್ಬೊಬ್ಬರು ಒಂದೊಂದು ಮೀನನ್ನು ಬಾಲಹಿಡಿದೆತ್ತಿ ಕೆರೆಯ ನೀರಿಗೆ ಎಸೆಯಬೇಕು."

ಆಮೆ—"ದೂರ ಬೀಳಬೇಕು....ಮೀನಿನ ಬಾಲ ಅದರ ಬಾಯೊಳಗೆ ಸಿಕ್ಕಿಕೊಳ್ಳಬೇಕು....ತಕ್ಷಣವೇ...."

ಮೊಸಳೆ—"ಅದರ ಹಿಂದೆಯೇ ನಾವೂ ಬೇಗ ಹಾರಬೇಕು. ಈಜುತ್ತಾ ಈಜುತ್ತಾ ಹೋಗಿ ಎಸೆದ ಮೀನನ್ನು ಹಿಡಿಯಬೇಕು.''

ಆಮೆ—"ಹಿಡಿದುಕೊಂಡೇ ನೀರಿನಲ್ಲಿ ಒಂದು ಲಾಗಹಾಕಬೇಕು."

ಮೊಸಳೆ—''ನಮ್ಮ ಬಾಲದ ತುದಿ ನೀರಿನ ಮೇಲೆ ಕಾಣಿಸುವ ಹಾಗೆ.........ಆಮೇಲೆ ದಡಕ್ಕೆ ಈಜಿ ಬಂದು ಮುಂದಿನ ಗೆರೆಯಮೇಲೆ ನಿಲ್ಲಬೇಕು."

ಆಮೆ—''ಇದೇ, ಕರಿಯ ಮೀನ ಕುಣಿತದಲ್ಲಿ ಮೊದಲನೆಯ ತಾನ."

ಹೀಗೆ, ಕುಣಿತವನ್ನು ವಿವರಿಸುವಾಗ ಎರಡು ಪ್ರಾಣಿಗಳೂ ಬಹಳ ಉತ್ಸಾಹದಿಂದ ತಮ್ಮ ಹಳೆಯ ಪಾಠಶಾಲೆಯನ್ನೂ ಅಲ್ಲಿ ಕಳೆದ ಬಾಲ್ಯವನ್ನೂ ನೆನೆದು ಮತ್ತೊಮ್ಮೆ ಸುಖಪಡುತ್ತಿದ್ದುವು. ಆದರೆ, ಹೇಳಿ ಮುಗಿದ ಕೂಡಲೆ ಆಮೆ ಯಥಾಪ್ರಕಾರ ಹಿಂದಿನ ಹಾಗೆಯೇ ಅಳುತ್ತಾ ಕುಳಿತುಕೊಂಡಿತು.

ಪಾಪಚ್ಚಿ (ಸಂತೋಷದಿಂದ)—''ಕರಿಯ ಮೀನು ಕುಣಿತ ನೋಡುವುದಕ್ಕೂ ಆಡುವುದಕ್ಕೂ ತುಂಬಾ ಚೆನ್ನಾಗಿದ್ದಿರಬೇಕು.''

ಇಬ್ಬರೂ—"ನೋಡಬೇಕೇನು?"

ಆಮೆ—"ಮೊಸಳಪ್ಪನವರೇ! ಬನ್ನಿ! ಮೊದಲನೆಯ ವರಸೆಯನ್ನು ಆಡಿ ತೋರಿಸೋಣ."

ಮೊಸಳೆ—"ಹೂಂ. ಕರಿಯ ಮೀನಿಲ್ಲದಿದ್ದರೂ ಚಿಂತೆಯಿಲ್ಲ. ಆದರೆ, ಹಾಡಂತೂ ಇದ್ದೇ ಇರಬೇಕು"

ಆಮೆ—"ಯಾರು ಹಾಡುವುದು?"

ಮೊಸಳೆ—"ನೀವೇ ಹಾಡು ಹೇಳಿ. ನನಗೆ ನಿಮಗಿಂತ ನೆಗಡಿ. ಶಾರೀರ ಕೆಟ್ಟಿದೆ. ಮಾತುಗಳೂ ಕೂಡ ಅಲ್ಲಲ್ಲಿ ಮರೆತುಹೋಗಿದೆ."

ಆಮೆ—"ಸರಿ! ಗೆರೆ ಎಳೆಯಿರಿ!"

ಆಮೆ ಹಾಡುವುದಕ್ಕೆ ಪ್ರಾರಂಭಮಾಡಿತು. ಮೊಸಳೆ ಕುಣಿಯಿತು.

ಆಮೆಗಳೇ! ಮೊಸಳೆಗಳೇ! ಜಲಜರಾದ ಪ್ರಾಣಿಗಳೇ!
ಕಪ್ಪೆಗಳೇ! ಮೀನುಗಳೇ! ಮಲಜರಾದ ಜಂತುಗಳೇ!
ಬೇಗನೇಳಿ! ತಾಳಬೇಡಿ! ಮೀನಕುಣಿತ ಕುಣಿಯುವಾ!
ಮರಳಿನಲಿ ಹೊನಲಿನಲಿ ಲೀನರಾಗಿ ನಲಿಯುವಾ!
ಬರದಿರದಿರಿ, ಬರದಿರದಿರಿ! ಬರದಿರದಿರಿ, ಬನ್ನಿರಿ!
ಬರದಿರದಿರಿ, ಬರದಿರದಿರಿ! ಬರದಿರದಿರಿ, ಬನ್ನಿರಿ!!
ನೊರೆಯ ಹಾಲಿನಂದದಲಿ ಕೆರೆಯ ತಣ್ಣ ನೀರಿನಲಿ
ಮುಳುಗಿ ಮುಳುಗಿ ಸುಳಿಯುವಾ! ಗುಳುಂಗುಳುಂ ಮೀಯುವಾ!
ಆಮೆ ಮೊಸಳೆ ಹೆಗಲಿನಲಿ, ಮಿಣುಕು ಹುಳದ ಬೆಳಕಿನಲಿ
ಭಯವ ಬಿಟ್ಟು ನೆಗೆಯುವಾ! ಮುದದಿ ನಕ್ಕು ಮುಳುಗುವಾ!
ಬರದಿರದಿರಿ, ಬರದಿರದಿರಿ! ಬರದಿರದಿರಿ, ಬನ್ನಿರಿ!
ಬರದಿರದಿರಿ, ಬರದಿರದಿರಿ! ಬರದಿರದಿರಿ, ಬನ್ನಿರಿ!!

ಈ ಹಾಡನ್ನು ಕೇಳಿ ಪಾಪಚ್ಚಿಗೆ ಪರಮಾನಂದವಾಯಿತು. "ನಾನಿದನ್ನು ನನ್ನ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಬೇಕು" ಎಂದಳು. "ಪುಸ್ತಕ ಯಾಕೆ? ಮಸ್ತಕದಲ್ಲೇ ಕೊರೆದಿಟ್ಟುಕೊ" ಎಂದು ಆಮೆ ಹೇಳಿತು. ಮೊಸಳೆಗೆ, ಪಾಪ, ಬಹಳ ಆಯಾಸ. ಕುಣಿತದ ರೀತಿಯನ್ನು ತೋರಿಸುವಾಗ ಹಿಂದಕ್ಕೂ ಮುಂದಕ್ಕೂ ಹಾರಿ ಹಾರಿ ಬೆನ್ನುತುಂಬಾ ಬೆವರುತ್ತಿತ್ತು.

ಆಗ, ಆನೆ ಪಾಪಚ್ಚಿಯನ್ನು ಕುರಿತು, "ಈಗ ನಿಮ್ಮ ಕಥೆಯನ್ನು ನಮಗೆ ಕೊಂಚ ಹೇಳಿ!" ಎಂದು ಕೇಳಿಕೊಂಡಿತು. ಮೊಸಳೆಯೂ ಹತ್ತಿರ ಬಂತು. ಕುಳಿತುಕೊಂಡಿತು. ತನ್ನ ಮೇಲಿನ ಪ್ರೀತಿಯಿಂದ ಈ ಮುದಿತನದಲ್ಲೂ ಇಷ್ಟು ಚೆನ್ನಾಗಿ ನೆಲದ ಮೇಲೆ ಕುಣಿದು ಹಾಡಿ ತೋರಿಸಿದ ಆ ಎರಡು ನೀರು ಪ್ರಾಣಿಗಳ ಮಾತನ್ನು ನಿರಾಕರಿಸಲು ಪಾಪಚ್ಚಿಯ ಮನಸ್ಸು ಒಪ್ಪಲಿಲ್ಲ. ತಾನು ಮೊಲದ ಹಿಂದೆ ಬಿಲದೊಳಗೆ ಧುಮುಕಿದ್ದು ಮೊದಲುಗೊಂಡು ನಡೆದ ಸಂಗತಿಯೆಲ್ಲವನ್ನೂ ಒಂದೂ ಬಿಡದೆ ಹೇಳತೊಡಗಿದಳು. ಮೊದ ಮೊದಲು ಅವಳಿಗೆ ಕೊಂಚ ಹೆದರಿಕೆ ಯಾಯಿತು. ಏಕೆಂದರೆ, ಆನೆಯೂ ಮೊಸಳೆಯೂ ಕಥೆ ಕೇಳುತ್ತಾ ಕೇಳುತ್ತಾ ಹತ್ತಿರ ಹತ್ತಿರಕ್ಕೆ ಸರಿಯುತ್ತಿದ್ದುವು. ಅದೂ ಅಲ್ಲದೆ, ಕಥೆ ಮುಂದು ಮುಂದಕ್ಕೆ ಸಾಗಿದ ಹಾಗೆಲ್ಲಾ ಇಬ್ಬರೂ ಬಾಯನ್ನು ಹೆಚ್ಚು ಹೆಚ್ಚಾಗಿ ತೆರೆಯುತ್ತಾ ಬಂದುವು.

ಹಸುರು ಹುಳುವಿನ ಹೇಳಿಕೆಯ ಮೇರೆ ತಾನು ಗೋವಿನ ಹಾಡಿನ ಪಾಠ ಒಪ್ಪಿಸಿದ್ದನ್ನು ಪಾಪಚ್ಚಿ ಪ್ರಸ್ತಾಪಿಸಿದಾಗ ಅವರು "ನಮಗೂ ಆ ಹಾಡನ್ನು ಕೇಳಬೇಕೆಂದು ಆಸೆಯಾಗುತ್ತಿದೆಯಲ್ಲಾ!" ಎಂದರು. ಹಿಂದೆ ಹೇಳಿದಂತೆಯೇ ಪಾಪಚ್ಚಿ ಈಗಲೂ ತಪ್ಪು ತಪ್ಪಾಗಿಯೇ ಹೇಳಿ ಬಿಟ್ಟಳು. ಅವಳಿಗೆ ಯಾಕೋ ಅಲ್ಲಿ ಯಾವ ಪದ್ಯವನ್ನೂ ಸರಿಯಾಗಿ ಹೇಳಲಾಗಲಿಲ್ಲ.—

ತಾತ ಕರೆದಾ ಧ್ವನಿಯ ಕೇಳಿ
ಎಲ್ಲ ಹುಡುಗರು ಕೆರೆಗೆ ಬಿದ್ದು
ಮೂತಿಯನ್ನು ಮರೆಸಿಕೊಂಡು
ಅಲ್ಲಿ ಮುಳುಗಲು ಭಯದಲಿ

ಎಂದು ಹೇಳಿ, ನಾಚಿಕೆಯಿಂದ ಪಾಪಚ್ಚಿ ಅಲ್ಲಿಗೇ ಪದ್ಯವನ್ನು ಮುಗಿಸಿ ಬಿಟ್ಟಳು. "ಇದೇನಿದು? ಬಹಳ ವಿಚಿತ್ರವಾಗಿದೆ. ನಾವು ಕಲಿತ ರೀತಿಯೇ ಬೇರೆ. ನೀವು ಹೇಳುವುದೇ ಬೇರೆ. ಮೂತಿ ಮರೆಸುವುದು ನಾಚಿಕೆ

ಗೇಡು. ಈಚೀಚೆಗೆ ನರಜನ್ಮ ಇಷ್ಟು ಬದಲಾಗಿದೆಯೆ? ಇನ್ನೊಂದು ಪದ್ಯ ಹೇಳಿ ನೋಡೋಣ. ನಿಮಗೆ ಮಾಂಬಿಯ ಕಥೆ ಬಾಯಿಗೆ ಬರುತ್ತೋ?'' ಎಂದು ಆನೆ ಕೇಳಿತು. ''ಇಲ್ಲ. ಆದರೆ ಬೊಮ್ಮನ ಹಳ್ಳಿಯ ಸುಂದರಿ ಜೋಗಿ ಹೇಳಲೇ?'' ಎಂದು ಪಾಪಚ್ಚಿ ಕೇಳಿದಳು. "ಆಗಬಹುದು" ಎಂದು ಮೊಸಳೆ ಹೇಳಿತು.

''ಗಂಗೆಯ ನೀರಿನ ಒಳಗಡೆಯಲ್ಲಿ''

ಯಾಕೋ, ಏನೋ, ಕರಿಯ ಮೀನು ಕುಣಿತದ ವಿಷಯ ಕೇಳಿದಾಗಿನಿಂದ ಕೆರೆ, ನೀರು, ಮುಳುಗುವುದು, ಇವೇ ಅವಳ ತಲೆಯಲ್ಲಿ ತುಂಬಿಹೋಗಿತ್ತು ಅಂತ ಕಾಣುತ್ತೆ.

"ಗಂಗೆಯ ನೀರಿನ ಒಳಗಡೆಯಲ್ಲಿ
ಹಿಂದಲ್ಲಿದ್ದುದು ಮೀನಿನ ಸೇನೆ
ಅಲ್ಲೇನಾನೆಯ ಕಾಟವೆ ಕಾಟ
ಅಲ್ಲಿಯ ಮೀನ್‌ಗಳ ಗತಿ ಗೋಳಾಟ
ಆನೆಯು ಬಾಲವ ನೀಡುತ ಬೇಗ
ಹಿಂಡಿತು ಮೀನಿನ ಹಳದಿಯ ಮೂಗ........
..................................................''

ಈ ಪದ್ಯವನ್ನು ಕೇಳುತ್ತಲೂ ಆನೆಗೆ ಬಹಳ ಕೋಪ ಬಂತು. ''ಸಾಕು! ನಿಲ್ಲಿಸು. ಏನು ಹುಚ್ಚುಗಿಚ್ಚು ಹಿಡಿದಿದೆಯೋ? ಬಾಲ ನೀಡಿ ನಾನು ಮೀನಿನ ಮೂಗನ್ನು ಹಿಂಡುವುದೆಂದರೇನು? ಶುದ್ಧ ಅಸಂಬದ್ಧ! ತೀರ ಅಸಾಧ್ಯ!'' ಎಂದು ತುಂಬ ರೇಗಿತು. ಮೊಸಳೆಗೆ ಮಾತ್ರ ಇನ್ನೂ ಅಷ್ಟು ಕೋಪ ಬಂದಿರಲಿಲ್ಲ. ಕೊಂಚ ಕನಿಕರ ಉಳಿದಿತ್ತು. ''ಎಲ್ಲಿ, ಅಮ್ಮ, 'ಗಜವದನ ಹೇರಂಬ' ಹೇಳಿಬಿಡು, ಬೇಗ ........ ದೇವರ ಸ್ತೋತ್ರ.... ಎಂದಿತು. ಪಾಪಚ್ಚಿ ಎದ್ದು ನಿಂತು ಕೈಮುಗಿದುಕೊಂಡು, ''ಜಗದವನ ಹೇ ಜಂಬ'' ಎಂದಳು. ಮೊಸಳೆಗೂ ಕೋಪದಿಂದ ಕಣ್ಣು ಕೆಂಪ ಗಾಯಿತು.

ದೇವರ ದಯೆಯಿಂದ ಆಗ ಯಾರೋ ಗಟ್ಟಿಯಾಗಿ "ಎಲ್ಲರೂ ಬನ್ನಿ! ವಿಚಾರಣೆ ಪ್ರಾರಂಭ!" ಎಂದು ಕೂಗಿದರು. ಮೊಸಳೆ ಪಾಪಚ್ಚಿಯನ್ನೂ ಎಳೆದುಕೊಂಡು, ಆಮೆ ಸಂನ್ಯಾಸಿಗೆ "ಹೋಗಿಬರುತ್ತೇನೆ" ಎಂದು ಕೂಡ ಹೇಳದೆ, ಒಂದೇ ಸಮನಾಗಿ ಆ ಕೂಗು ಹೊರಟ ಕಡೆಗೆ ಹರಿಯಿತು.

---

## ಕಡುಬು ಕದ್ದವರು ಯಾರು?

ವಿಚಾರಣೆಗೆಂದು ನ್ಯಾಯಾಸ್ಥಾನವನ್ನು ಪ್ರತ್ಯೇಕವಾಗಿ ಏರ್ಪಾಟು ಮಾಡಿದ್ದರು. ರಾಜನೂ ರಾಣಿಯೂ ಪಕ್ಕಪಕ್ಕದಲ್ಲಿಯೇ ಸಿಂಹಾಸನಗಳ ಮೇಲೆ ಆಗಲೇ ಕುಳಿತುಬಿಟ್ಟಿದ್ದರು. ಅವರ ಸುತ್ತ ದೊಡ್ಡದೊಂದು ಸಭೆ ಸೇರಿತ್ತು. ಸಣ್ಣ ಹಕ್ಕಿಗಳು, ಗಿಡಗಗಳು, ಮೃಗಗಳು, ಹುಳುಗಳು, ಎಲ್ಲವೂ ನೆರೆದಿತ್ತು. ಸಭಾಮಂಟಪವನ್ನು ಬಳಸಿ ಸಿಪಾಯಿಗಳೂ ಅಧಿಕಾರಿಗಳೂ ಬಗ್ಗಿ ನಿಂತಿದ್ದರು. ಒಂದು ಕಟ್ಟು ಇಸ್ಪೀಟಿನಲ್ಲಿರುವ ಚೀಟಿಗಳೆಲ್ಲವೂ ಸಾಲಾಗಿ ನಿಂತಹಾಗೆ ಅವರು ಕಾಣಿಸಿದರು. ಸನ್ನಿಧಾನದಲ್ಲಿಯೇ, ಕೊಂಚ ದೂರವಾಗಿ, ಸಿಂಹಾಸನಗಳ ಎದುರು ಮಂತ್ರಿಯನ್ನು ಹಿಡಿದು ನಿಲ್ಲಿಸಿದ್ದರು. ಅವನ ಎಡಬಲಗಳಲ್ಲಿ ಇಬ್ಬರು ಯೋಧರು ಕತ್ತಿಯನ್ನೆತ್ತಿ ಹಿಡಿದು ಕಾವಲಿದ್ದರು. ಮಂತ್ರಿಯ ಕೈಗೆ ಬೇಡಿಹಾಕಿತ್ತು. ರಾಜನ ಸಿಂಹಾಸನದ ಹಿಂದೆ ಹತ್ತಿರದಲ್ಲಿಯೇ ಬಿಳಿಯ ಮೊಲ ನಿಂತಿತ್ತು. ಅದರ ಒಂದು ಕೈಯಲ್ಲಿ ದೊಡ್ಡದೊಂದು ತುತ್ತೂರಿ, ಇನ್ನೊಂದರಲ್ಲಿ ದಪ್ಪ ಬಾದಾಮಿ ಕಾಗದದ ಸುರುಳಿ!

ಮಂತ್ರಿಯ ಮುಂಭಾಗದಲ್ಲಿ, ಸಭಾ ಮಧ್ಯದಲ್ಲಿ, ಮೇಜಿನ ಮೇಲೆ ಎಲ್ಲರಿಗೂ ಕಾಣುವ ಹಾಗೆ ಒಂದು ತಟ್ಟೆಯನ್ನಿರಿಸಿ, ಅದರಲ್ಲಿ ಎಂಟೊಂಬತ್ತು ಹೂರ್ಣದ ಕಡುಬುಗಳನ್ನಿಟ್ಟಿದ್ದರು. "ವಿಚಾರಣೆಯನ್ನು ಬೇಗ ಬೇಗ ಮುಗಿಸಿ ತಿನಿಸನ್ನು ಹಂಚಿದರೆ ವಾಸಿ" ಎಂದು ಪಾಪಚ್ಚಿ ಮೊಸಳೆಯ ಕಿವಿಯಲ್ಲಿ ಹೇಳಿದಳು. ಆದರೆ, ಅದು ಅವಳ ಮಾತಿಗೆ

ಕಿವಿಗೊಡಲಿಲ್ಲ. ಏಕೆಂದರೆ, ರಾಣಿ ಆಗ ಅವರ ಕಡೆಗೇ ನೋಡು ತ್ತಿದ್ದಳು.

ಎಲ್ಲರೂ ವಿಚಾರಣೆಗೆ ಅಣಿಮಾಡುತ್ತಿದ್ದರು. ಆದ್ದರಿಂದ, ಪಾಪಚ್ಚಿ ನ್ಯಾಯಾಸ್ಥಾನವನ್ನು ಸಾವಕಾಶವಾಗಿ ಒಂದು ಸುತ್ತು ನೋಡಿದಳು.

ವಕೀಲರುಗಳು ಹಾಕಿಕೊಳ್ಳುವ ಕಪ್ಪು ಬಣ್ಣದ, ದೊಗಲು ತೋಳಿನ, ಉದ್ದವಾದ ಅಂಗಿಯನ್ನು ರಾಜನು ಧರಿಸಿದ್ದನು. ಅವನ ಎಡಗಡೆಯಲ್ಲಿ ಹನ್ನೆರಡು ಕುರ್ಚಿಗಳನ್ನು ಸಾಲಾಗಿ ಜೋಡಿಸಿದ್ದರು. ಅವುಗಳಲ್ಲೊಂದೊಂದರಲ್ಲಿಯೂ ಒಂದೊಂದು ಪ್ರಾಣಿ ಆಗಲೇ ಕುಳಿತಿತ್ತು. ಎಲ್ಲರೂ ಗಂಭೀರವಾಗಿ, ತಮಗೂ ಯಾವುದೋ ದೊಡ್ಡ ಅಧಿಕಾರವಿರು ವಂತೆ ಪೀಠಸ್ಥರಾಗಿದ್ದರು. ಅವರು ಯಾರೆಂದು ಪಾಪಚ್ಚಿ ಮೊಸಳೆಯನ್ನು ವಿಚಾರಿಸಿದಳು. "ಅವರಿಗೆ ಪಂಚಾಯತರೆಂದು ಹೆಸರು. ನಿಮ್ಮೂರಲ್ಲಿ ಇಂತಹವರಿಲ್ಲವೆಂದು ಕಾಣುತ್ತೆ. ನಮ್ಮೂರಿಗೂ ಹೊಸದು. ನಮ್ಮ ರಾಜನು ಈಗ ನಾಲ್ಕೈದು ವರ್ಷಗಳಲ್ಲಿ ಹೊಸದಾಗಿ ಈ ಪಂಚಾಯತರನ್ನು ಸ್ಥಾಪಿಸಿದನು. ಪಶ್ಚಿಮ ದೇಶಗಳಲ್ಲಿ ಅಪರಾಧಿಯನ್ನು ವಿಚಾರಣೆಮಾಡು ವಾಗ, ನ್ಯಾಯಾಧೀಶನ ಸಹಾಯಕ್ಕಾಗಿ ಹನ್ನೆರಡು ಜನ ದೊಡ್ಡ ಮನುಷ್ಯ ರನ್ನು ಬರಮಾಡಿಕೊಳ್ಳುವರಂತೆ. ಅಪರಾಧಿ ತಪ್ಪಿತಸ್ಥನೋ ಅಲ್ಲವೋ ಎಂದು ಅವರು ತೀರ್ಮಾನಿಸುವರು. ಅನಂತರ, ರಾಜನು ಅವನಿಗೆ ದಂಡನೆಯನ್ನು ವಿಧಿಸುತ್ತಾನೆ, ಅಷ್ಟೆ! ಇವರೆಲ್ಲರೂ ಪಂಚಾಯತರು" ಎಂದು ಮೊಸಳೆ ಪಾಪಚ್ಚಿಗೆ ತಿಳಿಯಹೇಳಿತು.

ಅವರೆಲ್ಲರಿಗೂ ಒಂದೊಂದು ಸ್ಲೇಟನ್ನೂ ಒಂದೊಂದು ಬಳಪದ ಚೂರನ್ನೂ ಕೊಟ್ಟಿದ್ದರು. ಆಗಲೇ ಅವರು ಏನೇನೋ ಬರೆಯುತ್ತಿದ್ದರು. "ಪಾಪ! ತಮ್ಮ ತಮ್ಮ ಹೆಸರುಗಳನ್ನು ಮೊದಲು ಬರೆದಿಡುತ್ತಿದಾರೆ. ಇಲ್ಲದಿದ್ದರೆ, ವಿಚಾರಣೆ ಮುಗಿಯುವುದರೊಳಗಾಗಿ ಅವರಿಗೆ ತಮ್ಮ ಹೆಸರು ಮರೆತುಹೋಗುವ ಸಂಭವವುಂಟು. ಆಮೇಲೆ, ತಾವು ಯಾರೆಂದು ಪತ್ತೆ ಮಾಡುವುದು ಅವರಿಗೇ ಕಷ್ಟವಾಗುತ್ತೆ" ಎಂದು ಮೊಸಳೆ ಹೇಳಿತು. "ಥೂ! ಮಂಕು ಪಟಾಲಂ" ಎಂದು ಪಾಪಚ್ಚಿ ಗಟ್ಟಿಯಾಗಿ ಹೇಳಿದಳು.

ಅವರಿಗೆ ಕೇಳಿಸಿದರೂ ಕೇಳಿಸಲಿ ಎಂದು ಅವಳು ಕೊಂಚ ಗಟ್ಟಿಯಾಗಿಯೆ ಹೇಳಿದಳು. ಆದರೆ, ಮೊಲವು "ಆಸ್ಥಾನದಲ್ಲಿ ಯಾರೂ ಅಪ್ಪಣೆಯಿಲ್ಲದೆ ಮಾತಾಡಕೂಡದು! ಎಲ್ಲರೂ ಕೈಕಟ್ಟಿ ಬಾಯಿಮುಚ್ಚಿಕೊಂಡಿರಬೇಕು" ಎಂದು ಸಾರಿತು. ರಾಜನೂ ಕನ್ನಡಕವನ್ನು ಮೂಗಿನ ಮೇಲೆ ಏರಿಸಿ ಮಾತನಾಡಿದವರಾರೆಂದು ಸುತ್ತಲೂ ನೋಡಿದನು. ರಾಣಿ ಕಿಡಿ ಹಾರಿ ಸುತ್ತ ಕೆಂಚಗಾದಳು.

ಪಾಪಚ್ಚಿ ಪಂಚಾಯತರ ಬೆನ್ನ ಹಿಂದೆ ಮರೆಯಾಗಿ ನಿಂತಳು. ಅವರು ಬರೆಯುತ್ತಿರುವುದು ಏನೆಂದು ಇಣಿಕಿನೋಡಿದಳು. ಒಬ್ಬೊಬ್ಬರು ಒಂದೊಂದು ಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದರು. ಹಲ್ಲಿಯ ಲಿಪಿಯೇ ಬೇರೆ; ಅಳಿಲ ಲಿಪಿಯೇ ಬೇರೆ. ಇಬ್ಬರು ಮಾತ್ರ ಕನ್ನಡದಲ್ಲಿ ಬರೆಯುತ್ತಿದ್ದರು. ಅವರಲ್ಲೊಬ್ಬರು ಪಾಪಚ್ಚಿ ಹೇಳಿದ ಮಾತನ್ನು "ಮಂಗ ಪಟಾಲಂ" ಎಂದೂ ಇನ್ನೊಬ್ಬರು "ಮಂಕು ವಠಾರಂ" ಎಂದೂ ಬರೆದಿಡುತ್ತಿದ್ದರು!

ಒಬ್ಬ ಪಂಚಾಯತನು ಸ್ಲೇಟಿನ ಮೇಲೆ ಬಳಪದಿಂದ ಬರೆಯುವಾಗ ತುಂಬಾ ಗಿಚಿಗಿಚಿ ಧ್ವನಿಯಾಗುತ್ತಿತ್ತು. ಪಾಪಚ್ಚಿಗೆ ಯಾವಾಗಲೂ ಆ ಧ್ವನಿ ಕೇಳಿದರೆ ರೇಗುವುದು. ಶಾಮು ಯಾವಾಗಲಾದರೂ ಕೀಟಲೆಗೋಸ್ಕರ ಆ ಸದ್ದನ್ನು ಮಾಡಿ ಅವಳನ್ನು ರೇಗಿಸುವುದುಂಟು. "ಇಲ್ಲಿ ಬಂದರೂ ಇದೇ ಗೋಳು" ಎಂದು ಹೇಳುತ್ತಾ ಅವಳು ಆ ಪಂಚಾಯತನ ಹಿಂದೆ ಹೋಗಿ ಸದ್ದುಮಾಡದೆ ಅದರ ಬಳಪವನ್ನು ಕಿತ್ತು ಎಸೆದುಬಿಟ್ಟಳು. ಪಾಪ! ಅದು ಎತ್ತೆತ್ತಲೋ ನೋಡಿ ಏನೂ ತೋಚದೆ, ರಾಣಿಯ ಶಿಕ್ಷೆಗೆ ಹೆದರಿ, ತನ್ನ ಬೆರಳಿನಿಂದಲೇ ಸ್ಲೇಟಿನ ಮೇಲೆ ಸದ್ದಿಲ್ಲದೆ ಬರೆಯಲು ಪ್ರಾರಂಭಿಸಿತು.

"ಗುಮಾಸ್ತರೇ! ಫಿರ್ಯಾದನ್ನು ಓದಿ!'' ಎಂದು ರಾಜನು ಮೊಲವನ್ನು ಕರೆದು ಅಪ್ಪಣೆಮಾಡಿದನು. ಮೊಲ ಮೊದಲು ತುತ್ತೂರಿಯನ್ನು ಬಾಯಿಗೆ ಹಿಡಿದು, "ತು...... ತು...... ತೂ, ಥೂ" ಎಂದು ಮೂರುಸಲ ಊದಿ, ಅನಂತರ,

ಇಪ್ಪೀಟ್ರಾಣಿ ಮಾಡಿದ ರುಚಿ ರುಚಿ
ಹೂರ್ಣದ ಕಡುಬುಗಳೇಳೆಂಟು
ಮಂತ್ರಿಯು ಜೇಬಿಗೆ ಸೇರಿಸಿಕೊಂಡ ;
ಬಂದೇ ಬಂತು ವಾರಂಟು

ಎಂದು ಕೂಗಿ ಹೇಳಿತು. ರಾಜನು ಸರ್‍ರನೆ ಪಂಚಾಯತರ ಕಡೆ ತಿರುಗಿ, "ಮಂತ್ರಿ ತಪ್ಪಿತಸ್ಥನೋ ಅಲ್ಲವೋ?" ಎಂದು ಕೇಳಿದನು. ಆಗ ಮೊಲ "ಮಹಾಸ್ವಾಮಿ! ದುಡುಕಬೇಡಿ. ಇನ್ನೂ ಅನೇಕ ಶಾಸ್ತ್ರಗಳು ನಡೆಯ ಬೇಕಾಗಿವೆ. ಸಾಕ್ಷಿಗಳು ಬೇರೆ ಸಾಲಾಗಿ ಕಾದು ತೂಕಡಿಸುತ್ತಿದಾರೆ" ಎಂದು ಹೇಳಿತು.

"ಹಾಗಾದರೆ ಮೊದಲನೆಯ ಸಾಕ್ಷಿಯನ್ನು ಎಬ್ಬಿಸಿರಿ!" ಎಂದು ರಾಜನು ಹೇಳಲು, ಮೊಲ ಮೂರು ಸಲ ತುತ್ತೂರಿಯನ್ನೂದಿ, "ಮೊದಲ ನೆಯ ಸಾಕ್ಷಿ— ಸಂಕಟರಮಣಪ್ಪಾ, ಸಂಕಟರಮಣಪ್ಪಾ, ಸಂಕಟ ರಮಣಪ್ಪಾ," ಎಂದು ಕೂಗಿತು.

ಟೋಪಿಯಂಗಡಿಯವನೇ ಸಂಕಟರಮಣಪ್ಪಾ! ಆತನೇ ಮೊದಲ ನೆಯ ಸಾಕ್ಷಿ. ಅವನು ಕೈಯಲ್ಲಿ ಒಂದು ಲೋಟ ಕಾಫಿಯನ್ನೂ ಬಾಯಲ್ಲಿ ಅರ್ಧ ದೋಸೆಯನ್ನೂ ಹಿಡಿದುಕೊಂಡೇ ನ್ಯಾಯಸ್ಥಾನವನ್ನು ಪ್ರವೇಶಿಸಿ ದನು. ಅವನ ಹಿಂದೆಯೇ, ಅವನ ಪ್ರಿಯಮಿತ್ರನಾದ ಅಳಿಲು ಎಮ್ಮೆ ಕರುವಿನ ಮೇಲೆ ಸವಾರಿಮಾಡುತ್ತಾ ಒಳಗೆ ನುಗ್ಗಿತು.

ಟೋಪಿಯವನು, "ಮಹಾಸ್ವಾಮಿಯವರಿಗೆ ಅಡ್ಡಬಿದ್ದೆ. ಬೇಗ ಬರಬೇಕೆಂದು ಪೋಲೀಸಪ್ಪನವರು ಹೇಳಿದರು. ತಿಂದು ಮುಗಿದಿರಲಿಲ್ಲ. ಹಾಗೆಯೇ ಬಂದುಬಿಟ್ಟೆ" ಎಂದು ಹೇಳಿದನು. ರಾಜನು, "ಯಾವಾಗ ನೀನು ತಿನ್ನುವುದಕ್ಕೆ ಕುಳಿತದ್ದು?" ಎಂದು ಕೇಳಿದಾಗ, "ಹದಿಮೂರಕ್ಕೆ ಮಹಾಸ್ವಾಮಿ!" ಎಂದು ಗಡಿಯಾರ ನೋಡಿ ಉತ್ತರ ಕೊಟ್ಟನು. "ಅಲ್ಲ, ಮಹಾಸ್ವಾಮಿ! ಶುದ್ಧ ಸುಳ್ಳು. ಅವನು ಪ್ರಾರಂಭಿಸಿದ್ದು ಇಪ್ಪತ್ತನಾಲ್ಕಕ್ಕೆ, ಮಹಾಸ್ವಾಮಿ!" ಎಂದು ಅಳಿಲು ಹೇಳಿತು.

"ಅದನ್ನು ಬರೆದುಕೊಳ್ಳಿ! ಆಹಾ! ಬಹಳ ಮುಖ್ಯವಾದ ರುಜು ವಾತು ಸಿಕ್ಕಿದಹಾಗಾಯಿತು!" ಎಂದು ರಾಜನು ಪಂಚಾಯತರಿಗೆ

ಹೇಳಿದನು. ಕೂಡಲೇ, ಅವರೆಲ್ಲರೂ ಎರಡು ಅಂಕಿಗಳನ್ನೂ ಬರೆದು, ಕೂಡಿ, ಒಟ್ಟನ್ನು ಬೇಗನೆ ರೂಪಾಯಿ, ಆಣೆ, ಪೈಯಾಗಿ ಮಾಡಿಟ್ಟರು. ಬಲು ಜಾಣರು. ಗಣಿತ ಅಂದರೆ ಅವರಿಗೆ ಗುಣಿ ತೋಡಿದ ಹಾಗೆ—

13<br>
24<br>
———<br>
16) 37 (1 ರೂಪಾಯಿ<br>
16<br>
———<br>
12) 21 (1 ಆಣೆ<br>
12<br>
———<br>
9 ಪೈ

ರೂ. ಆ. ಪೈ<br>
1—1—9 ಉತ್ತರ.

ಸಂಕಟರಮಣಪ್ಪನವರ ತಲೆಯ ಮೇಲಿದ್ದ ಟೋಪಿಯ ಗೋಪುರವನ್ನು ನೋಡಿ, ಮೊಲವು, "ಆಸ್ಥಾನದಲ್ಲೂ ಇಂಥಾ ಅನಾಚಾರವೇ? ತೆಗಿ ಟೋಪಿ!" ಎಂದು ಆಜ್ಞಾಪಿಸಿತು. "ಅವು ನನ್ನವಲ್ಲ, ಮಹಾಸ್ವಾಮಿ!" ಎಂದು ಟೋಪಿಯವನು ವಿನಯದಿಂದ ಹೇಳಿದನು. ಹುಚ್ಚಿನ ಯಾವ ಚಿಹ್ನೆಯೂ ಆಗ ಅವನ ನಡೆ ನುಡಿಗಳಲ್ಲಿರಲಿಲ್ಲ. ಆದ್ದರಿಂದ, ಇದನ್ನು ಕೇಳಿದ ಕೂಡಲೇ ರಾಜನು ಕುಪಿತನಾಗಿ, "ಓಹೋ! ತಿಳಿಯಿತು. ಕದ್ದಮಾಲಿರಬೇಕು!" ಎಂದು ಕೂಗಿದನು. ಪಂಚಾಯತರೆಲ್ಲರೂ ಅದನ್ನು ಜಾಗ್ರತೆಯಾಗಿ ಬರೆದುಕೊಂಡರು. ಟೋಪಿಯವನು, "ಕದ್ದ ಮಾಲಲ್ಲ, ಬುದ್ಧಿ. ನನಗೆ ಟೋಪಿಯೇ ಇಲ್ಲ. ಮಾರುವುದಕ್ಕೆ ತಲೆಯ ಮೇಲಿಟ್ಟುಕೊಂಡು ಬೀದಿ ಬೀದಿ ತಿರುಗುತ್ತಿದೇನೆ, ಬುದ್ಧಿ" ಎಂದು ಹೇಳಿ, ರಾಣಿಯ ಕಡೆ ತಿರುಗಿದನು. ಇದುವರೆಗೂ ರಾಣಿ ಕೋಪಿಸಿಕೊಳ್ಳದೆ ಸುಮ್ಮನಿದ್ದುದೇ ಆಶ್ಚರ್ಯ. ಅವಳು ತನ್ನ ಗಂಡನ ಕನ್ನಡಕವನ್ನು ಎರವಲು ಪಡೆದು ಮೂಗಿನ ಮೇಲಿರಿಸಿಕೊಂಡು ಟೋಪಿಯವನನ್ನೇ ದುರು ದುರನೆ ದಿಟ್ಟಿಸಿದಳು. ಪಾಪ! ಅವನಿಗೆ ತುಂಬಾ

ಹೆದರಿಕೆ ಹತ್ತಿಕೊಂಡಿತು. ನಡುಗಿದನು. ಗೋಪುರವೂ ನಡುಗಿತು. ಆಕಡೆ, ಈಕಡೆ ಬಾಗಿತು ಅಲುಗಾಡಿತು. ರಾಣಿಗೂ ಬಹಳ ರೋಷಬಂತು. "ನಿನ್ನ ತಲೆಬುರುಡೆಯನ್ನು ಭೂಮಿಗೆ ಉರುಳಿಸಿಬಿಡುತ್ತೇನೆ. ಆಮೇಲೆ ನೀನು ನಿನ್ನ ಟೋಪಿಗಳನ್ನು ಹೇಗೆ ಹೊತ್ತುಕೊಂಡು ತಿರುಗುತ್ತೀಯೆ, ನೋಡುತ್ತೇನೆ" ಎಂದು ರಾಣಿ ಗದರಿಸಿದಳು.

ಟೋಪಿಯವನಿಗೆ ಗಾಬರಿ ಆಯಿತು. ದೋಸೆಯ ಚೂರಿಗೆ ಬದಲಾಗಿ ಅವನು ಲೋಟವನ್ನೇ ಕಚ್ಚಿ ಅಗಿದ! ಇದ್ದಕ್ಕಿದ್ದ ಹಾಗೆ ಕಣ್ಣಲ್ಲಿ ಧಾರೆ ಧಾರೆಯಾಗಿ ನೀರು ಬಂತು. "ನನ್ನ ಜೀವ ಉಳಿಸಬೇಕು, ಮಹಾಸ್ವಾಮಿ! ನನ್ನದು ಅಂಥಾ ಜೀವ ಅಲ್ಲ, ಮಹಾಸ್ವಾಮಿ! ಇಂಥಾ ಜೀವ, ಸ್ವಾಮಿ! ನಾನು ಪರದೇಶಿ, ಮಹಾಸ್ವಾಮಿ. ಅನೇಕರಿಗೆ, ನಿಮ್ಮಂಥಾ ಪ್ರಭುಗಳಿಗೆ, ಇನ್ನೂ ಟೋಪಿ ಹಾಕಬೇಕಾಗಿದೆ, ಮಹಾಸ್ವಾಮಿ. ನನಗೆ ಈ ಮುಖ ದ್ದಮೆಯ ವಿಚಾರವಾಗಿ ಏನೂ ತಿಳಿಯದು, ಮಹಾಸ್ವಾಮಿ. ನಾನು ತಿಂದು ಮುಗಿಸಿಲ್ಲ ಇನ್ನು. ಅರ್ಧದಲ್ಲಿ ಎದ್ದುಬಂದೆ, ಮಹಾಸ್ವಾಮಿ ತಮ ಗೋಸ್ಕರ...." ಎಂದು ಒಂದೇ ಸಮನಾಗಿ ಕಿರಿಚಿಕೊಂಡನು. ಅಂಗಲಾಚಿ ಬೇಡಿಕೊಂಡನು.

ರಾಜನು, "ಇದನ್ನೆಲ್ಲಾ ಬರೆದುಕೊಂಡಿರಾ?" ಎಂದು ಪಾಂಚಾಯತರನ್ನು ಕೇಳಲು, ಅವರೆಲ್ಲರೂ ಒಂದೇ ಸಮನಾಗಿ ಉಸಿರು ಕಟ್ಟಿ "ಹುಂ" ಎಂದು ಬಿಟ್ಟರು. "ಸರಿ! ಆಮೇಲೆ?" ಎಂದು ರಾಜನು ಟೋಪಿಯವನನ್ನು ಕೇಳಿದನು. "ನನಗೆ ಏನೂ ತಿಳಿಯದು, ನಾನು ದಡ್ಡ, ಬುದ್ಧಿ!" ಎಂದವನು ಉತ್ತರ ಕೊಟ್ಟನು. "ಇದನ್ನೂ ಬರೆಯಿರಿ! ಬಹಳ ಮುಖ್ಯವಾದ ರುಜುವಾತು" ಎಂದು ಹೇಳುತ್ತಾ ರಾಜನು ಅದನ್ನೂ ಬರೆಯಿಸಿದನು.

ಆಗ, ಅಲ್ಲಿದ್ದ ಒಂದು ಮುಳ್ಳು ಹಂದಿ—ಬಲು ತುಂಟ—ಕೊಂಚ ನಕ್ಕಿತು. ವಿಚಾರಣೆಯಲ್ಲಿನ ವಿದ್ಯಮಾನಗಳನ್ನು ನೋಡುತ್ತಿದ್ದರೆ, ಕೇಳುತ್ತಿದ್ದರೆ, ಎಂಥವರಿಗೂ ನಗುಬರುತ್ತದೆ, ಅನ್ನಿ. ಆದರೂ ರಾಜನ ಆಸ್ಥಾನದಲ್ಲಿ ನಕ್ಕರೆ ಅಳಬೇಕಾಗುತ್ತದೆ. ಸ್ಥಳವರಿತು ಸಮಯವರಿತು ನಗಬೇಕು. ರಾಣಿಯವರು, "ತದುಕು" ಎಂದು ಆರ್ಭಟಿಸಿದರು. ತಕ್ಷಣ

ಇಬ್ಬರು ಭಟರು ಬಂದು ಆ ಹಂದಿಮರಿಯನ್ನು ತದುಕಿದರು. ಅಂದರೆ ಅದನ್ನು ಮೂತಿಹಿಡಿದೆತ್ತಿ, ಒಂದು ಚೀಲದೊಳಗಿಟ್ಟು, ಚೀಲದ ಬಾಯನ್ನು ಬಿಗಿಯಾಗಿ ಕಟ್ಟಿ, ಅದನ್ನು ನೆಲದ ಮೇಲಿರಿಸಿ, ಇಬ್ಬರು ಭಟರು ಅದರ ಮೇಲೆ ಕೊಂಚ ಹೊತ್ತು ಕುಳಿತುಕೊಳ್ಳುವರು. ಅನಂತರ, ಚುಚ್ಚನ್ನೂ ಸಹಿಸಿಕೊಂಡು ಗೋವಿಂದ! ಎಂದು ಹೇಳುತ್ತಾ ಎದ್ದು ಸ್ವಸ್ಥಾನಕ್ಕೆ ಹೋಗಿ ನಿಲ್ಲುವರು. ತದುಕುವುವೆಂದರೆ ಇದೇ!

ಕಡೆಗೆ ರಾಜನು ಟೋಪಿಯವನಿಗೆ "ಹೋಗಿ ಬಾ" ಎಂದು ಹೇಳಿದನು. ರಾಜನು ಹೇಳಿದಹಾಗೆಯೇ ಅವನು ಕೊಂಚದೂರ ಹೋಗಿ ಮತ್ತೆ ಬಂದನು. ಆಗ ಅಲ್ಲಿದ್ದ ಹಂದಿಮರಿ ನಕ್ಕಿತು. ಅದನ್ನೂ ತದುಕಿದರು! ಅದರ ಸದ್ದು ಅಡಗಿತು.

"ನೀನು ಹೋಗಿ ತಿಂಡಿ ಮುಗಿಸು" ಎಂದು ಮೊಲ ಸಂಕಟ ರಮಣಪ್ಪನನ್ನು ಆಸ್ಥಾನದಿಂದ ಹೊರಗೆ ಹೊರಡಿಸಿತು. "ಆಚೆ ಹೋದ ಕೂಡಲೆ ಅವನ ತಲೆಯನ್ನು ಕತ್ತರಿಸಿ!" ಎಂದು ರಾಣಿಯವರ ಅಪ್ಪಣೆಯಾಯಿತು. ಆದರೆ, ಸಿಪಾಯಿಗಳು ಕತ್ತಿಗಳನ್ನು ಮಸೆದು ಸಿದ್ಧವಾಗಿ ಏಳುವುದರೊಳಗೆ ಟೋಪಿಯ ಗೋಪುರ ದಿಗಂತದಾಚೆಗೆ ಹೋಗಿತ್ತು.

"ಎರಡನೆಯ ಸಾಕ್ಷಿ—ಮುನಿಯಮ್ಮಾ, ಮುನಿಯಮ್ಮಾ, ಮುನಿಯಮ್ಮಾ" ಎಂದು ಮೊಲ ಹಿಂದಿನ ಹಾಗೆ ಕೂಗಿತು.

ಈಗ ಬಂದದ್ದು,—ಅಮ್ಮಾವರ ಅಡಿಗೆಯವಳು. ಕೈಯಲ್ಲಿ ಸಾರಿನ ಪುಡಿಯ ಡಬ್ಬ! ಸೌಟು! ತಡೆಯಲಾರದ ಕೋಪ, ಕಿಡಿಕಿಡಿ. "ಅಯ್ಯಯ್ಯೋ! ಇವಳಿಗೆ ಇದ್ದಕಿದ್ದ ಹಾಗೆ ಹುಚ್ಚು ಹಿಡಿದುಬಿಟ್ಟರೆ ಏನು ಗತಿ?" ಎಂದು ಪಾಪಚ್ಚಿ ಯೋಚಿಸಿದಳು. ಆದರೆ, ಅದನ್ನು ಯಾರಿಗೂ ಹೇಳಲಿಲ್ಲ.

"ನಿನಗೆ ತಿಳಿದದ್ದನ್ನು ಹೇಳು!" ಎಂದು ರಾಜನ ಆಜ್ಞೆಯಾಯಿತು. "ಹೇಳುವುದಿಲ್ಲ" ಎಂದು ಅಡಿಗೆಯವಳು ಹೆಂಡಕುಡಿದ ಹುಲಿಯಂತೆ ಉತ್ತರಕೊಟ್ಟಳು. ರಾಜನಿಗೆ ಗಾಬರಿಯಾಯಿತು. ಪಂಚಾಯತರೆಲ್ಲರೂ ನಡುಗಿದರು. ರಾಣಿಯೂ ಕೂಡ ಅಡಿಗೆಯವಳ ಮಾತನ್ನು ಕೇಳದೆ ಇದ್ದವಳ ಹಾಗೆ ನಟಿಸಿದಳು. "ಗುಮಾಸ್ತರೇ? ಏನಪ್ಪಾ ಮಾಡುವುದು?"

ಎಂದು ರಾಜನು ಮೊಲದ ಕಿವಿಯಲ್ಲಿ ಊದಿದನು "ಹೆದರಬೇಡಿ, ಮಹಾ ಸ್ವಾಮಿ! ನೀವು ರಾಜರು! ಇನ್ನೇನಾದರೂ ಒಂದು ಪ್ರಶ್ನೆ ಕೇಳಿ, ಬೇಗ. ಹದಕ್ಕೆ ಬರುತ್ತಾಳೆ!" ಎಂದು ಮೊಲ ಸೂಚನೆ ಕೊಟ್ಟಿತು. ರಾಜನಕಾಲು ಗಳು ನಡುಗುತ್ತಿದ್ದುವು. ಆದರೂ, ಮುಖದಲ್ಲಿ ಆ ಭಯವನ್ನು ರವೆ ಯಷ್ಟೂ ತೋರ್ಪಡಿಸದೆ ಅವನು, "ಕಡುಬು ಮಾಡುವುದಕ್ಕೆ ಏನೇನು ಸಾಮಾನು ಬೇಕು, ತಾಯಿ, ಮುನಿಯಮ್ಮನವರೇ?" ಎಂದು ಕೇಳಿದನು.

ಅಡಿಗೆಯವಳ 'ಕಿಡಿಕಿಡಿ' ಕೊಂಚ ಕಡಮೆಯಾಯಿತು. ಮುಖದಲ್ಲಿ ಮಂದಹಾಸದ ಮಿನುಗು ಸುಳಿದಾಡಿತು. "ಮುಖ್ಯವಾಗಿ ಮೆಣಸಿನ ಕಾಯಿ" ಎಂದಳು. ಆಗ ಅಲ್ಲೇ ಎಮ್ಮೆಕರುವಿನ ಮೇಲೆ ಕುಳಿತಿದ್ದ ಅಳಿಲು, "ಕೊಂಚ ಕರಿಬೇವಿನಸೊಪ್ಪೂ ಬೇಕು" ಎಂದಿತು. ರಾಣಿಗೆ ಈ ಮಾತು ಕೇಳಿಸಿತು. ಹಿಂದಿನ ದಿನ ಜವಾನ ತಂದುಕೊಟ್ಟ ಬೇವಿನ ಸೊಪ್ಪಿನ ಕಹಿ ಅವಳ ಜ್ಞಾಪಕಕ್ಕೆ ಬಂತು. ಮೈಯೆಲ್ಲಾ ಪರಚಿಕೊಳ್ಳು ವಷ್ಟು ಕೋಪ ಬಂತು. "ಹಿಡಿ ಅದನ್ನ! ಕತ್ತರಿಸು ಅದರ ತಲೆಯನ್ನ! ಕೀಳು ಅದರ ಬಾಲವನ್ನ! ಸುಡು ಅದರ ತುದಿ ಮೀಸೆಯನ್ನ! ತದುಕು!" ಎಂದು ಎದ್ದು ರೇಗಿ ಕೂಗಾಡಿದಳು. ಎಲ್ಲರೂ ಅಳಿಲನ್ನು ಹಿಡಿಯಲು ಓಡಿದರು. ಆದರೆ, ದೇವರ ದಯೆಯಿಂದ ಎಮ್ಮೆಕರು ಆಗ ನಿದ್ರಿಸು ತ್ತಿರಲಿಲ್ಲ. ಆದ್ದರಿಂದ, ಗಲಾಟೆಯ ನಡುವೆ, ಅದು ಪುಸಕ್ಕನೆ ಓಡಿಹೋ ಯಿತು. ಅಳಿಲನ್ನು ತದುಕುವ ಆರ್ಭಟದಲ್ಲಿ ಅಡಿಗೆಯವಳೂ ಪರಾರಿ!

ಮುಂದಿನ ಸಾಕ್ಷಿ ಯಾರೆಂದು ತಿಳಿಯಲು ಪಾಪಚ್ಚಿಗೆ ತುಂಬಾ ಉತ್ಸಾಹ. ಏಕೆಂದರೆ, ಕಳುವಿನ ಸುಳಿವು ಇನ್ನೂ ಹೊರಬಿದ್ದಿರಲಿಲ್ಲ, ತಮ್ಮ ದೇಶದ ಪ್ರಧಾನ ಮಂತ್ರಿಯ ಮೇಲೆ ಇಷ್ಟು ದೊಡ್ಡ ಅಪರಾಧವನ್ನು ಹೊರಿಸಿ, ಅದನ್ನು ನಿಜವೆಂದು ಸಾಧಿಸಬಲ್ಲ ಎದೆಕೆಚ್ಚಿನವನಾರೆಂದು ಅವಳು ಇದಿರುನೋಡಿದಳು.

ಮೊಲವು ಮತ್ತೆ ಬಾದಾಮಿ ಕಾಗದದ ಸುರುಳಿಯನ್ನು ಬಿಚ್ಚಿ ಹಿಡಿದು ರಾಜನ ಕನ್ನಡಕವನ್ನು ಎರವಲು ಪಡೆದು ತನ್ನ ಮೂಗಿನ ಮೇಲೇರಿಸಿ, ಕೊಂಚ ಹೊತ್ತು ತಡವರಿಸಿ, "ಮೂರನೆಯ ಸಾಕ್ಷಿ— ಪಾರ್ವತಮ್ಮಾ—ಉರುಫ್, ಪಾಪಚ್ಚಿ" ಎಂದು ಕೂಗಿತು.

## "ಲೇ! ರಾಕ್ಷಸಿ!"

"ಇಲ್ಲಿದೇನೆ" ಎಂದು ಹೇಳಿಕೊಂಡು ಪಾಪಚ್ಚಿ ಮುಂದಕ್ಕೆ ಬಂದು ಸಾಕ್ಷಿಗಳು ನಿಲ್ಲಬೇಕಾದ ಜಾಗದಲ್ಲಿ ನಿಂತಳು. ಅಣಬೆಯ ಒಂದು ಸಣ್ಣ ಚೂರು ಉಳಿದಿದ್ದುದನ್ನು ಅವಳು ಮುಂದಕ್ಕೆ ಹೆಜ್ಜೆ ಇಟ್ಟಾಗಲೇ ತಿಂದದ್ದರಿಂದ ಅಲ್ಲಿ ನೆರೆದಿದ್ದ ಎಲ್ಲರಿಗಿಂತಲೂ ಅವಳು ಎತ್ತರವಾಗಿದ್ದಳು. ಒಳ್ಳೆಯದೇ ಆಯಿತು. ಏಕೆಂದರೆ, ಯಾರು ಏನು ಹೆದರಿಸಿದರೂ ಅವಳು ಹೆದರುವ ಹಾಗಿರಲಿಲ್ಲ. ತಾನು ಹೇಳಬೇಕಾದ್ದನ್ನು ಅಂಜಿಕೆಯಿಲ್ಲದೆ ನ್ಯಾಯಸ್ಥಾನದ ಮುಂದಿಡಲು ಅವಳಿಗೆ ಸುಲಭವಾಯಿತು.

ಆದರೆ, ಮೊಟ್ಟಮೊದಲು ಒಂದು ಸಣ್ಣ ಅನಾಹುತ ನಡೆಯಿತು. ಮುಂದೆ ಹೋದ ರಭಸದಲ್ಲಿ ಅವಳ ಲಂಗದ ಅಂಚು ತಗುಲಿ ಪಂಚಾಯತರೆಲ್ಲರೂ ನೆಲಕ್ಕೆ ಬಿದ್ದರು. ಬಳಪವನ್ನು ಕಳೆದುಕೊಂಡು ಬೆರಳಿನಿಂದ ಬರೆಯುತ್ತಿದ್ದ ಸಣ್ಣಪ್ಪನಿಗೆ ಎಲ್ಲರಿಗಿಂತ ಹೆಚ್ಚು ಪೆಟ್ಟಾಯಿತು. "ಎಲ್ಲರನ್ನೂ ಅವರವರ ಸ್ಥಾನದಲ್ಲಿ ಕೂಡಿಸಿದ ಮೇಲೆ ಮುಂದಿನ ಮಾತು" ಎಂದು ರಾಜನು ಹೇಳಿದನು. ದೇವರ ದಯೆಯಿಂದ ರಾಣಿಗೆ ಕೋಪ ಬರಲಿಲ್ಲ; ಅವಳು ನಗುತ್ತಿದ್ದಳು. ಪಾಪಚ್ಚಿ ಎಲ್ಲರನ್ನೂ ಎತ್ತಿ ಅವರವರ ಕುರ್ಚಿ ಮೇಲೆ ಕೂಡಿಸಿ ಕೈಗೆ ಸ್ಲೇಟನ್ನೂ ಬಳಪವನ್ನೂ ಕೊಟ್ಟಳು. ಸಣ್ಣಪ್ಪನನ್ನು ಮಾತ್ರ ತಿಳಿಯದೆ ಬೆನ್ನಮೇಲೆ ಮಲಗಿಸಿಬಿಟ್ಟಿದ್ದಳು ಅದರ ಒದ್ದಾಟ ನೋಡಲಾರದೆ ಗುಮಾಸ್ತೆ ಹೋಗಿ ಮಗುಚಿ ಸರಿಪಡಿಸಿದನು. ರಾಣಿ ಮತ್ತೆ ಮುಖವನ್ನು ಕೆಂಪಗೆಮಾಡಿಕೊಂಡು ಕುಳಿತಳು.

"ಕಡುಬು ಕಳುವಿನ ವಿಷಯವಾಗಿ ನಿನಗೆ ಏನು ಗೊತ್ತಿದೆ, ಹೇಳು" ಎಂದು ರಾಜನು ಪಾಪಚ್ಚಿಯನ್ನು ಕೇಳಿದನು. "ಏನೂ ಗೊತ್ತಿಲ್ಲ, ಸಾರ್!" ಎಂದು ಪಾಪಚ್ಚಿ ಬಹಳ ತಾಳ್ಮೆಯಿಂದ ಉತ್ತರಕೊಟ್ಟಳು. "ರವೆಯುಷ್ಟು?" ಎಂದು ರಾಜನು ಮತ್ತೆ ಒತ್ತಿ ಕೇಳಿದನು. "ರವೆ ಹಾಕುತ್ತಾರೇನು ಕಡುಬಿಗೆ?" ಎಂದು ಪಾಪಚ್ಚಿ ಪ್ರಶ್ನೆಹಾಕಿದಳು.

"ಹಾಗಾದರೆ, ಈ ಹುಡುಗಿ ಈ ವಿಚಾರಣೆಗೆ ಪ್ರಧಾನವಾದ ಸಾಕ್ಷಿ" ಎಂದು ರಾಜನು ಪಂಚಾಯತರ ಕಡೆ ತಿರುಗಿ ಹೇಳಿದನು. ಅವರೆಲ್ಲರೂ

ಕೂಡಲೇ ತಲೆಬಗ್ಗಿಸಿಕೊಂಡು ಬಿರುಬಿರನೆ ಬರೆಯತೊಡಗಿದರು. ಬಿಳಿಯ ಮೊಲವು ರಾಜನ ಹತ್ತಿರ ಸರಿದು, "ಮಹಾಸ್ವಾಮಿ ಈಗ ಅಪ್ಪಣೆ ಕೊಡಿಸಿದ್ದು 'ಪ್ರಧಾನವಾದ ಸಾಕ್ಷಿ' ಅಂತಲೋ, ಅಥವಾ, 'ಅಪ್ರಧಾನವಾದ ಸಾಕ್ಷಿ' ಅಂತಲೋ?" ಎಂದು ಕೇಳಿತು. "ಹೌದು. ಅಪ್ರಧಾನ. ಅಲ್ಲ. ಪ್ರಧಾನ....ಹೌದು" ಎಂದು ರಾಜನು ಆಕಳಿಸುತ್ತಾ ಉತ್ತರಕೊಟ್ಟನು. ರಾಜನಿಗೆ ಆಗಲೇ ಹಸಿವು, ಬೇಸರಿಕೆ, ನಿದ್ದೆ. ಕೆಲವು ಪಂಚಾಯತರು 'ಪ್ರಧಾನ' ಎಂದೂ, ಕೆಲವರು 'ಅಪ್ರಧಾನ' ಎಂದೂ, ಇನ್ನೂ ಕೆಲವರು 'ಹೌದು—ಅಲ್ಲ' ಎಂದೂ ಬರೆದುಕೊಂಡರು.

ಆಗ ರಾಜನು ವಿಚಾರಣೆಯನ್ನು ಮುಗಿಸಲು ಒಂದು ಉಪಾಯವನ್ನು ಕಂಡುಹಿಡಿದನು. ಹೇಗಾದರೂ ಮಾಡಿ ಪಾಪಚ್ಚಿಯನ್ನು ಆಚೆ ಕಳುಹಿಸಿಬಿಟ್ಟರೆ ವಿಚಾರಣೆ ಬೇಗ ಮುಗಿಯುವುದೆಂದು ಅವನ ಊಹೆ. ತನ್ನ ಮೇಜಿನ ಮೇಲಿಂದ ಅವನು ಒಂದು ಹಳೆಯ ಓಲೆಗರಿ ಗ್ರಂಥವನ್ನು ತೆಗೆದು, ಎದ್ದುನಿಂತು, "ಎಲ್ಲರೂ ಕೇಳಿ! ನಮ್ಮ ದೇಶದ ಕಾನೂನ್ ೪೩೩ನೆಯ ಸೆಕ್ಷನ್ ಪ್ರಕಾರ ಮೂರು ಮೊಳಕ್ಕಿಂತ ಎತ್ತರವಿರುವವರು ಯಾರೂ ನ್ಯಾಯಾಸ್ಥಾನದಲ್ಲಿರಬಾರದು. ಆದ್ದರಿಂದ, ಅಂಥವರೆಲ್ಲರೂ ಈಗಲೇ ಹೊರಡತಕ್ಕದ್ದು" ಎಂದು ಕೂಗಿ ಹೇಳಿದನು.

ಸರ್ವರೂ ಪಾಪಚ್ಚಿಯ ಕಡೆ ದುರು ದುರನೆ ನೋಡಿದರು. ಆದರೆ, ಪಾಪಚ್ಚಿ, "ನಾನು ಮೂರು ಮೊಳ ಇಲ್ಲ" ಎಂದಳು. ರಾಜನು "ಇದೀಯೆ" ಎಂದು ಗಟ್ಟಿಯಾಗಿ ಕೂಗಿದನು. ರಾಣಿ, "ಮೂರಲ್ಲ; ಮೂವತ್ತು ಮೊಳ!" ಎಂದಳು. "ಇದ್ದರೆ ಇರಲಿ! ನಾನಿಲ್ಲಿಂದ ಹೊರಡುವುದಿಲ್ಲ. ನೀವೇನು ಮಾಡುತ್ತೀರಿ, ನೋಡುತ್ತೇನೆ....ಅದೂ ಅಲ್ಲದೆ, ಈಗ ನೀವು ಓದಿದ್ದು ನನಗೋಸ್ಕರ ಈಗ ಬರೆದು ಆ ಗ್ರಂಥಕ್ಕೆ ಸೇರಿಸಿದ ಸೆಕ್ಷನ್. ಕ್ಷಣಕ್ಷಣಕ್ಕೂ ಹೀಗೆ ಕಾನೂನನ್ನು ಬದಲಾಯಿಸುವುದು, ಬೇಕು ಬೇಕಾದಾಗ ಹೊಸದನ್ನು ಸೇರಿಸಿ ಓದುವುದು, ಇದು ಯಾವ ಸೀಮೆಯ ನ್ಯಾಯ?" ಎಂದು ಪಾಪಚ್ಚಿ ಪ್ರತಿಭಟಿಸಿದಳು. "ಅಲ್ಲ, ಅಲ್ಲ, ಎಂದಿಗೂ ಅಲ್ಲ. ಇದು ಈ ದೇಶದ ಸನಾತನ ಧರ್ಮದ ಮೊದಲನೆಯ ಸೂತ್ರ" ಎಂದು ರಾಜನು ವಾದಿಸಿದನು. "ಹಾಗಾದರೆ, ಅದು

ಒಂದನೆಯ ಸೆಕ್ಷನ್ನಾಗಿರಬೇಕಾಗಿತ್ತು. ೪೩೩ನೆಯದು ಹೇಗಾಯಿತು? ನೀವು ಹೇಳುವುದು ಶುದ್ಧ ಸುಳ್ಳು!" ಎಂದು ಪಾಪಚ್ಚಿ ಎದುರುಬಿದ್ದಳು. ಜಾಣೆ ಹುಡುಗಿ. ರಾಜನ ಮುಖ ಕಾಸಿನಷ್ಟು ಚಿಕ್ಕದಾಯಿತು. ಗ್ರಂಥ ವನ್ನು ಎತ್ತಿ ಒಂದು ಮೂಲೆಗೆಸೆದನು. ಅದನ್ನು ಹಿಡಿಯಲು ಕೈ ನೀಡಿದ ಒಬ್ಬ ಸಿಪಾಯಿ ಕೆಳಕ್ಕೆ ಬಿದ್ದು ಒದ್ದಾಡಿದ. ಏನುಮಾಡುವುದೆಂದು ತೋಚದೆ ತಲೆಬಗ್ಗಿಸಿಕೊಂಡು ಸಿಂಹಾಸನದಲ್ಲಿ ಕುಳಿತನು.

ಆಗ ಗುಮಾಸ್ತೆಯಾದ ಮೊಲವು "ಮಹಾಸ್ವಾಮಿ! ಇದನ್ನು ಪರಾಂಬರಿಸಬೇಕು. ಈಗ ತಾನೇ ಪೋಲೀಸಿನವರು ಈ ಕಾಗದವನ್ನು ನನ್ನ ಕೈಗೆ ಕೊಟ್ಟರು. ಇದರಲ್ಲಿ ಬಹಳ ಮುಖ್ಯವಾದ ವಿಷಯಗಳಿರ ಬಹುದೆಂದು ಅವರು ಊಹಿಸುತ್ತಾರೆ" ಎಂದು ಹೇಳಿತು. ಅರೆನಿದ್ದೆಯಲ್ಲಿದ್ದ ರಾಣಿ ಈಗ ಕಣ್ತೆರೆದಳು. "ಅದರಲ್ಲೇನಿದೆ, ಓದಿದೆಯಾ?" ಎಂದು ಬಹಳ ಆತುರದಿಂದ ಕೇಳಿದಳು. ಮಂತ್ರಿಯ ತಲೆಯನ್ನು ಕತ್ತರಿಸ ಬೇಕೆಂದು ರಾಜನಿಗಿಂತ ರಾಣಿಗೆ ಹೆಚ್ಚು ಅಭಿಲಾಷೆಯಿದ್ದಂತೆ ಪಾಪಚ್ಚಿಗೆ ತೋರಿತು. ಮೊಲವು, "ನಾನಿನ್ನೂ ಇದನ್ನು ಒಡೆದು ನೋಡಲಿಲ್ಲ. ಪ್ರಾಯಶಃ ಅಪರಾಧಿ ತನ್ನ ಗುಂಪಿನವರಿಗೆ ಬರೆದ ಕಾಗದವಾಗಿರಬಹುದು" ಎಂದು ಹೇಳಿತು.

"ಇರಲೇಬೇಕು. ಇರಲೇಬೇಕು. ಕಾಗದ ಬರೆದ ಮೇಲೆ ಅದು ಯಾರಾದರೊಬ್ಬರಿಗೆ ಬರೆದದ್ದಾಗಿಯೇ ಇರಬೇಕು. ಸುಮ್ಮನೆ ಬರಿಯ ಕಾಗದವಾಗಿರಲಾರದು" ಎಂದು ರಾಜನು ಹೇಳಿದನು. ರಾಜನ ಬುದ್ಧಿಯ ಚುರುಕನ್ನು ನೋಡಿ ಎಲ್ಲರೂ ಮಂಕಾದರು. "ವಿಳಾಸ ಯಾರದು?" ಎಂದು ಒಬ್ಬ ಪಂಚಾಯುತನು ವಿಚಾರಿಸಿದನು. "ಅದು ಕೂಡ ಬಹಳ ಅನುಮಾನಕ್ಕೆ ಆಸ್ಪದಕೊಡುತ್ತೆ. ಪರಮಾಶ್ಚರ್ಯ. ಇಂತಹ ಕಾಗದ ಗಳನ್ನು ನಾನು ನೋಡುವುದು ಇದೇ ಮೊದಲು! ವಿಳಾಸವೇ ಇಲ್ಲ" ಎಂದು ಮೊಲವು ತಿಳಿಸಿತು. "ಕಳ್ಳ! ಶುದ್ಧ ಕಳ್ಳ! ವಿಳಾಸವೇ ಬರೆ ದಿಲ್ಲ" ಎಂದು ರಾಣಿ ಚೀರಿದಳು.

ಮೊಲವು ಕಾಗದವನ್ನು ಒಡೆದು ನೋಡುತ್ತಾ, "ಕ್ಷಮಿಸಬೇಕು, ಮಹಾಸ್ವಾಮಿ. ಇಂಥಾ ಮೋಸ ಎಲ್ಲಾದರೂ ಉಂಟೆ. ಇದೊಂದು

ಕಾಗದವೇ ಅಲ್ಲ, ಮಹಾಸ್ವಾಮಿ! ಬರಿಯ ಶ್ಲೋಕಗಳು, ಮಹಾಸ್ವಾಮಿ —ಕವಿತೆ, ಬುದ್ಧಿ, ಕಗ್ಗ!" ಎಂದು ಹೇಳಿತು. "ಕಳ್ಳ! ಶುದ್ಧ ಕಳ್ಳ! ಕವಿತೆ ಬರೆಯುತ್ತಾನೆ! ಕಗ್ಗ ಹೊಸೆಯುತ್ತಾನೆ!" ಎಂದು ರಾಣಿ ಚೀರಿದಳು.

ಪಂಚಾಯತರಲ್ಲೊಬ್ಬನಾದ ಸಣ್ಣಪ್ಪ "ಬಿಕಲಂ ಯಾರದು?" ಎಂದು ಕೇಳಿದ. "ನಿಜ! ಅದನ್ನು ಪರೀಕ್ಷಿಸಬೇಕು!.....ಓ! ಬುದ್ಧಿ! ಮಂತ್ರಿಯ ಮೇಲೆ ಗುಮಾನಿ ಹೆಚ್ಚಾಗಲು ಇನ್ನೊಂದು ಕಾರಣ ಸಿಕ್ಕಿತು, ಬುದ್ಧಿ! ಇದನ್ನು ಬರೆದಿರುವುದು ಮಂತ್ರಿಯೇ ಅಲ್ಲ, ಬುದ್ಧಿ!" "ಹುಂ. ತಾನೇ ಬರೆದರೆ ಗೊತ್ತಾಗುತ್ತೆಂದು ಇನ್ನೊಬ್ಬನಿಂದ ಬರೆಸಿದ್ದಾನೆ. ಪಂಚಾಯತರೇ, ಇದನ್ನೂ ಗಮನದಲ್ಲಿಡಿ!" ಎಂದು ರಾಜನು ಹೇಳಿದನು. ರಾಣಿ, "ಕಳ್ಳ! ಶುದ್ಧ ಕಳ್ಳ! ಹೇಡಿ!" ಎಂದಳು.

ವಿಚಾರಣೆಯಲ್ಲಿ ಇದುವರೆಗೂ ಯಾವ ಭಾಗವನ್ನೂ ವಹಿಸದೆ ಇದ್ದ ಅಪರಾಧಿ ಈಗ ಬಾಯಿತೆರೆದನು. "ದೇವರಾಣೆ, ನಾನು ಕವಿತೆಯನ್ನು ಯಾವತ್ತೂ ಬರೆದಿಲ್ಲ. ಜಗದೀಶ್ವರನ ದಯೆಯಿಂದ ಕವಿತೆ ಬರೆಯದೆ ಕಣ್ಮುಚ್ಚಬೇಕೆಂಬುದೇ ನನ್ನ ಹಾರೈಕೆ. ಅಲ್ಲಿರುವ ಶ್ಲೋಕಗಳು ನನ್ನ ದೆಂದು ನೀವು ಹೇಗೆ ಸಾಧಿಸುತ್ತೀರಿ, ನೋಡುತ್ತೇನೆ. ನಾನು ಬರೆದದ್ದಾದರೆ ಕೊನೆಯಲ್ಲಿ ನನ್ನ ರುಜು ಇರಬೇಕಲ್ಲವೇ? ರುಜು ಇದೆಯೇ, ನೋಡಿ!" ಎಂದು ಮಂತ್ರಿ ಹೇಳಿದನು. ಕವಿತೆಯೆಂದರೆ ಅವನಿಗೇಕೆ ಇಷ್ಟು ಕೋಪ ಎಂದು ಪಾಪಚ್ಚಿ ಆಶ್ಚರ್ಯಪಟ್ಟಳು. ರಾಜನು, "ರುಜು ಇಲ್ಲ. ಆದ್ದರಿಂದಲೇ ನಿನ್ನ ಮೇಲೆ ಅನುಮಾನ ಹೆಚ್ಚುತ್ತಿದೆ. ಬರೆದಾಗಲೇ ರುಜು ಹಾಕದೆ, ಈಗ ರುಜು ಎಲ್ಲಿ—ಎಂದು ಬೇರೆ ಕೇಳುತ್ತೀಯೆ? ಹಾಕಬೇಕಾಗಿತ್ತು. ಹಾಕದಿರುವುದು ಇನ್ನೊಂದು ಅಪರಾಧ. ಪಂಚಾಯತರೇ ಬರೆದುಕೊಳ್ಳಿ!" ಎಂದು ಹೇಳಿದನು. ಎಲ್ಲರೂ ರಾಜನ ನ್ಯಾಯಕ್ಕೆ ಮೆಚ್ಚಿ ಚಪ್ಪಾಳೆ ತಟ್ಟಿದರು. ರಾಣಿ, "ಕಳ್ಳ! ಶುದ್ಧ ಕಳ್ಳ! ಕಡುಬು ಕದ್ದವನು ಇವನೇ ಎಂದು ಸ್ಪಷ್ಟವಾಗಿದೆ. ಅವನ ತಲೆಯನ್ನು ............" ಎಂದು ಹೇಳುವುದರೊಳಗೆ ಪಾಪಚ್ಚಿ, "ನಿಮ್ಮ ತಲೆ! ಒಂದು ಚೂರೂ ಸ್ಪಷ್ಟವಾಗಿಲ್ಲ. ನೀವೆಲ್ಲರೂ ಹುಚ್ಚರೆಂಬುದು ಮಾತ್ರ ಸ್ಪಷ್ಟವಾಗಿದೆ, ಅಷ್ಟೆ! ಆ ಶ್ಲೋಕಗಳನ್ನೇ ಇನ್ನೂ ಓದಿ ನೋಡಲಿಲ್ಲ.

ಅಪ್ಪರೊಳಗೆ ತಲೆ ಕತ್ತರಿಸಬೇಕಂತೆ........ತಲೆ!" ಎಂದು ಧೈರ್ಯವಾಗಿ ಹೇಳಿಬಿಟ್ಟಳು....ಎಲ್ಲರೂ ಸ್ತಬ್ಧರಾದರು.

"ಓದು, ಕತ್ತೆ!" ಎಂದು ರಾಜನ ಅಪ್ಪಣೆಯಾಯಿತು. ರಾಜನ ಕನ್ನಡಕವನ್ನು ಮತ್ತೆ ಎರವಲು ಪಡೆದು ಮೂಗಿನ ಮೇಲೇರಿಸಿ ಮೊಲವು, "ಎಲ್ಲಿಂದ ಪ್ರಾರಂಭಿಸಲಿ?" ಎಂದು ಕೇಳಿತು. "ಮೊದಲನೆಯ ಶ್ಲೋಕದ ಮೊದಲನೆಯ ಪಂಕ್ತಿಯ ಮೊದಲನೆಯ ಅಕ್ಷರದಿಂದ ಪ್ರಾರಂಭಿಸಿ ಕೊನೆಯ ಶ್ಲೋಕದ ಕೊನೆಯ ಪಂಕ್ತಿಯ ಕೊನೆಯ ಅಕ್ಷರದತನಕ ಓದು. ಅನಂತರ ಬಾಯಿ ಮುಚ್ಚು!" ಎಂದು ರಾಜನು ಆಜ್ಞಾಪಿಸಿದನು.

ಮೊಲವು ಶ್ಲೋಕಗಳನ್ನು ಓದುತ್ತಿದ್ದಾಗಲೇ ಮಧ್ಯೆಮಧ್ಯೆ ರಾಜನು ಅವುಗಳಿಗೆ ಟೀಕೆ ಮಾಡುತ್ತಾ ಬಂದನು. ಪಂಚಾಯತರು ಬಿರು ಬಿರನೆ ಬರೆದುಕೊಂಡರು. ಸ್ಲೇಟಿನ ಎರಡು ಭಾಗಗಳೂ ಬರೆದು ಮುಗಿದರೆ ಒಂದು ಕಡೆಯನ್ನು ಒರಸಿ ಮತ್ತೆ ಬರೆಯುತ್ತಿದ್ದರು.

ನೀನಿಂದಲ್ಲಿಗೆ ಹೋಗಿಹೆಯಂತೆ
ನನ್ನನ್ನವರಿಗೆ ಮಾಗಿಯ ಮಳಿಗೆ.
ನನ್ನೀ ಬಾಳನು ಹೊಗಳಿಹಳಂತೆ
ನನ್ನಿಯ ನುಡಿಯಿದು—ಈಜಲುಬರದು.

ರಾಜನು "ನಿನಗೆ ಈಜುವುದಕ್ಕೆ ಬರುತ್ತದೆಯೋ?" ಎಂದು ಮಂತ್ರಿಯನ್ನು ಕೇಳಿದನು. "ಹೋಗುವುದಿಲ್ಲ, ಮಹಾಸ್ವಾಮಿ" ಎಂದು ಅವನು ಉತ್ತರ ಕೊಟ್ಟಾಗ, "ಪಂಚಾಯತರೇ, ಬರೆದುಕೊಳ್ಳಿ! ಬಹಳ ಮುಖ್ಯವಾದ ಸಂಗತಿ" ಎಂದು ರಾಜನು ಅವರನ್ನು ಎಚ್ಚರಿಸಿದನು.

ನಾನು ಹೋಗಲಿಲ್ಲವೆಂದು ಅವನಿಗೇಕೆ ತಿಳಿಸಿದೆ
ಇಂತವನ್ನು ಒಳ್ಳೆತೆನಲು ನಾವುಗಳು ಸಾಕೆ?

"ಓಹೋ! ಇಂಥಾ ಕಡುಬುಗಳು ಒಳ್ಳೇ ರುಚಿ ಎನ್ನುವುದಕ್ಕೆ ನೀವು ಸಾಲದೋ ಎಂದು ರಾಜನು ಹೇಳಿದನು.

ಅವಳೀ ಕಾರ್ಯದಿ ಹಠವನು ಹಿಡಿದರೆ
ನಮ್ಮಯ ಗತಿ ಏನಾಗುವುದು?

("ಇದು ರಾಣಿಯನ್ನು ಕುರಿತು ಬರೆದದ್ದು, ಖಂಡಿತ. ಪ್ರಿಯೆ! ಕೇಳಿದೆಯಾ?")

ನಾನವನಿಗೀಗೊಂದು, ಅವರೆರಡು ಕೊಟ್ಟರು
ಐದಾರು ಮತ್ತೊಂದು, ಇವರದನು ಮುಟ್ಟರು.

("ಆಹಾ! ಇದು ಕಡುಬಿನ ಹಂಚಿಕೆಯ ಒಳಸಂಚು.")

ನಿನ್ನೆ ಮನೆಗೆ ಹೋದಚಾರ
ನನ್ನಲ್ಲಿಗೆ ಹಿಂದಿರುಗಿಲಾರ!

("ಹೌದು. ಕಡುಬು ಇಲ್ಲೇ ಇವೆಯಲ್ಲಾ!")

ನೀನೇ ಎಂದು
ಇದ್ದೇ ನಾನು!
ಅವಳಿಗೆ
ಬೆನ್ನುಫಣಿ!

("ಪ್ರಿಯೆ! ಕೇಳಿದೆಯಾ, ಈ ಮಂತ್ರಿ ಬರೆದಿರುವುದನ್ನ. ನಿನಗೆ ಬೆನ್ನುಫಣಿಯಂತೆ!")

ಉರಿಯುವ ಬೆಂಕಿಗೆ ಪೆಟ್ರೋಲನ್ನು ಹಾಕಿದ ಹಾಗಾಯಿತು. ಭದ್ರಕಾಳಿಯಂತೆ ರಾಣಿ ಚೀರಿದಳು. ಅಲ್ಲಿದ್ದ ಒಂದು ಶಾಯಿಕುಡಿಕೆಯನ್ನು ತೆಗೆದು ಪಂಚಾಯತರಿದ್ದೆಡೆಗೆ ಎಸೆದಳು. ಅದು ಸಣ್ಣಪ್ಪನ ತಲೆಯ ಮೇಲೆ ಬಿತ್ತು. ಅದರ ಬುರುಡೆ ಅಪ್ಪಚ್ಚಿಯಾಗಿ ಹೋಯಿತು. ಆದರೂ, ಪಾಪ, ಜಜ್ಜಿಹೋದ ನಾಲಗೆಯಿಂದ ಮಸಿಯನ್ನು ನೆಕ್ಕುತ್ತಿತ್ತು.

ಪಾಪಚ್ಚಿಗೆ ಇದೇನನ್ಯಾಯ ಎನಿಸಿತು. "ಈ ಕವಿತೆಗೆ ಅರ್ಥವೇ ಇಲ್ಲ ಎಂದಳು. ಆಗ, ರಾಜ," ಹಾಗಾದರೆ, "ನಮಗೆ ತಂಟೇನೆ ತಪ್ಪಿತು." ಎಂದನು. ಯಾರೋ ಬರೆದ ಶ್ಲೋಕಗಳು! ಯಾರ ಮೇಲೋ ಕೋಪ! ಅವಳಿಗೆ ಸಹಿಸಲಿಲ್ಲ. "ಪಂಚಾಯತರೇ! ನಿಮ್ಮ ಅಭಿಪ್ರಾಯವನ್ನು ಕೊಡಿ" ಎಂದು ಮೊಲ ಕೇಳಿದಾಗ, ರಾಣಿ, "ಬೇಡ! ಬೇಡ! ಶಿಕ್ಷೆ ಮೊದಲು; ಆ ಮೇಲೆ, ತೀರ್ಪು" ಎಂದಳು. "ಲೇ! ರಾಕ್ಷಸಿ!" ಎಂದು ರಾಣಿಯನ್ನು ಪಾಪಚ್ಚಿ ಬೈದಳು. ರಾಣಿಗೆ ಮತ್ತಷ್ಟು ಕೋಪ ಬಂತು.

"ಮುಚ್ಚು ಬಾಯಿ!" ಎಂದು ಕೂಗಿ ರೇಗಿದಳು. "ಮುಚ್ಚುವುದಿಲ್ಲ, ವಾರಿ!" ಎಂದು ಪಾಪಚ್ಚಿಯೂ ಕೂಗಿದಳು. "ಕಡಿ ಅವಳ ತಲೇನ" ಎನ್ನುತ್ತ ರಾಣಿ ಮೇಲಕ್ಕೆ ಎದ್ದಳು.

ಏಕೋ ವಿಪರೀತಕ್ಕಿಟ್ಟುಕೊಂಡಿತು. ಆದದ್ದಾಗಲಿ, ಎಂದು ಪಾಪಚ್ಚಿ "ಲೇ ಇಸ್ಪೀಟ್ರಾಣಿ!" ಎಂದು ಗಹಗಹಿಸಿ ನಕ್ಕಳು.

ಆಗ ಸುತ್ತ ನಿಂತಿದ್ದ ಭಟರೆಲ್ಲರೂ ರಟ್ಟಿನ ಆಳುಗಳಂತಿದ್ದ ಸಿಪಾಯಿಗಳೆಲ್ಲರೂ, ಐದು, ಎರಡು, ಒಂಬತ್ತು, ಎಂಟು ಮುಂತಾದ ಜವಾನರೆಲ್ಲರೂ ಒಟ್ಟಿಗೆ ನೆಲದಿಂದ ನೆಗೆದು ಮೇಲಕ್ಕೆ ಹಾರಿ ಗಾಳಿಯಲ್ಲಿ ತೂರಾಡಿ ಅವಳ ಮೈಮೇಲೆ ಬಿದ್ದರು!!

ಪಾಪಚ್ಚಿಗೆ ತುಂಬಾ ಕೋಪ! ಭಯ! . . . ಅವಳು ಕಿರಿಚಿದಳು. ಅವರನ್ನು ಓಡಿಸಲು, "ಅಯ್ಯೋ!" ಎಂದು ಕೈಬೀಸಿದಳು.

* * *

ಆಗ ಅವಳ ಅಕ್ಕ "ಏಕೆ? ಪಾಪಚ್ಚಿ! ಮರದ ಮೇಲಿಂದ ತರಗೆಲೆ ಬಿದ್ದರೆ ಯಾಕೆ ಹೀಗೆ ಕಿರಿಚಿಕೊಂಡೆ? ಕನಸು ಕಂಡೆಯೇನೆ?" ಎಂದು ಕೇಳಿದಳು. ಅಷ್ಟು ಹೊತ್ತಿಗೆ ಸರಿಯಾಗಿ ಶಾಮು ಓಡಿಬಂದು, "ಪಾಪಚ್ಚಿ! ಪಾಪಚ್ಚಿ! ಬಾ, ಇಲ್ಲಿ! ನಿನಗೆ ಅಣ್ಣ ಅಂಗಡಿಯಿಂದ ಹಾಲು ಖೋವ ತಂದಿದಾನೆ" ಎಂದು ಹೇಳಿದ. "ಹೂರ್ಣದ ಕಡುಬು ಬೇಡವೇನೆ?" ಎಂದು ಅಮ್ಮನೂ ಅಡಿಗೆಮನೆ ಬಾಗಿಲಿಂದ ಕೂಗಿದಳು.

ಪಾಪಚ್ಚಿ ಮನೆಯೊಳಕ್ಕೆ ಓಡಿಹೋದಳು. ಅವಳನ್ನು ನೋಡಿ ಪಿಲ್ಲಿ ಕುಣಿಯುತ್ತಾ ಬರುತ್ತಿತ್ತು.

———

# ಪ್ರಕಟನೆಗಳು

**ಸಾಹಿತ್ಯ ಪ್ರಚಾರ** (ಒಂದು ಭಾಷಣ)

—ಕೆ. ವಿ. ಪುಟ್ಟಪ್ಪ, ಎಂ.ಎ. (ಪ್ರತಿಗಳು ಮುಗಿದಿವೆ) .. ೦–೨–೦

**ಕನ್ನಡ ಮೇಘ ಸಂದೇಶ**

—ಪಂಡಿತ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ. ಕ್ರೌನ್ ಅ. ೪೮ .. ೦–೬–೦

ಕಾಳಿದಾಸನ ಸುಪ್ರಸಿದ್ಧ ಸಂಸ್ಕೃತಕಾವ್ಯದ ಕನ್ನಡ ಅನುವಾದವಿದು. ಯಕ್ಷನೊಬ್ಬನು ಅಧಿಕಾರಮದದಿಂದ ಧನಪತಿಯ ಶಾಪಕ್ಕೆ ಗುರಿಯಾಗಿ ತನ್ನಿನ್ನಿಯಳನ್ನಗಲಿ ಯಕ್ಷರ ವಸತಿಯಾದ ಅಲಕಾಪುರಿಯನ್ನುಳಿದು ವಿಂಧ್ಯಪರ್ವತಗಳ ಮಧ್ಯೆ ರಾಮಗಿರ್ಯಾಶ್ರಮವನ್ನು ಸೇರುವನು. ವಿರಹತಪ್ತನಾದ ಯಕ್ಷನು ತನ್ನ ಕಾಂತೆಗೆ ಸಂತೈಸುವ ಸಂದೇಶವನ್ನು ಕಳುಹಿಸಲು ದೂತನಾರನ್ನೂ ಕಾಣದೆ ಮಳೆಗಾಲದಾಸಮಯದಲ್ಲಿ ಮೋಡವೊಂದನ್ನು ಕಾಣಲು ಅದನ್ನೇ ಶರಣು ಹೋಗುವನು. ಇದೇ ಕಾವ್ಯದ ವಸ್ತು. ಈ ಕಿಂಚಿದ್ವಸ್ತುವನ್ನು ತೆಗೆದುಕೊಂಡು ಕಾಳಿದಾಸನು ತನ್ನ ಅಸದೃಶ ಪ್ರತಿಭೆಯಿಂದ ಅತ್ಯಂತ ವಿಲಾಸಯುತವೂ ಮನೋಹರವೂ ಆದ ಕಾವ್ಯವನ್ನು ಮೇಘ ಸಂದೇಶದಲ್ಲಿ ರಚಿಸಿರುವನು. ಈ ಕಾವ್ಯದಲ್ಲಿ ಎರಡು ಭಾಗಗಳಿವೆ. ಮೋಡವು ಅಲಕಾಪುರಿಯನ್ನು ಸೇರಲು ಯಾವ ದಾರಿಯನ್ನು ಹಿಡಿದು ನಡೆಯಬೇಕೆಂಬುದನ್ನು ಯಕ್ಷನು ಪೂರ್ವಮೇಘದಲ್ಲಿ ವರ್ಣಿಸುವನು. ಅನೇಕ ರಮ್ಯಸ್ಥಾನಗಳ, ಪುಣ್ಯಕ್ಷೇತ್ರಗಳ, ಪ್ರಸಿದ್ಧ ನಗರಗಳ ಮನೋಹರವಾದ ವರ್ಣನೆಯು ಇದರಲ್ಲಿ ಅಡಕವಾಗಿದೆ. ಅಲಕಾಪುರಿ, ಅಲ್ಲಿ ಯಕ್ಷನ ಸೌಧ, ಯಕ್ಷನ ಕಾಂತೆಯನ್ನಲ್ಲಿ ಕಾಣುವ ಬಗೆ, ಅವಳಿಗೆ ಸಂದೇಶವನ್ನರುಹಬೇಕಾದ ರೀತಿ—ಇವು ಉತ್ತರಮೇಘದ ವಿಷಯಗಳು.

ಕನ್ನಡದಲ್ಲಿ ಈ ಉತ್ತಮ ಕಾವ್ಯದಸರಳವೂ, ಸುಂದರವೂ, ಮನೋಹರವೂ ಆದ ಭಾಷಾಂತರವು ಇದೇ ಮೊದಲನೆಯದು.

ಅಭಿಪ್ರಾಯಗಳು—

ಕಾಳಿದಾಸನ ಸುಪ್ರಸಿದ್ಧ ಸಂಸ್ಕೃತ ಕಾವ್ಯದ ಕನ್ನಡ ಅನುವಾದ....ಅನುವಾದವು ಕುಸುಮಷಟ್ಪದಿಯಲ್ಲಿದೆ; ಅಚ್ಚಕನ್ನಡದ ಹಾಡುವೃತ್ತ, ಮುತ್ತಿನಂಥ

ಮಾತುಗಳು, ಆ ಮಾತುಗಳ ಹೊಂದಿಕೆಯಾದ ಜೋಡಣೆ — ಇವುಗಳಿಂದ ಕಾವ್ಯಕ್ಕೆ ಪ್ರಾಯಿಕವಾಗಿ ಒಂದು ಹೊಸ ಮೃದುತ್ವವೂ ಮಾಧುರ್ಯವೂ ಬಂದಿವೆ.

—"ಪ್ರಬುದ್ಧ ಕರ್ಣಾಟಕ."

ಸರಲತೆ, ಮಾಧುರ್ಯ, ವಿಶದತೆ — ಈ ಗುಣಗಳಿಂದ ಕಾವ್ಯವು ಮನೋಹರವಾಗಿದೆ. —ಶ್ರೀಯುತ ಡಿ. ವಿ. ಗುಂಡಪ್ಪನವರು.

**ಗಂಡುಗೊಡಲಿ (ಏಕಾಂಕ ದೃಶ್ಯ)**

—ಜಿ. ಪಿ. ರಾಜರತ್ನಂ, ಎಂ.ಎ. ಕ್ರೌ ಅ. ೩೨ .. ೦–೪–೦

ಕೃತಯುಗದಲ್ಲಿ ಕ್ಷಾತ್ರಕುಲಜಲಧಿಯನ್ನು ಆಪೋಶನವನ್ನಾಗಿ ತೆಗೆದ ಪರಶುರಾಮನೇ ಈ ರೂಪಕದ ಕಥಾನಾಯಕನು. ಪ್ರಜಾಪೀಡಕನಾದ ಕಾರ್ತವೀರ್ಯಾರ್ಜುನನು ಪರಶುರಾಮನ ಕ್ರೋಧಕ್ಕೆ ತುತ್ತಾಗಿ ಅವನ ಗಂಡುಗೊಡಲಿಗೆ ಬಲಿಯಾದುದೇ ಈ ರೂಪಕದ ಕಥಾವಸ್ತು.

ಕಾರ್ತವೀರ್ಯನ ದಬ್ಬಾಳಿಕೆಯ ಬಾಳ್ಮೊನೆಗೆ ಪ್ರಜೆಯೆಲ್ಲ ತುತ್ತಾಗುವುದು; ಅವನ ಶಶ್ವತ್ಸ್ವತಂತ್ರದ ನಾಡು ಪ್ರಜಾದಾಸ್ಯದ ಬೀಡಾಗುವುದು. ಕಲ್ಲು ಕಣ್ಣೀರಿಡುವ ಆ ನಾಡ ಸಂಕಟ ಕಂಡು ಗಂಡುಗೊಡಲಿಯ ಗಂಡನ ಮನರೋಸಿ, ಮನಹೇಸಿ, ಸೈರಣೆಯು ಸವೆಯುವುದು; ಕಾರ್ತವೀರ್ಯನ ಹುಟ್ಟೊರಸಲಿಕೆ ಅವನ ರಕುತ ಕುದಿಯುವುದು.

ಮಾನವ ಪ್ರಾಣವ ಕಾಪಿಡಲಾವು
ನಾಡಿನ ಪೀಡೆಯ ದೂಡಲಿಕಾವು
ಕ್ರಾಂತಿಯ ತರಬೇಕಿಲ್ಲವೆ ಸಾವು!

ಎಂಬುದೇ ಅವನ ಪಲ್ಲವಿಯಾಗುವುದು. ಅಂದಿನಿಂದವನು ಕ್ರಾಂತಿನಾಥನು—

ಮನೆಯಲಿ ಕಾಂತ್ರಿಯ ಕ್ರೂರ ಕುಠಾರಂ!
ನೆಲಸವುವಾಗಲಿ ವೈರಿ ವಠಾರಂ!

ಎಂಬ ವೀರೋದ್ಗಾರಗಳಿಂದ ತೆರೆಯೇಳುವುದು. ಭೀಷಣ ಮನೋಹರವಾದ ಈ ದೃಶ್ಯಕ್ಕೆ ಸಮಾನವಾದ ಬೇರೊಂದು ದೃಶ್ಯವು ಕನ್ನಡ ಸಾಹಿತ್ಯದಲ್ಲಿ ಅಪೂರ್ವ. ಈ ರೂಪಕದ ಪ್ರತ್ಯಕ್ಷರವೂ ವೀರರಸದಿಂದುಕ್ಕಿ ಹರಿಯುವುದು.

ಅಭಿಪ್ರಾಯಗಳು—

ಈ ರೂಪಕದ ಪ್ರತಿ ದೃಶ್ಯದಲ್ಲಿ, ಪ್ರತಿ ವಾಕ್ಯದಲ್ಲಿ ಎಂಥ ಬಲುಮೆಯಿದೆ! ಹೊಸ ಭಾವಗಳನ್ನು ತಂದಿರುವಲ್ಲಿ ಎಷ್ಟು ಹೊಂದಿಕೆ, ಹುರುಡು ಎದ್ದು ಕಾಣುತ್ತಿದೆ! ನಿಜವಾಗಿ ರಾಜರತ್ನರ ರೌದ್ರ ಪ್ರತಿಭೆಯು ಇಲ್ಲಿ, ಈ ಏಕಾಂತ ದೃಶ್ಯದ ಗಂಡುಗೊಡಲಿಯ ಕೆನ್ನೀರು ಹಸಿಗಳ ಕೆಂಪಿನಲ್ಲಿ ಬೆರಗುಗೊಳಿಸುವಂತಹ ಕೆಲಸ ಮಾಡಿದೆ. ಇದಕ್ಕೆ ಯಾವ ಸಂಶಯವೂ ಇಲ್ಲ. —"ಜಯ ಕರ್ಣಾಟಕ."

---

**ಕರ್ಣಾಟಕ ಸಂಘ, ಶಿವಮೊಗ್ಗ**

ಭಾಷೆ ವೀರ್ಯವತ್ತಾಗಿ, ಅರ್ಥ ಪೂರ್ಣವಾಗಿ, ಕಿವಿಗೆ ಹಿತವಾಗಿ, ವಿಷಯ ಗೌರವಕ್ಕೆ ತಕ್ಕಂತೆ ಪ್ರೌಢವಾಗಿ, ಆದರೂ ಎಲ್ಲರಿಗೂ ಅರ್ಥವಾಗುವಂತೆ ಸುಲಭ ವಾಗಿದೆ. ಛಂದಸ್ಸಿನ ಓಟ ನಿರರ್ಗಳವಾಗಿದೆ. ಮಾತುಗಳು ಕೊಡಲಿಯ ಪೆಟ್ಟಿನಿಂದ ಹೊರಡುವ ಕಿಡಿಗಳಂತೆ ಪುಟ ನೆಗೆಯುತ್ತವೆ.........ಒಟ್ಟಿನಲ್ಲಿ ರೂಪಕವು ಉತ್ತಮವಾಗಿದೆ. —"ಪ್ರಬುದ್ಧ ಕರ್ಣಾಟಕ."

**ರಕ್ತಾಕ್ಷಿ** (ಕವಿಗಳ ಭಾವಚಿತ್ರ ಸಹಿತ)

—ಕೆ. ವಿ. ಪುಟ್ಟಪ್ಪ, ಎಂ.ಎ. ಕ್ರೌ. ಅ. ೧೮+೨+೧೫೮ .... ೧–೮–೦

ಕ್ಯಾಲಿಕೊ ಪ್ರತಿ .... ೨–೦–೦

ಮಲೆನಾಡಿನಲ್ಲಿ ಪೂರ್ವದಲ್ಲಿ ಹೆಸರಾಂತ ರಾಜ್ಯಗಳಲ್ಲಿ ನಗರ ಸಂಸ್ಥಾನವು ಪ್ರಮುಖವಾದುದು. ವೈಭವದಿಂದ ಮೆರೆದ ಆ ರಾಜ್ಯದ ಅವಸಾನಕಾಲದ ಚರಿತ್ರೆಯೇ ಈ ನಾಟಕದ ಕಥಾವಸ್ತು. ಇಂದಿನ ಚರಿತ್ರೆಯ ಪುಸ್ತಕಗಳಲ್ಲಿ ನಿರ್ಜೀವರಾಗಿ, ಕೇವಲ ಹೆಸರುಗಳಾಗಿ ತೋರುವ ಬಸವನಾಯಕ, ಚೆಲುವಾಂಬೆ, ನಿಂಬಯ್ಯ, ಲಿಂಗಣ್ಣ ಮಂತ್ರಿ, ಹೈದರಾಲಿ ಮೊದಲಾದ ಪುರಾತನ ವ್ಯಕ್ತಿಗಳಲ್ಲಿ—ಶ್ರೀಮಾನ್ ಪುಟ್ಟಪ್ಪನವರ ಕಾವ್ಯರಂಗದಲ್ಲಿ—ನೂತನ ಜೀವವನ್ನು ಹೊಂದಿ, ಚರಿತ್ರೆಯಲ್ಲಿ ಕಾಣದಿದ್ದರೂ ಕವಿನಿರ್ಮಿತರಾಗಿ ಸಜೀವರಾಗಿರುವ ಇತರ ವ್ಯಕ್ತಿಗಳೊಡನೆ ವ್ಯವಹರಿಸಿ; ಸುಮಾರು ಇನ್ನೂರು ವರುಷಗಳ ಹಿಂದೆ ಅರಮನೆಯ ಪಿತೂರಿ, ಕುಯುಕ್ತಿ, ದ್ರೋಹ, ದ್ವೇಷಾಸೂಯೆಗಳು, ವಿಷಯಾಭಿಲಾಷೆ, ಹೇಡಿತನಗಳು—ಇವುಗಳಿಗೆ ತುತ್ತಾಗಿ, ಶತ್ರುವಿನ ಪಾಲಾದ ನಗರದ ರುದ್ರನಾಶವನ್ನಿಲ್ಲಿ ಬಹು ಹೃದಯಂಗಮವಾಗಿ, ರಸಭರಿತವಾಗಿ ಅಭಿನಯಿಸುವರು. ಕನ್ನಡ ಸಾಹಿತ್ಯದಲ್ಲಿ ಉತ್ತಮವಾದ ಪ್ರತಿಭಾಸಂಪನ್ನವಾದ ಮಹತ್ತಾದ ಇಂತಹ ಐತಿಹಾಸಿಕ ನಾಟಕವು ಬೇರೊಂದು ದೊರೆಯುವುದು ದುರ್ಲಭವು. ಸರಳ ರಗಳೆಯೂ ಮೃದು ಗದ್ಯವೂ ಬಹುಮನೋಜ್ಞವಾಗಿ ಬೆರೆತು ಈ ನಾಟಕವನ್ನು ಅಪೂರ್ವ ಶೋಭಾಮಯವಾಗಿ ಮಾಡಿರುತ್ತವೆ.

ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿ, ಎಂ.ಎ. ಯವರು ಈ ಗ್ರಂಥದ ವಿಷಯದಲ್ಲಿ ಮುನ್ನುಡಿಯಲ್ಲಿ ಹೀಗೆಂದು ಹೇಳಿರುವರು—

ಇದು ಕನ್ನಡಕ್ಕೆ "ಹ್ಯಾಂಲೆಟ್" ಕಾವ್ಯ. ಇಂಗ್ಲಿಷಿನಲ್ಲಿ "ಹ್ಯಾಂಲೆಟ್" ಹುಟ್ಟಿದಾಗ ಅದರ ಸಾಹಿತ್ಯವು ಅತ್ಯುನ್ನತ ಶಿಖರವನ್ನೇರಿತು. "ರಕ್ತಾಕ್ಷಿ" ಯಂಥ ಶ್ಲಾಘ್ಯ ಸ್ವತಂತ್ರ ಐತಿಹಾಸಿಕ ನಾಟಕವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹುಟ್ಟಿದಾಗ ಅದರ ಮಟ್ಟವು ಬಹು ಎತ್ತರಕ್ಕೆ ಏರಿರುವುದೆನ್ನುವುದರಲ್ಲಿ ಸಂದೇಹವಿಲ್ಲ...ಇಂಥ ಒಳ್ಳೆಯ ಕೃತಿಯನ್ನು ಪ್ರಕಟಿಸುವ ಸುಯೋಗ ಲಭಿಸಿದ್ದಕ್ಕಾಗಿ ನಾನು ಶಿವಮೊಗ್ಗೆಯ ಕರ್ಣಾಟಕ ಸಂಘವನ್ನು ಅಭಿನಂದಿಸುತ್ತೇನೆ.

---

**ಹನಿಗಳು** (ಲಘುಚಿತ್ರಗಳು)

—ಜಿ. ಪಿ. ರಾಜರತ್ನಂ,ಎಂ.ಎ. ಕ್ರೌನ್ ಅ. ೮+೮೬+೪ .... ೦—೧೦—೦
ಕ್ಯಾಲಿಕೊ ಪ್ರತಿ .... ೧— ೪ . ೦

ಈ ಬಗೆಯ ಪುಸ್ತಕ ಕನ್ನಡಕ್ಕೆ ಹೊಸದು —

ವಿಸ್ತಾರವಾದ ಕಾದಂಬರಿಗಳು ಕುಗ್ಗಿ ಸಣ್ಣ ಕಥೆಗಳಾದವು. ಇಲ್ಲಿ ಆ ಸಣ್ಣ ಕಥೆಗಳೂ ಕುಗ್ಗಿ ಒಂದು ಒಂದೂವರೆ ಪುಟಗಳಿಗೆ ಇಳಿದು ಹನಿಗಳಾಗಿವೆ. . .

ಈ ಹನಿಗಳಲ್ಲಿ ಕೆಲವು ಕಥೆಗಳು, ಕೆಲವು ವರ್ಣನೆಗಳು, ಕೆಲವು ಮನಸ್ಸಿನ ಯೋಚನೆಯ ತೆರೆಗಳು, ಮತ್ತೆ ಕೆಲವು ವಿಮರ್ಶೆಗಳು. ಕಥೆಯಾಗಲಿ, ವರ್ಣನೆಯಾಗಲಿ, ಯೋಚನೆಯಾಗಲಿ, ವಿಮರ್ಶೆಯಾಗಲಿ-ಎಲ್ಲದರಲ್ಲಿಯೂ ನಾವು ತಿಳಿದುಕೊಳ್ಳಬಹುದಾದ, ತಿಳಿದುಕೊಳ್ಳಬೇಕಾದ ಒಂದು ತಿರುಳು ಅಡಗಿಕೊಂಡೇ ಇರುತ್ತದೆ. ಇದನ್ನು ಓದಿ ತಿಳಿಯುವಾಗ ಮನೋರಂಜನೆಯೂ ಆಗುತ್ತದೆ.

—"ಪ್ರಬುದ್ಧ ಕರ್ಣಾಟಕ."

ಹೊಚ್ಚ ಹೊಸ ಪ್ರಕಾರವೊಂದು ಇಲ್ಲಿ ಒಡಮೂಡಿದೆಯೆನ್ನಬಹುದು. ಅದಕ್ಕೆ ಕಿರಿಕಿರಿಯ ಕತೆ ಇಲ್ಲವೆ ಹನಿ ಎಂದೇ ಎನ್ನಬಹುದು....ಕನ್ನಡದ ಕಥಾಸಾಹಿತ್ಯವು ಚಂಪೂ ಕಾವ್ಯಗಳಲ್ಲಿ ಮೊದಲು ಸಮುದ್ರವಾಗಿ ತೋರಿ, ಇಂದಿನ ಕಾದಂಬರಿಗಳಲ್ಲಿ ನದಿಯಾಗಿ, ಸಣ್ಣ ಕಥೆಗಳಲ್ಲಿ ಹಳ್ಳವಾಗಿ ಈ ಕೃತಿಯಲ್ಲಿ ಹನಿಯಾಗಿದೆ. ಕಥೆಯ ಆಕಾರವೆಷ್ಟು ಕಿರಿದಾಗಬೇಕೋ ಅದರ ಕೊನೆ ಮುಟ್ಟಿದಂತೆ ಈ ಹನಿಗಳಲ್ಲಿ ಒಂದೊಂದು ಒಂದೆರಡು ಪುಟದ ಸಂಪುಟದಲ್ಲಿ ಮುತ್ತುಗಳಂತೆ ನಿಂತಿವೆ. ನಿತ್ಯಜೀವನದಲ್ಲಿ ಕಲೆಯ ಸಿದ್ಧರೂಪಗಳನ್ನು ಕಂಡು ಎತ್ತಿಡುವದಾಗಲಿ, ಅಸಿದ್ಧವಾದರೂ ಅವುಗಳ ಒಡಲಿಂದ ಸಿದ್ಧವಾದವುಗಳನ್ನು ಮಿಂಚು ವೇಗದಿಂದ ನಿರ್ಮಾಣಮಾಡುವದಾಗಲಿ ಕತೆಗಾರಿಕೆಯ ಕುಶಲಕರ್ಮ, ಅದು ರಾಜರತ್ನಂ ಅವರಿಗೆ ಸಹಜವಾಗಿದೆ. —"ಜಯ ಕರ್ಣಾಟಕ."

**ಪಾಂಚಜನ್ಯ** (ಕವನ ಸಂಗ್ರಹ)

—ಕೆ. ವಿ, ಪುಟ್ಟಪ್ಪ, ಎಂ.ಎ, ಕ್ರೌನ್ ಅ. ೮೦ .. ೦—೧೨—೦
ಕ್ಯಾಲಿಕೊ ಪ್ರತಿ .. ೧— ೪—೦

ಈ ಕವನ ಸಂಗ್ರಹವು ಈಗಾಗಲೇ ಪ್ರಸಿದ್ಧವಾಗಿರುವ-ಪಾಂಚಜನ್ಯ-ಕಲ್ಕಿ-ಕುಮಾರವ್ಯಾಸ-ಇಂದಿನ ದೇವರು-ಶ್ರಾವಣ ಸಂಧ್ಯಾಸಮೀರಣ, ಈ ಕವನಗಳನ್ನಲ್ಲದೆ - ಕಾಳರಾತ್ರಿ - ವಿಷ್ಣುಮೂರ್ತಿ - ಸತ್ಯಾಗ್ರಹಿ - ಅವತಾರ - ಮಹಾತ್ಮಾಗಾಂಧಿ-ಭರತಮಾತೆ-ಭಾರತ ತಪಸ್ವಿನಿ-ಮುಕ್ತಿರಾಹು-ಇವೇ ಮೊದಲಾದ ಕವನಗಳನ್ನೊಳಗೊಂಡಿದೆ. ಈ ಕವನಗಳಲ್ಲಿ ಲಾಲಿತ್ಯಕ್ಕೆ ಬಹ್ವಂಶ ಎಡೆಯಿಲ್ಲವೆಂದು ಹೇಳಬಹುದು. 'ತರುಗಳ ತಳಿರಿನ ತಣ್ಣೆಳಲಲ್ಲಿ' ಕುಳಿತು ಹಾಯಾಗಿ ಹಾಡುವ ಗೊಲ್ಲನ 'ಕೊಳಲಿ'ನ ಇನಿದನಿಯಿಲ್ಲಿ ಕೇಳಿಬರುವುದಿಲ್ಲ. ಇಂಚರದ 'ಕೊಳಲು'

ಬಿರಿದಿಲ್ಲಿ ಕಠೋರ ಭೇರಿಯಾಗಿದೆ. ಅದರ ನಾದವು ಬೊಮ್ಮನ ಬಿರಿವಂತೆ ಮಸೆಯುತ್ತಿದೆ. ಕವಿಯ ಲೇಖನಿಯಲ್ಲಿ ಕಠಾರಿಯಾಗಿದೆ.

ನದಿಗಿರಿ ನಿರ್ಝರ ಜಲಕಲತಾನದಂತೆ ಮಂಜುಳ ನಿನದದಿಂದ ಜಾರುವ ಶ್ರೀಮಾನ್ ಪುಟ್ಟಪ್ಪನವರ ಶಬ್ದಸ್ರೋತದಲ್ಲಿ ಕಡಲವಾಣಿಯಂತೆ ಕೂಗಿ ರೇಗಿ ಉನ್ಮತ್ತವಾಗಿ ತೆರೆಯೇಳುತ್ತಿದೆ. ಅವರ ಶಬ್ದಶೈಲಿಯಲ್ಲಿ 'ಸಿಡಿಲನು ಸಿಡಿಯುತೆ ನೊಳಗುತೆ ನುಗ್ಗುವ ಕಾರ್ಗಾಲದ ಕರ್ಮುಗಿಲಿಂ ಹೊಮ್ಮುವ ಕೆಂಗಿಡಿ ಬಣ್ಣದ ಹೊಂಗೆರೆ' ಮಿಂಚಿಗೆ ಸಮನಾಗಿ ರುದ್ರವಾಗಿ ಬೆಳಗುತ್ತಿದೆ. ಈ ಕವನಗಳನ್ನು ಓದುತ್ತಿದ್ದಂತೆ 'ಮೆಯ್ಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು.'

ಕಲಾವಿದನು ಈ ರುದ್ರಾರಾಧನೆಯ ಕಾರಣವನ್ನು ದೂರ ಅರಸಬೇಕಾದುದಿಲ್ಲ. ಶ್ರೀಮಾನ್ ಪುಟ್ಟಪ್ಪನವರು ಅದನ್ನು ಮುನ್ನುಡಿಯಲ್ಲಿ ಹೀಗೆ ವಿವರಿಸಿರುವರು—"ಸೃಷ್ಟಿಯಲ್ಲಿ ರುದ್ರವೂ ರಮಣೀಯವೂ ಮಿಳಿತವಾಗಿವೆ. ಆದ್ದರಿಂದ ನಿಜವಾದ ಕಲಾವಿದನಿಗೆ ಸೌಂದರ್ಯದಂತೆ ರೌದ್ರವೂ ಆರಾಧನೆಯ ದೇವತೆಯೇ. ಯಾವುದನ್ನು ಬಿಟ್ಟು ಯಾವುದನ್ನು ಹಿಡಿದರೂ ಪೂರ್ಣ ಸತ್ಯವಾಗುವುದಿಲ್ಲ."

## ಮಾಟಗಾತಿ! ಮತ್ತು ಇತರ ಕಥೆಗಳು

—'ಆನಂದ.' ಕ್ರೌನ್ ಅ. ೧೬+೯೫+೪ .. ೦—೧೨—೦
ಕ್ಯಾಲಿಕೊ ಪ್ರತಿ .. ೧—೪—೦

ಆನಂದರ ಹೆಸರು ಕನ್ನಡನಾಡಿನಲ್ಲಿ ಕಥಾ ಪ್ರೇಮಿಗಳಿಗೆಲ್ಲ ತಿಳಿದಿರುವ ಹೆಸರು. ಈ (ಕಥೆಗಳಲ್ಲಿ)....ಒಂದು ತೆರದ ಬಿತ್ತರ ಒಂದು ರೀತಿಯ ಬಿನ್ನಾಣ ಕಾಣುತ್ತವೆ....ಕಥೆಗಾರನು ಕಥೆಯನ್ನು ಆರಂಭಿಸುವುದರಲ್ಲಿ, ನಡೆಸುವುದರಲ್ಲಿ, ಬೆಳೆಸುವುದರಲ್ಲಿ, ಉದ್ದಕ್ಕೂ ತನ್ನ ಕೈವಾಡವನ್ನು ತೋರಿಸುತ್ತಿರುತ್ತಾನೆ. ಮಾತಂತೂ ಯೋಚಿಸುತ್ತ ಆರಿಸುತ್ತ ಜೋಕೆಯಿಂದ ಸೇರಿಸಿದ ಮಾತೆನ್ನುವುದು ತೋರುತ್ತದೆ.... ಬರೆಯುವವನು ಈ ರಚನೆಯಲ್ಲಿ ಸುಖವನ್ನೇ ಅನುಭವಿಸಿರುತ್ತಾನೆ; ಅಭಿರುಚಿಯನ್ನರಿತ ತನ್ನ ಕುಶಲಕರ್ಮದಿಂದ ಓದುವವನಿಗೆ ಆನಂದವನ್ನುಂಟುಮಾಡುತ್ತಾನೆ. ಇದು ಸಾಹಿತ್ಯದ ಪ್ರೌಢಾವಸ್ಥೆಯ ಪದ್ಧತಿ.

ಆನಂದರವರು ತಮ್ಮ ಅನುಭವಕ್ಕೆ ಬಂದ ವಿಷಯವನ್ನು ತಮಗೆ ಸುಖವಾಗುವಂತೆ, ಓದುವವರಿಗೆ ರುಚಿಸುವಂತೆ, ವಸ್ತು ಕೆಡದಂತೆ, ಕಲೆ ಬೆಳೆಯುವಂತೆ, ಕಥೆಯ ರೂಪದಲ್ಲಿ ಹೇಳುತ್ತಿದ್ದಾರೆ. ಶ್ರೀ 'ಶ್ರೀನಿವಾಸ'ರ ಮುನ್ನುಡಿಯಿಂದ.

This is a fine collection of five short stories written by 'Ananda,' one of our distinguished short story writers........

'Ananda's' short stories have always a minuteness and perfection of technique, a

chiselled grace and chastity of language, an even and enchanting flow of narrative which it is hard to find anywhere else. There is a lyrical sweetness inherent in the theme and the treatment, which renews the beauty of many of his stories every time.

'Ananda' has an artist's vision of life; he has also the artist's gift of expression.

—Mr. V. K. Gokak in Triveni.

ಶ್ರೀಮಾನ್ 'ಆನಂದ'ರು ಈಗಾಗಲೇ ತಮ್ಮ ಕಥೆಗಳಿಂದ ಪ್ರಸಿದ್ಧಿಗೆ ಬಂದಿದ್ದಾರೆ....'ಆನಂದ'ರ ಶೈಲಿಯು ತಿಳಿ, ಸರಳ; ಭಾವಕ್ಕೆ ತಕ್ಕಂತೆ ಗಂಭೀರವೂ ಆಗುತ್ತದೆ....'ಆನಂದ'ರ ಕಥೆಗಳಲ್ಲಿ ವಿಷಯ ವಿಸ್ತಾರ ಕಡಿಮೆಯಿರಬಹುದು, ಅವರ ಲೋಕವು ಸಂಕುಚಿತವಾಗಿರಬಹುದು. ಆದರೆ ಅವರ ರೀತಿಯು ಈಗಾಗಲೇ ಒಂದು ಉಚ್ಚಸ್ಥಾನಕ್ಕೆ ಏರಿದೆ. —"ಪ್ರಬುದ್ಧ ಕರ್ಣಾಟಕ."

ಇವರ ಕಥೆಗಳಲ್ಲಿ ಶೃಂಗಾರ, ಹಾಸ್ಯ, ಕರುಣ ರಸಗಳಿಗೆ ಪ್ರಾಶಸ್ತ್ಯ ಹೆಚ್ಚೆಂದು ಕಂಡುಬರುತ್ತದೆ. ಆಯಾ ಸಂದರ್ಭಗಳಲ್ಲಿ ನಿರೂಪಿತವಾಗುವ ಈ ರಸಗಳು ತಮ್ಮ ಪೂರ್ಣ ಕಳೆಯಿಂದ ಪ್ರಕಾಶಿತವಾಗುತ್ತವೆ. ಶೃಂಗಾರ ರಸವನ್ನು ನಿರೂಪಿಸುವಾಗ ಲೌಕಿಕ ಗಾಂಭೀರ್ಯ ಮರ್ಯಾದೆಗಳಿಗೆ ಲೇಶಮಾತ್ರವೂ ಕುಂದುಂಟಾಗದಂತೆಯೂ, ಆದರೆ ಭಾವವು ಸ್ಪಷ್ಟವಾಗಿ ಮನೋರಂಜಕವಾಗುವಂತೆಯೂ ರಚಿಸುವ ಜಾಣ್ಮೆಯು ಇವರ ಲೇಖನಿಗೆ ಇದೆ. —"ಸುಬೋಧ."

**ನವಿಲು (೧—೨)**

—ಕೆ. ವಿ. ಪುಟ್ಟಪ್ಪ, ಎಂ.ಎ.

| | | |
|---|---|---|
| ೧ನೆಯ ಭಾಗ ಕ್ರೌನ್ ೮. ೨೦+೧೨೮ | .. | ೧—೦—೦ |
| ೨ನೆಯ ಭಾಗ ಕ್ರೌನ್ ೮. ೧೮+೧೦೪+೪ | .. | ೧—೦—೦ |
| ೧-೨ನೆಯ ಭಾಗಗಳು ಒಟ್ಟಿಗೆ ಕ್ಯಾಲಿಕೊ ಬೈಂಡಾದದ್ದು | .. | ೨—೮—೦ |

ಶ್ರೀಮಾನ್ ಪುಟ್ಟಪ್ಪನವರನ್ನೂ ಅವರ ಕೃತಿಗಳನ್ನೂ ಕನ್ನಡಿಗರಿಗೆ ಹೊಸದಾಗಿ ಪರಿಚಯ ಮಾಡಿಕೊಡಬೇಕಾದ್ದಿಲ್ಲ. ಪುಟ್ಟಪ್ಪನವರ ಹೆಸರನ್ನು ಕೇಳದ ಕಾವ್ಯಪ್ರಿಯರು ಕನ್ನಡ ನಾಡಿನಲ್ಲಿಲ್ಲ. ಅವರ ಕೃತಿಗಳನ್ನು ಓದದವರು ಅಥವಾ ಕೇಳದವರು ಕನ್ನಡಿಗರಲ್ಲಿ ಅಪೂರ್ವ. ಹಲವು ಭಾಷಾ ಸಾಹಿತ್ಯಗಳಲ್ಲಿ ವಿದ್ವಾಂಸರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಪುಟ್ಟಪ್ಪನವರ ಪ್ರಥಮ ಕವನ ಸಂಗ್ರಹವಾದ 'ಕೊಳಲಿ'ಗೆ ಮುನ್ನುಡಿ ಬರೆಯುವುದು ತಮಗೊಂದು 'ಹೆಮ್ಮೆಯ ವಿಷಯ'ವೆಂದು ಹೇಳಿ—"ಇವರ ಕವನಗಳನ್ನು ಸರಸ್ವತೀದೇವಿಯೇ ನುಡಿಸು

ತ್ತಿರುವಳೆಂಬುದರಲ್ಲಿ ಸಂದೇಹವಿಲ್ಲ....ಪುಟ್ಟಪ್ಪನವರ ಕವಿತ್ವಗಳೆಲ್ಲಾ ಹೃದಯ ದಿಂದ ಬಂದುವೇ; ನೇರವಾಗಿ ಹೃದಯಕ್ಕೆ ಹೋಗತಕ್ಕುವೆ....ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು........ಪುಟ್ಟಪ್ಪನವರ ಉತ್ತಮ ಕವನ ಗಳಲ್ಲಿ....ಜೀವವಿದೆ; ಆತ್ಮವಿದೆ; ಇರುವುದರಿಂದ ಅಮೃತತ್ವದ ಸಾರವಿದೆ"—ಇವೇ ಮುಂತಾದ ಉದಾರವಾಕ್ಯಗಳಿಂದ ಶ್ರೀಮಾನ್ ಪುಟ್ಟಪ್ಪನವರ ಕೃತಿಗಳನ್ನು ಕನ್ನಡ ಜನರಿಗೆ ಪರಿಚಯಮಾಡಿಕೊಟ್ಟರು. ಅಂದು ಹೇಳಿದ ಮಾತುಗಳು ಇಂದಿಗೂ ನಿಜವಾಗಿವೆ. ಅದಕ್ಕೆ ಈ ಕವನ ಸಂಗ್ರಹವೇ ಸಾಕ್ಷಿ.

'ನವಿಲು'—ಪುಟ್ಟಪ್ಪನವರ ಕವನ ಸಂಗ್ರಹಗಳಲ್ಲಿ ಮೂರನೆಯದು ಮತ್ತು ಅತ್ಯಂತ ವ್ಯಾಪಕವಾದುದು—'ವಿವಿಧ ವರ್ಣಪೂರ್ಣವಾದುದು.' ಇದುವರೆಗೆ ಅಚ್ಚಾಗದಿರುವ ಅನೇಕ ಕವನಗಳೂ ಪುಟ್ಟಪ್ಪನವರು ಆಗಾಗ್ಗೆ ಸಭೆಗಳಲ್ಲಿ ಓದಿ ಜನರ ಪ್ರೀತಿಗೆ ಪಾತ್ರವಾಗಿರುವ—ಮಲೆನಾಡಿಗೆ ಬಾ—ಆಹ್ವಾನ ವಾಣಿ—ಬಹು ಮಾನ—ಸ್ವಾತಂತ್ರ್ಯ—ಧರ್ಮ—'ರಸೋವೈಸಃ'—ವಿಜ್ಞಾನಿ—ಶಿಲಾತಪಸ್ವಿ—ಮರದ ನೆಳಲು—ಕಲ್ಲು—ಬಂಜೆಯ ಕನಸು—ಕಲಾಸುಂದರಿ—ಕುಣಿಯುವಂತೆ ಮತ್ತಶಿಖಿ—ಮೂರ್ತಿಯ ಬೆಳ್ಮುಗಿಲು—ಸಬಕ್ತಗೀನ್—ಕುಕ್ಕನಳ್ಳಿಕೆರೆಯ ಮೇಲೆ—ಜೋಗ—ಕಾಮದೇವ—ಕೇಶಿರಾಜ—ಗೂಬೆ—ವಿಮರ್ಶಕ—ಕಿಟ್ಟಯ್ಯ—ಪೂವಮ್ಮ—ಕಾಲ—ತುಂಗೆ—ಸಂಸ್ಕೃತಮಾತೆ—ಉಷೆಯು ನಿಶೆಯ ಚುಂಬಿಸೆ—ಕಲ್ಪನಾ ಸುಂದರಿ—ನವೀನ—ಇವೇ ಮೊದಲಾದ ಕವನಗಳು ಈ ಸಂಗ್ರಹದಲ್ಲಿ ಮೊದಲ ಬಾರಿಗೆ ಸಂಗ್ರಹಿಸಲ್ಪಟ್ಟಿವೆ. 'ಕೊಳಲಿ'ನಲ್ಲಿ ಮೂಡಿದ ಕಲೆಯು ಇಲ್ಲಿ ಬೆಳೆಯುತ್ತಿದೆ, ಆಳವಾಗುತ್ತಿದೆ, ಭಾವಪರಿಪೂರ್ಣವಾಗುತ್ತಿದೆ.

ಈ ಸಂಗ್ರಹದ ವಿಸ್ತಾರವಾದ ಮತ್ತು ಉದಾತ್ತವಾದ ಮುನ್ನುಡಿಯಲ್ಲಿ ಶ್ರೀಮಾನ್ ಪುಟ್ಟಪ್ಪನವರ ಕಾವ್ಯವಿಷಯಕವಾದ ಅನೇಕ ವಿಚಾರಗಳನ್ನು ನಿಷ್ಕೃಷ್ಟವಾದ ರೀತಿಯಲ್ಲಿ ತಮ್ಮ ಅಸದೃಶವಾದ ಪ್ರವಾಹಶೈಲಿಯಲ್ಲಿ ವಿವರಿಸಿದ್ದಾರೆ.

**ಪಾತಾಳದಲ್ಲಿ ಪಾಪಚ್ಚಿ** (ಸಚಿತ್ರ)

—ನಾ. ಕಸ್ತೂರಿ, ಎಂ.ಎ., ಬಿ.ಎಲ್.

| | | |
|---|---|---|
| ಕ್ರೌನ್ ೮ ೮+೧೦೮+೮ | .. | ೧—೦—೦ |
| ಕ್ಯಾಲಿಕೊ ಪ್ರತಿ | .. | ೧—೮—೦ |

'ಲೂಯಿ ಕರೋಲ್' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿರುವ ಚಾರಲ್ಸ್ ಲುಟ್ವಿಗ್ ಡಾಡ್ಜಸನ್ ಎಂಬವರು ಬರೆದ "Alice's Adventures in Wonderland" ಎಂಬ ಸುಪ್ರಸಿದ್ಧ ಇಂಗ್ಲಿಷ್ ಗ್ರಂಥದ ಆಧಾರದಮೇಲೆ ಈ ಪುಸ್ತಕವು ರಚಿತವಾಗಿದೆ. ಡಾಡ್ಜಸನ್ನರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರ ಬೋಧಕರಾಗಿದ್ದರು. ಡಾಡ್ಜಸನ್ನರು

ಮೇಲೆ ಮೇಲೆ ಗಂಭೀರಸ್ವಭಾವದವರಾಗಿ ತೋರಿದರೂ ಸ್ವಭಾವತಃ ವಿನೋದ ಪ್ರಿಯರು. ಅವರು ವಿದ್ಯಾರ್ಥಿಯಾಗಿದ್ದಾಗಲೆ ಸ್ನೇಹಿತರ ಮೇಲೆ ಕಥೆಗಳನ್ನೂ ತಮಾಷೆಯ ಪದ್ಯಗಳನ್ನೂ ಕಟ್ಟಿ ಗೇಲಿ ಎಬ್ಬಿಸುತ್ತಿದ್ದರಂತೆ. ಅನೇಕ ವರ್ಷಗಳ ಅಧ್ಯಾಪಕವೃತ್ತಿಯೂ ಅವರ ಉತ್ಸಾಹವನ್ನು ತಗ್ಗಿಸಲಿಲ್ಲ. ನೀರಸವಾದ ಗಣಿತ ಶಾಸ್ತ್ರವೂ ಇವರ ಕೈಯಲ್ಲಿ ರಸಮಯವಾಗುತ್ತಿತ್ತು; ಚದುರಂಗದ ರಾಜ ಮಂತ್ರಿ ಕಾಲಾಳುಗಳು ಇವರ ಕಥಾಕ್ಷೇತ್ರದಲ್ಲಿ ನಿಜವಾದ ರಾಜಮಂತ್ರಿ ಕಾಲಾಳುಗಳಾಗುತ್ತಿದ್ದರು. ಇವರಿಗೆ ಮಕ್ಕಳ ಸಹವಾಸವೆಂದರೆ ಬಹಳ ಇಷ್ಟ. ಮಕ್ಕಳ ಜೊತೆಯಲ್ಲಿಯೇ ಇದ್ದುಕೊಂಡು ಅವರಿಗೆ ತಮಾಷೆಯಾದ ಕಥೆಗಳನ್ನು ಹೇಳುತ್ತಾ ಮಾಂತ್ರಿಕನಂತೆ ಮಕ್ಕಳನ್ನು ಮರುಳುಮಾಡುತ್ತಿದ್ದರು. ಮೊಲದ ಬಿಲದಲ್ಲಿ ಅದ್ಭುತವಾದವಿನೋದ ಪ್ರಪಂಚವನ್ನು ಸೃಷ್ಟಿಸುವ ಕಲ್ಪನಾ ಸಾಮರ್ಥ್ಯ ಇವರಿಗೆ ಇತ್ತು. ಇದರ ಪರಿಣಾಮವಾಗಿಯೆ "Alices Adventures in Wonderland" ಎಂಬ ಗ್ರಂಥವು ಹುಟ್ಟಿತು. ೧೮೬೫ರಲ್ಲಿ ಈ ಗ್ರಂಥವು ಪ್ರಕಟವಾಗಿ ಕೂಡಲೆ ಪ್ರಸಿದ್ಧಿಯನ್ನು ಹೊಂದಿತು. ಮಕ್ಕಳೂ ವಯಸ್ಕರೂ ಒಂದೇ ಸಮನಾಗಿ ಈ ಕಥೆಯನ್ನು ಓದಿ ಓದಿ ಸಂತೋಷಪಟ್ಟರು. ಅಂದಿನಿಂದ ಈ ಪುಸ್ತಕವು ಇಂಗ್ಲಿಷ್ ಬಲ್ಲವರನ್ನೆಲ್ಲ ಸಂತೋಷಪಡಿಸಿ ಇಂದಿಗೂ ಅನುಪಮವಾದ ಮಕ್ಕಳ ಕಥೆಯಾಗಿ ಉಳಿದಿದೆ. ಇದು ಅನೇಕ ಭಾಷೆಗಳಿಗೆ ಭಾಷಾಂತರವಾಗಿ ಅನೇಕ ಜನಾಂಗಗಳ ಪ್ರೀತಿಗೆ ಪಾತ್ರವಾಗಿದೆ.

ಈ ಚಿರಮನೋಹರವಾದ ಗ್ರಂಥವನ್ನು ಶ್ರೀಮಾನ್ ಕಸ್ತೂರಿಯವರು ಕನ್ನಡಕ್ಕೆ ರೂಪಾಂತರಿಸಿ ಕನ್ನಡಿಗರನ್ನು ಚಿರಋಣಿಗಳನ್ನಾಗಿ ಮಾಡಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರ ಹೊಂದುವ ಮೂಲದ ಸನ್ನಿವೇಶಗಳನ್ನೂ ಇಂಗ್ಲಿಷ್ ಬಲ್ಲವರಿಗೆ ಮಾತ್ರ ರುಚಿಸಬಹುದಾದ ಹಾಸ್ಯಗಳನ್ನೂ ಈ ರೂಪಾಂತರದಲ್ಲಿ ಅಲ್ಲಲ್ಲಿ ಬದಲಾಯಿಸಿ ಕಥೆಯನ್ನು ಕೊಂಚ ಮಾರ್ಪಡಿಸಿಕೊಂಡಿದ್ದಾರೆ. ಈ ಮಾರ್ಪಾಡಿನಿಂದ ಕಥೆಯು ನಮ್ಮ ಜನರಿಗೆ ಸಹಜವಾಗಿ ತೋರುತ್ತದೆಯೆಂದೂ ಮೂಲದ ಸ್ವಾರಸ್ಯಕ್ಕೆ ಭಂಗಬಂದಿಲ್ಲವೆಂದೂ ಭಾವಿಸುತ್ತೇವೆ.

ಶ್ರೀಮಾನ್ ಎಂ. ವಿ. ಸೀತಾರಾಮಯ್ಯ, ಎಂ.ಎ. ಅವರು ಈ ಪುಸ್ತಕಕ್ಕೆ ಚಿತ್ರಗಳನ್ನು ಬರೆದುಕೊಟ್ಟು, ಈ ಪುಸ್ತಕವನ್ನು ಹೆಚ್ಚು ಆಕರ್ಷಣೀಯವಾಗಿ ಮಾಡಿದ್ದಾರೆ.

---

ಕರ್ಣಾಟಕ ಸಂಘ, ಶಿವಮೊಗ್ಗ

# ಕಾರ್ಯನಿರ್ವಾಹಕ ಮಂಡಲಿ.

## ಅಧ್ಯಕ್ಷರು :

ಮ॥ ರಾ॥ ಶ್ರೀಗಳಾದ—

೧. ಹೊಸೂಡಿ ವೆಂಕಟಶಾಸ್ತ್ರಿಗಳು

## ಸದಸ್ಯರು :

೨. ಎಸ್. ವಿಷ್ಣುಭಟ್ಟರು
೩. ಎಸ್. ವಿ. ಕೃಷ್ಣಮೂರ್ತಿರಾವ್
೪. ಆರ್. ಕೆ. ಜಯತೀರ್ಥಾಚಾರ್ಯರವರು
೫. ಜಿ. ಚನ್ನಪ್ಪನವರು
೬. ಹೆಚ್. ಲಿಂಗಪ್ಪನವರು
೭. ಬಿ. ನಾರಾಯಣಮೂರ್ತಿಗಳು
೮. ಸಿ. ಎನ್. ಶ್ರೀನಿವಾಸಮೂರ್ತಿಗಳು
೯. ಗುಲಾಂ ಅಬೀದ್‌ರವರು
೧೦. ಎಸ್. ವಿ. ಪರಮೇಶ್ವರಭಟ್ಟರು
೧೧. ಕೆರೂಡಿ ಕೃಷ್ಣಮೂರ್ತಿಗಳು
೧೨. ವಸುದೇವ ಭೂಪಾಲಂರವರು
೧೩. ಕೆ. ಎನ್. ದತ್ತಾತ್ರಿಗಳು

## ಕಾರ್ಯದರ್ಶಿ :

೧೪. ಎಸ್. ನರಶಿಂಹಮೂರ್ತಿಗಳು

## ಸಹಾಯಕ ಕಾರ್ಯದರ್ಶಿ :

೧೫. ಟಿ. ವಿ. ವೆಂಕಟರಾಮಾಶಾಸ್ತ್ರಿಗಳು

## ಖಜಾಂಚಿ :

೧೬. ಬಿ. ಎನ್. ರಾಘವಯ್ಯನವರು

# ಕರ್ಣಾಟಕ ಸಂಘ, ಶಿವಮೊಗ್ಗ.

## ಪ್ರಕಟನೆಗಳು

ಟಿ. ಎಸ್. ವೆಂಕಣ್ಣಯ್ಯ }
ಡಿ. ಎಲ್. ನರಸಿಂಹಾಚಾರ್ } ರಾಘವಾಂಕ ಕವಿಯ ಸಿದ್ಧರಾಮಚಾರಿತ್ರ

**ಕೆ. ವಿ. ಪುಟ್ಟಪ್ಪ, ಬಿ.ಎ. :**

ರಕ್ತಾಕ್ಷಿ (ನಾಟಕ)
ಪಾಂಚಜನ್ಯ (ಕವನ ಸಂಗ್ರಹ)
ನವಿಲು-೧ (ಕವನ ಸಂಗ್ರಹ)
ನವಿಲು-೨ (ಕವನ ಸಂಗ್ರಹ)
ನೆಳಲು ಬೆಳಕು (ಕವನ ಸಂಗ್ರಹ)

**ಜಿ. ಪಿ. ರಾಜರತ್ನಂ, ಎಂ.ಎ. :**

ಗಂಡುಗೊಡಲಿ (ನಾಟಕ)
ಹನಿಗಳು (ಲಘು ಚಿತ್ರಗಳು)
ಶಕಾರನ ಶಾರೋಟು (ದೃಶ್ಯಗಳ ಸಂಗ್ರಹ)

**ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು :**

ಕನ್ನಡ ಮೇಘಸಂದೇಶ (ಪದ್ಯಕಾವ್ಯ)

**ಆನಂದ—**

ಮಾಟಗಾತಿ (ಸಣ್ಣ ಕಥೆಗಳು)

**ನಾ. ಕಸ್ತೂರಿ, ಎಂ.ಎ., ಬಿ.ಎಲ್. :**

ಪಾತಾಳದಲ್ಲಿ ಪಾಪಚ್ಚಿ (ಬಾಲಸಾಹಿತ್ಯ ಕಥೆ)

**ಗೊರೂರು ರಾಮಸ್ವಾಮಿ ಅಯ್ಯಂಗಾರ್ :** (ಪುನರ್ಜನ್ಮ ಕಾದಂಬರಿ)

**ಎಲ್ಲ ಕನ್ನಡ ಪುಸ್ತಕಗಳೂ, ಕನ್ನಡ ಮಾಸಪತ್ರಿಕೆಗಳೂ**
[illegible]